ವಿಶ್ವಮಧ್ವಮಹಾಪರಿಷತ್‌ಗ್ರಂಥಮಾಲಾ - 57

ಫಲವಿದು ಬಾಳ್ದುದಕೆ...




ವಿವರಣೆ - ಪಂ.ಪ್ರಮೋದಾಚಾರ್ಯ ಪೂಜಾರ

ಪ್ರಕಾಶನ - ವಿಶ್ವಮಧ್ವಮಹಾಪರಿಷತ್

ಶ್ರೀ ಜಗನ್ನಾಥದಾಸಾರ್ಯ ವಿರಚಿತ

ಫಲವಿದುಬಾಳ್ದುದಕೆ

(ವಿಮರ್ಶಾತ್ಮಕ ವಿವರಣೆಯೊಂದಿಗೆ.......)



ಅನುವಾದಕರು:

ಶ್ರೀಶಾ (ಪ್ರಮೋದಾ)ಚಾರ್ಯ ಪೂಜಾರ

ಪ್ರಕಾಶನ :

ಶ್ರೀಮಜ್ಜಗದ್ಗುರು ಶ್ರೀಮನ್ ಮಧ್ವಾಚಾರ್ಯ ಮೂಲಮಹಾಸಂಸ್ಥಾನ ಉತ್ತರಾದಿಮಠ

ವಿಶ್ವಮಧ್ವಮಹಾಪರಿಷತ್

ಶ್ರೀಜಯತೀರ್ಥವಿದ್ಯಾಪೀಠ, ಬೆಂಗಳೂರು – 04

ಫಲವಿದುಬಾಳ್ವುದಕೆ : ಶ್ರೀ ಜಗನ್ನಾಥದಾಸರು ವಿರಚಿತ ಕೃತಿ

ಭಾವಾನುವಾದ : ಶ್ರೀಶಾ (ಪ್ರಮೋದಾ)ಚಾರ್ಯ ಪೂಜಾರ
ಜ್ಞಾನದಾಯಿನಿ ಪಾಠಶಾಲೆ, ಹನುಮಸಾಗರ


ಮೊದಲನೆಯ ಮುದ್ರಣ	: 2008	1000 Copies
ಎರಡನೆಯ ಮುದ್ರಣ	: 2009	
ಮೂರನೆಯ ಮುದ್ರಣ	: 2010	
ನಾಲ್ಕನೆಯ ಮುದ್ರಣ	: 2014	

ಪುಟಗಳು : 8 + 78

ಬೆಲೆ : ರೂ. 50/-

ಪ್ರಕಾಶನ : ವಿಶ್ವಮಧ್ವಮಹಾಪರಿಷತ್
ಉತ್ತರಾದಿಮಠ, ಬಸವನಗುಡಿ, ಬೆಂಗಳೂರು - 4
ಫೋನ್ : 080-26603692

ಅಕ್ಷರ ಜೋಡಣೆ : ತುಲಸಿ ಇಂಪ್ರೆಷನ್ಸ್
ಮುಖಪುಟ ವಿನ್ಯಾಸ : ಶ್ರೀ ಕೆ.ಎಮ್. ಶೇಷಗಿರಿ
ಮುದ್ರಕರು : ವಾಗರ್ಥ ಮುದ್ರಣಾಲಯ



ಶ್ರೀಮಜ್ಜಗದ್ಗುರುಮಧ್ವಾಚಾರ್ಯಮೂಲಮಹಾಸಂಸ್ಥಾನ
ಶ್ರೀಮದುತ್ತರಾದಿಮಠಾಧೀಶರಾದ, ಶ್ರೀ 1008 ಶ್ರೀ ಸತ್ಯಾತ್ಮತೀರ್ಥಶ್ರೀಪಾದಂಗಳವರ
ಅಡಿದಾವರೆಗಳಲ್ಲಿ ಭಕ್ತಿಪೂರ್ವಕ ಸಮರ್ಪಣೆ.

॥ ಶ್ರೀದಿಗ್ವಿಜಯರಾಮೋ ವಿಜಯತೇ ॥

ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನ

ಶ್ರೀಮದುತ್ತರಾದಿಮಠಾಧೀಶರಾದ

ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥಶ್ರೀಪಾದಂಗಳವರ

ಅನುಗ್ರಹ ಸಂದೇಶ

ಯಸ್ಯೇ ಕಥಾಸೇವಕ ಏವ ಸರ್ವದಾ ಸದಾರತಿಸ್ತ್ವಯ್ಯಚಲೈಕಭಕ್ತಿಃ ।
ಸ ಜೀವಮಾನೋ ನ ಪರಃ ....

ಎಂದು ಹನುಮಂತದೇವರು ತಿಳಿಸಿದಂತೆ ಸದಾಕಾಲ ಹರಿಯ ಗುಣಗಳನ್ನು ಅನುಸಂಧಾನ ಮಾಡುತ್ತಾ ಹರಿಯ ಕಥಾಶ್ರವಣವನ್ನು ಮಾಡುತ್ತಾ ಉಸಿರಾಡುವವನೇ ನಿಜವಾಗಿ ಬದುಕಿದಂತೆ. ಇಲ್ಲದಿದ್ದರೆ ಅವನು ಉಸಿರಾಡುವ ಶವ ಮಾತ್ರ.

ಇದನ್ನೇ ಮಹಾಮಹಿಮರಾದ ಶ್ರೀಜಗನ್ನಾಥದಾಸರು - ಸಿರಿನಿಲಯನ ಗುಣಗಳ ತಿಳಿದು ಭಜಿಸುವುದೇ ಫಲವಿದು ಬಾಳ್ದುದಕೆ ಎಂದು ಹಾಡಿದ್ದಾರೆ.

ಜಗನ್ನಾಥದಾಸರ ಈ ಪುಟ್ಟ ಕೃತಿ ಸಾಧಕನಿಗೆ ಸಾಧನೆಗಳನ್ನು ಸುಂದರಾವಾಗಿ ಬೋಧಿಸುತ್ತದೆ. ಕರ್ತವ್ಯ ವಿಮುಖರಿಗೆ ಕರ್ತವ್ಯಪ್ರಜ್ಞೆಯನ್ನು ಮೂಡಿಸುತ್ತದೆ. ಈ ಭಕ್ತಿ-ಶ್ರದ್ಧೆಗಳಿಂದ ಈ ಕೃತಿಯ ಶ್ರವಣ-ಪಠನಗಳನ್ನು ಮಾಡಿದಲ್ಲಿ ಮಾನವನ ಮನೋಭೂಮಿಯಲ್ಲಿ ಮಾಧವನ ಮಹಿಮೆಯ ಅರಿವಿನ ಬೀಜಾರೋಪವಾಗಿ ಪರಮಾತ್ಮಪ್ರೇಮದ ಚಿಗುರೊಡೆಯುತ್ತದೆ. ಇದರಲ್ಲಿ ಹೇಳಿದಂತೆ ಅನುಷ್ಠಾನ ಮಾಡಿದರೆ ಆ ಪ್ರೇಮವು ಹೆಮ್ಮರವಾಗುವುದರಲ್ಲಿ ಸಂದೇಹವಿಲ್ಲ.

ಇಂತಹ ಈ ಕೃತಿಯ ಭಾವಾನುವಾದವನ್ನು ನಮ್ಮ ಪ್ರಿಯಶಿಷ್ಯರಾದ ಪಂ.ಪ್ರಮೋದಾಚಾರ್ಯ ಪೂಜಾರ ಇವರು ಸುಂದರವಾಗಿ, ಪ್ರಾಸಬದ್ಧವಾದ ತಮ್ಮ ಶೈಲಿಯಲ್ಲಿ , ವಿಶೇಷ ಅರ್ಥಗಳನ್ನು ವಿವರಿಸುತ್ತಾ ಮಾಡಿದ್ದಾರೆ. ಇದರ ಲಾಭವನ್ನು ಎಲ್ಲರೂ ಪಡೆಯುವಂತಾಗಬೇಕು. ಪಂ.ಪ್ರಮೋದಾಚಾರ್ಯ ಇವರಿಗೆ ನಮ್ಮ ಉಪಾಸ್ಯ ಮೂರ್ತಿಗಳಾದ ಶ್ರೀಮೂಲರಾಮ ದಿಗ್ವಿಜಯರಾಮ ವೇದವ್ಯಾಸದೇವರು ಜ್ಞಾನಭಕ್ತಿ ವೈರಾಗ್ಯಾದಿಗಳನ್ನು ಕೊಟ್ಟು ಇವರಿಂದ ಇದೇ ತರಹದ ಸೇವೆಯನ್ನು, ಧರ್ಮಪ್ರಸಾರ ಕಾರ್ಯವನ್ನು ಮಾಡಿಸಲಿ ಎಂದು ಪ್ರಾರ್ಥಿಸುತ್ತೇವೆ.

ಶ್ರೀ1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು
ಶ್ರೀ ಉತ್ತರಾದಿ ಮಠ.

"ಶ್ರೀಶಂ ವಂದೇ"

"ಶ್ರೀ ಭಾರತೀರಮಣಾಯ ನಮಃ"

"ಶ್ರೀ ಗುರುಭ್ಯೋ ನಮಃ"

- ಓದುವ ಮೊದಲು -

ಶ್ರೀಮಧ್ವರ ಚಿಕ್ಕ ಕೃತಿ. ಅಣುಭಾಷ್ಯ. ಚೊಕ್ಕ ಕೃತಿ. ಅದರ ವಿಷಯ "ಸರ್ವಶಾಸ್ತ್ರಾರ್ಥ ಸಂಗ್ರಹ", ಮಿತ ಮಾತುಗಳಲ್ಲಿ ಅಮಿತಾರ್ಥ ಶ್ಲೋಕ ಮೂವತ್ತೆರಡು ಭಾಷೆ ಸಂಸ್ಕೃತ ಮಧ್ವರ ಮಾತಿನ ಅಂತರಾರ್ಥ ವಿಶ್ವಕ್ಕೆ ತಿಳಿಸಿದವರು ಶ್ರೀ ರಾಘವೇಂದ್ರರು. 'ತತ್ತ್ವಮಂಜರಿ' ಸಂಕ್ಷಿಪ್ತ ಕೃತಿಯ ವಿಸ್ತೃತ ವ್ಯಾಖ್ಯಾನ. ಇದೇ ಧಾಟಿಯಲ್ಲಿ ಮೂಡಿಬಂದ ಕನ್ನಡ ಕೃತಿ "ಅಣು ಹರಿಕಥಾಮೃತಸಾರ, ಕನ್ನಡದಲ್ಲಿ "ಸರ್ವಶಾಸ್ತ್ರಾರ್ಥ ಸಂಗ್ರಹ". ಇದು ಜಗನ್ನಾಥದಾಸರ ಕೃತಿ. ಅವರದ್ದೇ ಆದ ಬೃಹತ್ ಕೃತಿ ಮಹತ್ ಕೃತಿ "ಹರಿಕಥಾಮೃತಸಾರ". ಅದರ ಅಣುಕೃತಿಯೇ ಈ "ಫಲವಿದು ಬಾಳ್ದುದಕೆ" ಪದ್ಯ. ಇದೇ "ಅಣು ಹರಿಕಥಾಮೃತಸಾರ". ಇದಕ್ಕೊಂದು "ಹರಿತತ್ತ್ವಮಂಜರಿ". ಅಣುಕೃತಿಯ ವಿಸ್ತೃತ ವ್ಯಾಖ್ಯಾನ. ಇದನ್ನು ಬರೆದವರು ಪಂ. ಪ್ರಮೋದಾಚಾರ್ಯ ಪೂಜಾರರು.

"ಫಲವಿದು ಬಾಳ್ದುದಕೆ" ಇಲ್ಲಿವೆ ಒಡಲು ತುಂಬಿದ ನುಡಿಗಳು. ಇಲ್ಲಿಯ ನುಡಿಯ ಒಡಲಿನಲ್ಲಿ ತುಂಬಿದ ಅನಂತ ಅರ್ಥಗಳನ್ನು ಬಯಲಿಗೆ ತಂದವರು ಪಂ. ಪ್ರಮೋದಾಚಾರ್ಯರು. ಇಲ್ಲಿ ಇಪ್ಪತ್ತೇಳು ನುಡಿಗಳಿವೆ. ಕೃತಿ ಕಿರಿದೆನಿಸಿದರೂ ಇಲ್ಲಿ ಸರ್ವಸ್ವವಿದೆ. ಸಮಸ್ತ ಶಾಸ್ತ್ರಸಂಗ್ರಹವಿದೆ. ಸಿದ್ಧಾಂತದ ನಿರೂಪಣೆ ಇದೆ. ಪ್ರಮೇಯಗಳ ಪುಂಜವಿದೆ. ಸಾಧನದ ದಾರಿ ಇದೆ. ಆಧ್ಯಾತ್ಮ ಸಾಧನದ ಮಾರ್ಗದರ್ಶನವಿದೆ. ಅನುಸಂಧಾನದ ಬಗೆಗಳಿವೆ. ಉಪಾಸನೆಯ ದೃಷ್ಟಿ ಇದೆ. ಬದುಕಿನ ಸಾರ್ಥಕತೆಯ ದೃಷ್ಟಿ ಇದೆ. ಎಂತಹ ನಂಬಿಕೆ, ತಿಳುವಳಿಕೆಯಲ್ಲಿ ಬಾಳಬೇಕೆಂಬ ಧ್ಯೇಯವಿದೆ. ಬದುಕು ಭಗವನ್ಮಯವಾಗುವ ಕಲೆ ಇದೆ. ನೆಲೆ, ನಿಲುವುಗಳಿವೆ. ಇದು "ಫಲವಿದು ಬಾಳ್ದುದಕೆ" ಎಂಬ ನಕ್ಷತ್ರಮಾಲಿಕಾ. ಇದು ಅರ್ಥಗಳ ನಿಧಿ. ಪ್ರಮೇಯಗಳ ಗಣಿ. ಸರ್ವಮೂಲ ಸುಧಾದಿಗಳನ್ನು ಚೆನ್ನಾಗಿ ಓದಿದವರು ಮಾತ್ರ ಬಿಚ್ಚಬಹುದಾದ ಗಂಟು. ಮಾಡಿಸಬಹುದಾದ ನಿಧಿ ದರ್ಶನ.

ಆಳವಾದ ಶಾಸ್ತ್ರಾಧ್ಯಯನ, ಉತ್ತಮ ಪ್ರತಿಭೆ, ಸಂಸ್ಕೃತ ಸಮನಾಗಿ ಕನ್ನಡ

ಭಾಷೆಯ ಜ್ಞಾನ, ಶಬ್ದಸಂಪತ್ತು ಇದ್ದವರು ಒಡೆಯಬಹುದಾದ ಭಂಡಾರವಿದು. ಕೇವಲ ಕನ್ನಡದ ಬಲ ಬರೀ ಕಬ್ಬು ಚೀಪಿದಂತೆ. ಅಲ್ಲಿ ಪೂರ್ಣ ರಸಾನುಭವವಿಲ್ಲ, ಹಲ್ಲಿನಲ್ಲಿ ಅಗಿದು ಜಗಿದಾಗ ಮಾತ್ರ ಕಬ್ಬಿನ ರುಚಿ ರಸಗಳ ಜ್ಞಾನ. ಅಂತೂ ಜಗನ್ನಾಥದಾಸರ ಈ ಶಬ್ದ ಭಂಡಾರ ಸೂರೆಗೈಯಲು, ಅವರ ಕೃತಿಯ ಪ್ರಮೇಯನಿಧಿ ತೋರಿಸಲು ದೊರೆತ ಸಮರ್ಥ ತರುಣ ವಿದ್ವಾಂಸರು ಶ್ರೀ ಪ್ರಮೋದಾಚಾರ್ಯರು. ಶ್ರೀ ಶ್ರೀ ಸತ್ಯಾತ್ಮತೀರ್ಥರ ವಿದ್ಯಾಶಿಷ್ಯರು. ಪಾಂಡಿತ್ಯ, ಪ್ರತಿಭೆ, ಅಧ್ಯಯನಶೀಲತೆ, ವ್ಯಾಖ್ಯಾನ ಕೌಶಲ್ಯ, ಸಮರ್ಥ ಲೇಖನಶೈಲಿ ಹೊಂದಿದವರು. ಅವರ ವ್ಯಾಖ್ಯಾನ ಅತ್ಯುತ್ತಮವಾಗಿ ಮೂಡಿಬಂದಿದೆ. ಇದಕ್ಕಾಗಿ ಅವರಿಗೆ ಅಭಿನಂದನೆಗಳು. ಇದು ಅವರ ಕಾರ್ಯವನ್ನು ಕುರಿತಾಯಿತು.

ಇನ್ನು ಸ್ವಲ್ಪ ಈ ಕೃತಿಯ ಬಗ್ಗೆ.

ಶ್ರೀಮಧ್ವರಿಂದಾರಂಭಿಸಿ ಗೋಪಾಲದಾಸರವರೆಗೆ ಬಿಡಿ ಬಿಡಿಯಾಗಿ ಭಾವಗೀತೆಗಳ ರೂಪದಲ್ಲಿ ಹರಿದಾಸಸಾಹಿತ್ಯ ಬೆಳೆದು ಬಂದಿತು. ಲಕ್ಷಾವಧಿ ಹಾಡುಗಬ್ಬಗಳು, ದೇವರನಾಮ, ಸುಳಾದಿ, ಉಗಾಭೋಗಗಳ ವಿವಿಧ ರೂಪದಲ್ಲಿ ಹುಟ್ಟಿಬಂದವು. ಆದರೆ ಸಮಗ್ರ ತತ್ತ್ವ ಪ್ರಪಂಚದ ಸಾರಸರ್ವಸ್ವದ ಅಖಂಡಕೃತಿ ಮೊದಲು ಉದಯಿಸಿದ್ದು ಶ್ರೀ ಜಗನ್ನಾಥದಾಸರಿಂದ. ಅದುವೇ "ಹರಿಕಥಾಮೃತಸಾರ". ಮಾಧ್ವರ ಮನೆಮಾತಾದ ಕೃತಿ. ಜನರ ಬಾಯಲ್ಲಿ ಸದಾ ನೆಲೆಸಿದ ಕೃತಿ. ಮಹಿಳೆಯರ ಮೂಕತೆಗೆ ಬಾಯಿಕೊಟ್ಟ ಕೃತಿ. ವೇದಶಾಸ್ತ್ರ ಇತಿಹಾಸ ಪುರಾಣಗಳ ಆರ್ಷ ವಿಚಾರಗಳೆಲ್ಲ ಎಲ್ಲರ ಹೃದಯಕ್ಕೆ ಹತ್ತಿರವಾಗುವಂತೆ ಮಾಡಿದ್ದು ಈ ಕೃತಿ. ಸರ್ವಮೂಲ ವಿಚಾರಗಳು ಈ ಕೃತಿಯ ಮೂಲಕ ಇಂದಿನ ಸಮಾಜದೊಟ್ಟಿಗೆ ಮಾತನಾಡುವವು. ಷಟ್ಪದಿಯಲ್ಲಿ ರಚಿಸಲ್ಪಟ್ಟ ಸಾವಿರಾರು ಪದ್ಯಗಳ ಕೃತಿ. ಇದು ಹರಿದಾಸಸಾಹಿತ್ಯದಲ್ಲಿಯ ಅಖಂಡ ಕೃತಿ. ಅಪರೂಪದ ಅಪೂರ್ವ ಕೃತಿ. ಅಪಾರ ಪ್ರಮೇಯಗಳ ಸಂಗ್ರಹದ ಕೃತಿ. ಸಮಗ್ರ ಮಧ್ವಸಿದ್ಧಾಂತದ ಸಾರ ಸಿದ್ಧಾಂತ, ಸಾಧನ, ಅನುಸಂಧಾನ, ಉಪಾಸನಾ, ಎಲ್ಲವೂ ಈ ಕೃತಿಯಲ್ಲಿದೆ. ಈ "ಹರಿಕಥಾಮೃತಸಾರದ" ಸರ್ವಸಂಗ್ರಹವುಳ್ಳ ಕೃತಿ ಈ "ಫಲವಿದು ಬಾಳ್ದುದಕೆ". ಇದು ಅಣುಹರಿಕಥಾಮೃತಸಾರ.

ಪಲ್ಲವಿಯಿಂದಲೇ ಬದುಕಿನ ಸಾರ್ಥಕತೆಯ ಸೂತ್ರ ನಿರೂಪಿಸುವರು. ಈಶ್ವರಕೇಂದ್ರಿತ, ಧರ್ಮಾಧಾರಿತ, ಸತ್ಕರ್ಮಗಳ ಚೌಕಟ್ಟಿನಲ್ಲಿ

ಮುಂದುವರೆಯುವುದೇ ಬದುಕಿನ ದಾರಿ. ಬದುಕಿನ ಫಲ. "ತಿಳಿದು" "ಭಜಿಸುವುದು" ಇವೆರಡು ಶಬ್ದಗಳಲ್ಲಿಯೇ ಶ್ರೀಮಧ್ವರ ಭಕ್ತಿಯ ಪರಿಭಾಷೆ ಇದೆ. ಜೀವನದ ಧ್ಯೇಯ ಅವರವರ ದೃಷ್ಟಿಯಲ್ಲಿ ಬೇರೆ ಬೇರೆಯಾಗಿರಬಹುದು. "ಮನೆಯಿಂದ ಸಂತೋಷ ಕೆಲವರಿಗೆ, ಸತಿಯಿಂದ ಸಂತೋಷ ಕೆಲವರಿಗೆ, ಸುತರಿಂದ ಸಂತೋಷ ಕೆಲವರಿಗೆ, ಧನದಿಂದ ಕೆಲವರಿಗೆ, ಇವೆಲ್ಲ ಬದುಕಿನ ಪ್ರಧಾನ ಗುರಿಗಳಲ್ಲ, "ಭಗವಂತನ ಜ್ಞಾನ", "ಭಗವಂತನ ಉಪಾಸನಾ" ಇವೆರಡೇ ಅತಿಮುಖ್ಯ ಗುರಿ. ಇವೇ ಬದುಕಿನ ಫಲ.

"ಸ್ವೋಚಿತ ಕರ್ಮಗಳ ಆಚರಿಸುವದು" ನೀಚ ಜನರಲ್ಲಿ ಪೋಗಿ ಯಾಚಿಸದೇ ಇರುವದು, "ಕುರ್ವನ್ನೇವೇಹ ಕರ್ಮಾಣಿ, ತೇನತ್ಯಕ್ತೇನ ಭುಂಜೀಥಾಃ" ಎಂಬ ಈಶಾವಾಸ್ಯೋಪನಿಷತ್ತಿನ ಎರಡು ಮಂತ್ರಗಳ ಅರ್ಥ. ಸಂಸ್ಕೃತದ ಮೂಲ ಆಕರಗಳಿಗೂ, ಶ್ರೀ ಜಗನ್ನಾಥದಾಸರ ಕನ್ನಡ ನುಡಿಗಳಿಗೂ ಸಮನ್ವಯಿಸಿ, ಶಾಸ್ತ್ರೀಯವಾಗಿ ಪ್ರತಿಯೊಂದು ನುಡಿಗೆ ಪಂ. ಪ್ರಮೋದಾಚಾರ್ಯರು ವ್ಯಾಖ್ಯಾನ ಮಾಡಿದ್ದಾರೆ. ಶ್ರೀ ಜಗನ್ನಾಥದಾಸರ ಮಾತು ಮಾತಿಗೂ ಪ್ರಮಾಣಗಳನ್ನು ಉದಾಹರಿಸಿದ್ದರಿಂದ ಕನ್ನಡ ಮಾತುಗಳ ತೂಕ ಹೆಚ್ಚಿದೆ. ಶಾಸ್ತ್ರದ ಸಾರಗಳೇ ಈ ವಿಚಾರಗಳು ಎಂಬುದನ್ನು ಮನವರಿಕೆ ಮಾಡಿಕೊಡುತ್ತವೆ. ದಾಸರಾಯರ ಮಾತಿನ ಮೂಲಕ ಸರ್ವಮೂಲಗಳೇ ನಮ್ಮ ಜೊತೆ ಮಾತನಾಡುವವು. ತತ್ತ್ವವಿಚಾರ ಹೃದಯಕ್ಕೆ ಹತ್ತಿರವಾಗುವಂತೆ ಹೊರಹೊಮ್ಮಿವೆ.

ಬದುಕಿನ ಬಂಧನಗಳು ಭಗವಂತನಿಂದ. ಅವುಗಳಿಂದ ಬಿಡುಗಡೆಯೂ ಅವನಿಂದ. ಅವನೇ ಸ್ವತಂತ್ರ. "ಯತ್ ಕರೋಷಿ ಯದಶ್ನಾಸಿ" ಮಾಡುವದು, ಉಣ್ಣುವದು, ಕೇಳುವದು, ತಿಳಿಯುವದು, ನೋಡುವದು, ಆಡುವದು ಎಲ್ಲವೂ ಹರಿಪೂಜೆ ಎಂದು ಶರೀರ, ಇಂದ್ರಿಯ, ಬುದ್ಧಿ, ಮನಸ್ಸು, ಮಾತಿನ ವೃತ್ತಿ, ಪ್ರವೃತ್ತಿಗಳ ಸಮರ್ಪಣೆಯ ಸಾಧನವಿಲ್ಲಿದೆ. ಶ್ರೀಹರಿಯ ಸರ್ವೋತ್ತಮತ್ವ ಸಾಧನವಿದೆ. ಪಂಚಭೇದದ ಪ್ರಪಂಚದ ಪರಿಚಯವಿದೆ. ಪಂಚರೂಪದಿಂದ, ಪಂಚಯಜ್ಞಗಳಿಂದ, ಪಂಚಸಂಸ್ಕಾರಗಳ ಸಾಧನ ಪಂಚಕದ ನಿರೂಪಣೆ ಇದೆ.

ಪಾಠ, ಪ್ರವಚನ, ಪಾರಾಯಣ, ತೀರ್ಥಯಾತ್ರೆ, ವ್ರತ ನಿಯಮಗಳ ಸಾಧನದ ವಿವಿಧ ಕವಲುಗಳಿವೆ. ಸ್ನಾನ, ಪೂಜೆ, ಧ್ಯಾನ, ನೈವೇದ್ಯ, ದೇವಪೂಜೆಯ ವಿಧಾನವಿದೆ. ಗಾಯತ್ರಿಯ ಹಿರಿಮೆ ಇದೆ. ಅರ್ಥ ವಿವರಣೆ ಇದೆ. 'ಸಂಸಾರದ ಎಲ್ಲ ಗೃಹಕೃತ್ಯಗಳನ್ನು ಕಂಸಾರಿ ಕೃಷ್ಣನ ಪೂಜೆಯಾಗಿ ಪರಿವರ್ತಿಸಿಕೊಳ್ಳುವ

ವಿಧಾನವಿದೆ. ಅನುಸಂಧಾನವಿದೆ.' ನಾಮಾತ್ಮಕ, ರೂಪಾತ್ಮಕ, ಕ್ರಿಯಾತ್ಮಕ, ಮೂರು ಪ್ರಧಾನ ಉಪಾಸನಾ ಬಗೆಯ ವಿಧಾನ, ವಿಧಿ ಇಲ್ಲಿ ತುಂಬಿದೆ. ಬದುಕು ಭಗವನ್ಮಯವಾಗುವ ಕಲೆ ಇದೆ. ಮಧ್ವಮತದ ಹಿರಿಮೆ ಇದೆ. ಅದರ ಅನುಯಾಯಿ ಎಂಬ ಹೆಮ್ಮೆ ಇದೆ. ಇದೇ ಇರಬೇಕು. ಹೀಗೆ ಇಪ್ಪತ್ತೇಳು ನುಡಿಗಳಲ್ಲಿ ಮಧ್ವಮತದ "ಸ್ವರೂಪ, ಸಾಧನ, ಸಂದೇಶ, ಫಲಗಳ" ಪೂರ್ಣ "ಜಿಜ್ಞಾಸಾ" ಮಾಡಿದ್ದಾರೆ ದಾಸರಾಯರು. ಪಂ. ಪ್ರಮೋದಾಚಾರ್ಯರು ಈ ಕೃತಿಯ ಅಂತರಾರ್ಥ ಎಲ್ಲರ ಅಂತರಂಗಕ್ಕೆ ಮುಟ್ಟುವಂತೆ ವ್ಯಾಖ್ಯಾನ ಮಾಡಿ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಹರಿದಾಸವಾಹಿನಿ ಮಾಸಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬಂದ ಈ ಕೃತಿ ಒಂದೆಡೆ ಮಡುವುಗಟ್ಟಿ ಒತ್ತಟ್ಟಿಗೆ ಅಖಂಡ ಕೃತಿಯಾಗಿ ಹೊರಬರುತ್ತಿದೆ. ಇದು ಸಂತೋಷದ ಸಂಗತಿ. ಇದೇ ರೀತಿ ಇನ್ನೂ ಅನೇಕ ಕೃತಿಗಳು ಅವರಿಂದ ಬರಲಿ ಎಂದು ಹರಿವಾಯುಗುರುಗಳಲ್ಲಿ ಪ್ರಾರ್ಥಿಸುವೆ.

ಜಯತೀರ್ಥಾಚಾರ್ಯ ಮಳಗಿ
ಪ್ರಾಧ್ಯಾಪಕರು, ಸಂಸ್ಕೃತ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವೇದವ್ಯಾಸ ವಿದ್ಯಾಪೀಠ
ವಿದ್ಯಾಗಿರಿ, ಧಾರವಾಡ

ಬಿಂಬನ ಅಂಬೋಣ

ದಾಸಸಾಹಿತ್ಯಕ್ಕೆ ಮೀಸಲಾಗಿ ಜನ ಮನಗೆದ್ದ ಅಪೂರ್ವ ಮಾಸಪತ್ರಿಕೆ ''ಹರಿದಾಸ-ವಾಹಿನಿ'' ಪತ್ರಿಕೆ. ಇದರಲ್ಲಿ ಸುಮಾರು 6 ವರ್ಷದಿಂದ ಜಗನ್ನಾಥದಾಸರ ''ಫಲವಿದು ಬಾಳ್ದುದಕೆ'' ಪದ್ಯವನ್ನು ವ್ಯಾಸದಾಸ-ಸಾಹಿತ್ಯ ಸಮ್ಮಿಲದೊಂದಿಗೆ ತಿಳಿದಷ್ಟು ವಿಮರ್ಶಿಸಿ ಬರೆದಾಗಿದೆ. ಅದೊಂದು ಹೊತ್ತಿಗೆಯಾಗುವ ಕನಸು, ಇಷ್ಟು ವರ್ಷದ ನಂತರ ನನಸಾಗತೊಡಗಿದೆ.

ಈ ಪುಸ್ತಕದಲ್ಲಿ ದಾಸಸಾಹಿತ್ಯ ಹಾಗೂ ಅದರ ಮೂಲವಾದ ವ್ಯಾಸಸಾಹಿತ್ಯ ಪ್ರಮಾಣಗಳನ್ನು ಅಲ್ಲಲ್ಲಿ ಕೆಲವನ್ನು ಉದಾಹರಿಸಿದೆ. ಪದ್ಯಗಳ ಕ್ರಮ ಕೆಲವೆಡೆ ಕೆಲವು ತರಹವಿದ್ದರೂ ಓದುಗರಿಗೆ ಗೊಂದಲವಾಗಬಾರದೆಂದು ಒಂದನ್ನು ಆಧರಿಸಿದೆ. ಇದರಲ್ಲಿ ಆಗ್ರಹವಿಲ್ಲ, ಸಂಕರ್ಷಣ ಒಡೆಯರ ಮತ್ತು ಇತರ ಟಿಪ್ಪಣಿಯಲ್ಲಿಯ ವಿಷಯಗಳ ಕೆಲವನ್ನು ಇದರಲ್ಲಿ ಮೂಡಿಸಿದೆ.

ಈ ವಿಮರ್ಶೆಗೆ ಕೈಹಿಡಿದು ನಡೆಸಿ ವಿಶ್ವಮಧ್ವಮಹಾಪರಿಷತ್ ಮೂಲಕ ಪ್ರಕಾಶಿಸಲು ಅನುಮತಿ ನೀಡಿ ನನ್ನ ಸ್ವರೂಪೋದ್ಧಾರ ಮಾಡಿದ ಉತ್ತರಾದಿಮಠದ ಶ್ರೀಗಳು ಮುನ್ನುಡಿಯನ್ನು ನೀಡಿ ಪೂರ್ಣ ಕರುಣಿಸಿದ್ದಾರೆ. ನಿರಂತರ ಆ ಕರುಣೆಗಾಗಿ ತಪಿಸುವೆ.

ಪ್ರಸಿದ್ಧ ವಿದ್ವಾಂಸರು, ನನ್ನ ಮೇಲೆ ಮೊದಲಿನಿಂದಲೂ ಅಭಿಮಾನದೊಂದಿಗೆ ಮಾರ್ಗದರ್ಶನ ನೀಡುತ್ತಿರುವ ಪಂ|| ಮಳಗಿ ಜಯತೀರ್ಥಾಚಾರ್ಯರು ಸುಂದರ ಮುನ್ನುಡಿ ನೀಡಿರುವರು. ಅವರಿಗೆ ನನ್ನ ನಮನಗಳು. ಹರಿದಾಸವಾಹಿನಿ ಪತ್ರಿಕೆ ಸಂಪಾದಕರಾದ ಶ್ರೀ ಎ.ಬಿ ಶ್ಯಾಮಾಚಾರ್ಯರು ಇದು ತಮ್ಮದೇ ಪುಸ್ತಕ ಎನ್ನುವಂತೆ ನನಗಿಂತ ಹೆಚ್ಚು ಶ್ರಮಿಸಿ ಪುಸ್ತಕ ಹೊರತಂದಿದ್ದಾರೆ. ಅವರನ್ನು ಎಂದೂ ಮರೆಯಲಾರೆ.

ಈ ಕೃತಿಯನ್ನು ಹೊರತರಲು ಸಹಕರಿಸಿದ ವಿಶ್ವಮಧ್ವಮಹಾಪರಿಷತ್‌ನವರಿಗೂ ಸುಂದರವಾಗಿ ಮುದ್ರಿಸಿದ ವಾಗರ್ಥದವರಿಗೂ ನನ್ನ ಕೃತಜ್ಞತೆಗಳು. ಹೆಸರು ಬಯಸದೆ ನನ್ನ ನಡೆಸಿದ ಅನೇಕ ಕೈಗಳಿಗೆ ಸದಾ ಕೈ ಜೋಡಿಸುವೆ.

ಹರಿ-ಗುರುಗಳು-ತತ್ತ್ವಾಭಿಮಾನಿಗಳು ಸುಮಾರು 400ಕ್ಕೂ ಹೆಚ್ಚು ಪದ್ಯಗಳನ್ನು ನನ್ನೊಳಗೆ ನಿಂತು ರಚಿಸಿ, ವ್ಯಾಖ್ಯಾನಿಸಿದ್ದರೂ, ಮುದ್ರಣಗೊಳ್ಳುತ್ತಿರುವ ದಾಸಸಾಹಿತ್ಯದ ಮೊದಲ ಕೃತಿಯಿದು. ಅವಸರದಲ್ಲಿ ಅನೇಕ ದೋಷಗಳಾಗಿವೆ. ದಯವಿಟ್ಟು ತಿಳಿಸಿ ತಿದ್ದಿ ಪ್ರೋತ್ಸಾಹಿಸಿರೆಂದು ಬಿನ್ನೈಪೈ.

-ಪ್ರಮೋದಾ (ಶ್ರೀಶಾ)ಚಾರ್ಯ ಪೂಜಾರ

ಜ್ಞಾನದಾಯಿನಿ - ಪಾಠಶಾಲೆ

ಅಭಿನವ - ತಿರುಪತಿ

ಶ್ರೀ ಜಗನ್ನಾಥದಾಸಾರ್ಯರಿಂದ ವಿರಚಿತ

ಫಲವಿದು ಬಾಳ್ದುದಕೆ

ಪ್ರಸ್ತಾವನೆ :

ಜಗದ ಜನರಿಗೆ ಜವನ ಬಾಧೆಯನ್ನು ಜರಿಸಿ ಜವಸುತನ ಪಾದಜಲಜ ಸೇರಲು ಧರೆಗಿಳಿದವು ವೇದ ಪುರಾಣಾದಿಗಳು. ಇದರ ನಿರ್ಣಯಕ್ಕಾಗಿ ಅವತರಿಸಿದರು ಶ್ರೀಮದಾಚಾರ್ಯರು. ಇದರ ಭಾವವನ್ನು ಬೋಧಕರಿಗೆ ಬಿಚ್ಚಿಟ್ಟಿತು ಟೀಕಾಚಾರ್ಯರಾದಿ ಜ್ಞಾನಿ ಸಮುದಾಯವು. ಇದೂ ಕೂಡ ನಮ್ಮ ಬುದ್ಧಿಗೆ ನಿಲುಕದಿದ್ದಾಗ ದಾಸಸಾಹಿತ್ಯ ಉದಯಿಸಿತು.

ಈ ದಾಸಸಾಹಿತ್ಯದಲ್ಲಿ ಪ್ರಮೇಯ ಪುಂಜಗಳಿಂದ ರಂಜಿಸುವ ಉನ್ನತಗ್ರಂಥವೇ ಜಗನ್ನಾಥದಾಸರ ''ಹರಿ ಕಥಾಮೃತಸಾರ''. ಇದು ಉತ್ತಮತೆಯ ಜೊತೆಗೆ ವಿಸ್ತಾರತೆಯನ್ನು ಪಡೆಯಿತು. ನಿತ್ಯದಲ್ಲಿ ನುಡಿಯಲು ನೀಗದಾಯಿತು. ಇದನ್ನರಿತ ಕರುಣಾಮಯಿಗಳಾದ ಜಗನ್ನಾಥದಾಸರೇ ಸಂಗ್ರಹಿಸಿ, ''ಅಣುಹರಿಕಥಾಮೃತ ಸಾರ'' ಒಂದನ್ನು ಕೊಟ್ಟರು ಅದೇ ''ಫಲವಿದು ಬಾಳ್ದುದಕೆ''.

ಇದರ ವಿಶ್ವರೂಪ ನಿಮ್ಮ ಒಡಲಲ್ಲಿ ಮೂಡಲಿದೆ. ದೃಷ್ಟಿಯಿದ್ದಷ್ಟು ನೋಡಿ, ನಲಿದಾಡಿ, ಕೊಂಡಾಡಿ, ನುಡಿ ಮತ್ತೆ ಮತ್ತೇ ಪಾಡಿ, ಜಗದೊಡೆಯನತ್ತ ಓಡಿ, ಓಡಿ ಓಡಿ.

ಫಲವಿದು ಬಾಳ್ದುದಕೆ ॥ ಪ ॥

ಸಿರಿನಿಲಯನ ಗುಣಗಳ ತಿಳಿದು ಭಜಿಸುವದೇ ॥ ಅ ॥ ಪ ॥

"ಯಸ್ತೇಕಥಾಸೇವಕ......." ಹನುಮಂತದೇವರು ನಿಜವಾದ ಬದುಕು ಯಾವುದೆಂಬುದನ್ನು ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ನುಡಿದ ಚೆನ್ನುಡಿಯಿದು.

ಇದನ್ನೇ ವಿಸ್ತಾರವಾಗಿ ದಾಸರು ತಿಳಿಸಲು ಈ ಪದ್ಯರೂಪ ಗ್ರಂಥವನ್ನು ರಚಿಸಿದರು. ಗ್ರಂಥವೆಂದ ಮೇಲೆ ಸಂಬಂಧ ಚತುಷ್ಟಯ ಅಂದರೆ ಅಧಿಕಾರಿ, ಪ್ರಯೋಜನ, ವಿಷಯ ಸಂಬಂಧಗಳನ್ನು ತಿಳಿಯಬೇಕು. ಈ ಎರಡು ಸಾಲಿನಲ್ಲಿ ಅದೆಲ್ಲವನ್ನು ತಿಳಿಸಿದ್ದಾರೆ.

ಶ್ರೀಶನ ಗುಣಗಳನ್ನು ತಿಳಿದು ಭಜಿಸುವರೇ ಅಧಿಕಾರಿಗಳು. ಬದುಕನ್ನು ಸಾರ್ಥಕ ಮಾಡಿಕೊಳ್ಳುವುದು ಅಂದರೆ ಮೋಕ್ಷದ ಆನಂದವನ್ನು ಅನುಭವಿಸುವದು ಫಲ.

ಸಿರಿನಿಲಯನ ಗುಣಗಳೇ ವಿಷಯ.

ಪ್ರಯೋಜ್ಯ ಪ್ರಯೋಜಕ, ಪ್ರತಿಪಾದ್ಯ ಪ್ರತಿಪಾದಕಾದಿಗಳೇ ಸಂಬಂಧ.

ಒಂದೊಂದು ಶಬ್ದದ ಸ್ವಾರಸ್ಯವನ್ನು ಮುಂದೆ ನೋಡೋಣ.

...ಸಿರಿನಿಲಯನಗುಣಗಳ...

ಇದರಲ್ಲಿಯ ಒಂದೊಂದು ಶಬ್ದದ ಸ್ವಾರಸ್ಯವನ್ನು ಒಂದೊಂದಾಗಿ ಮೆಲ್ಲನೆ ಮೆಲ್ಲೋಣ.

ಅನುಪಲ್ಲದ ಮೊದಲ ಪದ "ಸಿರಿ ನಿಲಯ" ಇದಕ್ಕೆ ಸುಮಾರು 10 - 12 ಕಾರಣಗಳನ್ನು ಕಲ್ಪಿಸಬಹುದು.

ವಿಘ್ನನಿವಾರಣೆಗಾಗಿ ಗ್ರಂಥಾರಂಭದಲ್ಲಿ ದೇವತಾ ನಮನವು ಪಾರಂಪರ್ಯ ಧರ್ಮ. ಹಿಂದೂ ಧರ್ಮದಲ್ಲಿ ಅನೇಕ ದೇವತೆಗಳು ಇರುವಾಗ ಯಾವ ದೇವತೆಯನ್ನು ನಮಿಸಬೇಕು ಎಂದರೆ ದಾಸರ ಉತ್ತರ "ಸಿರಿನಿಲಯ".

"ಪವಿತ್ರಾಣಾಂ ಪವಿತ್ರಂ ಯೋ ಮಂಗಲಾನಾಂ ಚ ಮಂಗಲಂ" ಎಂದು (ವಿಷ್ಣುಸಹಸ್ರನಾಮ) ಬಣ್ಣಿಸಿರುವುದು ವಿಷ್ಣುವಿನನ್ನು ಮಾತ್ರ. ವಿಘ್ನಗಳೆಲ್ಲದರ ಪರಿಹಾರಕ್ಕಾಗಿ ಮಂಗಳವಾಗಬೇಕಾಗಿದೆ ಈಗ. ಈ ಸಂದರ್ಭದಲ್ಲಿ ಮಂಗಳಕ್ಕೆ ಮಂಗಳವನ್ನು ಕೊಡುವ ಮುಕುಂದನನ್ನು "ಸಿರಿನಿಲಯ"ನನ್ನು ಬಿಟ್ಟು ಮತ್ತಾರನ್ನು ಭಜಿಸಲು ಸಾಧ್ಯ.

ಇಂಥಹ ಪರಮಾತ್ಮನನ್ನು ಕಾಣಬಲ್ಲವನಾರು? ಎಂಬುದಕ್ಕೆ ಉತ್ತರ ''ಸಿರಿನಿಲಯ''.

ಲಕ್ಷ್ಮೀದೇವಿ ವಿದ್ಯಾಭಿಮಾನಿ. ಈ ವೇದವನ್ನು ನಿಲಯವನ್ನಾಗಿವುಳ್ಳವ ಅಂದರೆ ವೇದಪ್ರತಿಪಾದ್ಯ ಶ್ರೀಹರಿ, ಯಾರಿಗೆ ಹರಿಬೇಕು ಅವರೇ ಕಾಣುವವರು. 'ಅರ್ಥೋ ನಾರಾಯಣೋ ದೇವಃ' ಏಕಾಂತಭಕ್ತರಾದ ಉತ್ತಮಾಧಿಕಾರಿಗಳಿಗೆ ದೇವರೇ ಬೇಕು. ಇನ್ನೇನೂ ಬೇಡ. ಆದ್ದರಿಂದ ಸಿರಿ (ಶಾಸ್ತ್ರ) ನಿಲಯ (ಪ್ರತಿಪಾದ್ಯ)ನನ್ನು ಕಾಣುವ ಉತ್ತಮಾಧಿಕಾರಿಗಳೇ ಇಲ್ಲಿ ಕಾಣುವ ಕಣ್ಣಿದ್ದವರು.

ಮಂದರಿಗೆ ಅರ್ಥಾತ್ ಅಧಮಾಧಿಕಾರಿಗಳಿಗೆ ಇದು (ಈ ಪದ್ಯ) ಬೇಡವೆ? ಅದಕ್ಕೂ ಉತ್ತರ ''ಸಿರಿ ನಿಲಯ''. ಉತ್ತಮರಿಗೆ ದೇವರಿಗಾಗಿ ಮೋಕ್ಷವಾದರೆ ಅಧಮರಿಗೆ ಮೋಕ್ಷಕ್ಕಾಗಿ ದೇವರು. ಸಿರಿ ಎಂದರೆ ಸಂಪತ್ತು. ನಾಶವಾಗದ ಸಂಪತ್ತು ಎಂದರೆ ಮೋಕ್ಷ. ಅದಕ್ಕೆ ನಿಲಯ ಅಂದರೆ ಆಶ್ರಯ ಹರಿ. ಆದ್ದರಿಂದ ಸಿರಿ ಬೇಕಾದರೆ ಅದರ ನಿಲಯನನ್ನು ತಿಳಿಯಲೇಬೇಕು. ನಮಗೂ ಈ ಪದ್ಯ ಇದರಲ್ಲಿರುವ ಸಿರಿನಿಲಯನ ಗುಣಗಳ ಭಜನೆ ಅನಿವಾರ್ಯವಾಗಲೇಬೇಕು.

ಅನೇಕ ದೇವತೆಗಳಿರುವಾಗ ಪರಮಾತ್ಮನನ್ನೇ ಏಕೆ ಭಜಿಸಬೇಕು? ಇದಕ್ಕೂ ಉತ್ತರ ''ಸಿರಿನಿಲಯ''.

ಇವನು ಜಗನ್ಮಾತೆಯ ಒಡೆಯ, ಜಗನ್ಮಾತೆಯಾದ ಲಕ್ಷ್ಮೀ ಬ್ರಹ್ಮನ ಮಾತಾ, ಶಿವನ ಪಿತಾಮಹಿ. ಬ್ರಹ್ಮಾದಿಗಳೆಲ್ಲ ಹರಿಯದಾಸರು. ಹರಿಯೇ ಸರ್ವೋತ್ತಮ. ''ವಿಧಾತೃ ದೇವತೆಗಳೆಲ್ಲ ವಿಷ್ಣುವಿನ ಹಿಂದೆ''. ಆದ್ದರಿಂದ ಸರ್ವೋತ್ತಮನಾದ ಸಿರಿನಿಲಯನೇ ಸರ್ವದಾ ಸರ್ವರಿಂದ ಧ್ಯೇಯ.

ಬ್ರಹ್ಮನು ಇಳಿಸುವ (ಸೃಜಿಸುವ) ಶಿವನು ಅಳಿಸುವ (ನಾಶ ಮಾಡುವ) ಇವೆರಡರ ನಡುವೆ ವಿಷ್ಣು ಉಳಿಸುವ. ಹೀಗಿರುವಾಗ ವಿಷ್ಣು ಬ್ರಹ್ಮಾದಿಗಳ ಒಡೆಯ ಹೇಗಾಗಬಲ್ಲ, ಇದಕ್ಕೂ ಉತ್ತರ ''ಸಿರಿನಿಲಯ''.

ಲಕ್ಷ್ಮೀ ತಾನೇ ಹೇಳುತ್ತಾಳೆ ''ಯಂ ಕಾಮಯೇ ತಂ ತಂ ಉಗ್ರಂ ಕೃಣೋಮಿ ತಂ ಬ್ರಹ್ಮಾಣಂ...'' (ಅಂಭೃಣೀಸೂಕ್ತ) ''ನಾ ನನ್ನಿಚ್ಛೆಯಂತೆ ಯಾರನ್ನು ಬೇಕಾದರೂ ಬ್ರಹ್ಮನನ್ನು ರುದ್ರನನ್ನು ಮಾಡಬಲ್ಲೆ'' ಎಂದು ಸಿರಿಯ್ಯೆಸಿರಿ ಹೀಗಿರುವಾಗ ಇವಳ ಆಶ್ರಯದಾತ ಹೇಗಿರಬಲ್ಲ, ಸ್ವತಃ ಹರಿಯೇ ಬ್ರಹ್ಮನೊಳಗಿದ್ದು ಇಳಿಸುವ, ಶಿವನೊಳಗಿದ್ದು ಅಳುವುದಕ್ಕೆ ಅಳುವ ಜಗವನ್ನ ಅಳಿಸುವ.

''ಬ್ರಹ್ಮಣಿ ಬ್ರಹ್ಮರೂಪೋऽಸೌ ಶಿವರೂಪೇ ಶಿವೇಸ್ಥಿತಃ''

ಪತಿಪತ್ನಿಯರು ರಥದ ಎರಡು ಚಕ್ರಗಳಿದ್ದಂತೆ. ಲಕ್ಷ್ಮೀ ಎಂಬ ಒಂದು ಚಕ್ರವಿಲ್ಲದಿದ್ದರೆ ಹರಿ ಏನು ತಾನೇ ಮಾಡಿಯಾನು? ಅಂದ ಮೇಲೆ ಹರಿ ಸಾಪೇಕ್ಷರಹಿತ ಸರ್ವೋತ್ತಮ ಹೇಗಾಗಬಲ್ಲ? ಇದಕ್ಕೂ ಉತ್ತರ ''ಸಿರಿನಿಲಯ''.

ನಾರಾಯಣ ನೀರಜಾಸನನ ತಾಯಿಗೂ ನೆಲೆ ನೀಡಿದವ. ಸುಖಸಾಗರವನ್ನು ಸುರಿಸಿದವ. ಅವಳೆದುರು ಸುಖಕ್ಕೆ ಬಾಯಿತೆರೆದವನಲ್ಲ, ನೆಲೆಗಾಗಿ ನಾಲಿಗೆ ಚಾಚಿದವನಲ್ಲ. ಇವನು ಸ್ವರಮಣ ಅವಳಿಲ್ಲದೆಯೂ ಸುಖವಾಗಿ ಇರಬಲ್ಲ. ''ಸ್ವರತೋऽಪಿ ಚಾಗ್ರೇ...'' ಆದ್ದರಿಂದ ಲಕುಮಿಯ ನಲ್ಲ ಸರ್ವ ಬಲ್ಲವ.

ನಮ್ಮ ಸಿದ್ಧಾಂತ ತಾರತಮ್ಯದ ಸಿದ್ಧಾಂತ ದೇವನೊಬ್ಬನನ್ನು ತಿಳಿದು ಭಜಿಸಿದರೆ ಸರಿಹೋದೀತೆ?

ಅದಕ್ಕೂ ಉತ್ತರ ''ಸಿರಿನಿಲಯ''

''ಪರಿವಾರತಯಾ ಗ್ರಾಹ್ಯಾ ಅಪಿ ಹ್ಯೇಯಾ ಪ್ರಧಾನತಃ''

ಎಲ್ಲ ದೇವತೆಗಳನ್ನು ದೇವನ ಪರಿವಾರದವರೆಂದು ಪೂಜಿಸಲೇಬೇಕು. ಸರ್ವರೂ ಸಿರಿನಿಲಯನ ಸೇವಕರಾದರೂ ಸಾಕ್ಷಾತ್ ಸೇವೆ ಶ್ರೀಗೆ ಮಾತ್ರ. ''ಛತ್ರ ಚಾಮರ ವ್ಯಜನಪರ್ಯಂಕ'' ಸೇವಕಳೂ, ತಾನೇ ಸಿರಿನಿಲಯ ಅಂದರೆ ಲಕ್ಷ್ಮೀ ಗೋಲಕದಲ್ಲಿ ಅಂತರ್ಗತನಾದವ. ಲಕ್ಷ್ಮೀದ್ವಾರಾ ಹರಿಯ ಉಪಾಸನೆ ಬ್ರಹ್ಮನಿಗೆ, ಬ್ರಹ್ಮನದ್ವಾರಾ ಶಿವನಿಗೆ. ಹೀಗೆ ಉತ್ತಮರದ್ವಾರಾ ತಾರತಮ್ಯಾನುಸಾರವಾಗಿ ಹರಿಯ ತಿಳಿದು ಭಜಿಸಬೇಕು. ಇದು ಬಂಗಾರದ ಬದುಕು, ಬದುಕಿನ ಭಾಗ್ಯ.

ಬ್ರಹ್ಮದೇವರು ಲಕ್ಷ್ಮೀ ಮೂಲಕ ಹರಿಯನ್ನು ಉಪಾಸಿಸುವರು. ರುದ್ರದೇವರು ಬ್ರಹ್ಮದೇವರ ಮೂಲಕ ಉಪಾಸಿಸುವರು. ಅವರವರದು ಅವರಿಗಿರಲಿ. ನಮ್ಮ ದಾರಿಯ ನೇರ ದ್ವಾರ ಯಾರು?

ಅದಕ್ಕೂ ಉತ್ತರ ''ಸಿರಿ ನಿಲಯ''. ಲಕುಮಿ ನೆಲೆಸಿರುವ ನೆಲೆ ಶಾಸ್ತ್ರ ಅಥವಾ ಅಭಿಮನ್ಯವಾದ ವಸ್ತುವನ್ನು ಅಭಿಮಾನಿ ಹೆಸರಿನಿಂದ ಕರೆಯುವದು. ವಿಚಕ್ಷಣರ ವಿಲಕ್ಷಣ ರೀತಿ. ಸಮಸ್ತ ವೇದಾಭಿಮಾನಿಯಾದ ಲಕುಮಿಯ ಹೆಸರಿನಿಂದ ವೇದವನ್ನು, ಶಾಸ್ತ್ರವನ್ನು ಕರೆಯುವರು. ಆದ್ದರಿಂದ ಸಿರಿ ಎಂದರೆ ಶಾಸ್ತ್ರ, ಅದನ್ನು ನಿಲಯವನ್ನಾಗಿ ಅಂದರೆ ಆಶ್ರಯವನ್ನಾಗಿವುಳ್ಳವರು ಗುರುಗಳು. ಆ ಗುರುಗಳ ದ್ವಾರಾ ನಾವು ದೇವರೆಡೆಗೆ

ಸಾಗಬೇಕು. ''ಗುರುಸ್ಮರಣೆಯಿಂದ ಹರಿಯೊಲಿದು ಪೊರೆವ''.

ಇಂಥಹ ಸರ್ವೋತ್ತಮ ಸ್ವಾಮಿಯನ್ನು ಸೇರುವದಾದರೂ ಹೇಗೆ? ಅದಕ್ಕೂ ಉತ್ತರ ''ಸಿರಿ ನಿಲಯ''.

(ಹಿಂದೆ ತಿಳಿದಂತೆ) ಸಿರಿ ಎಂದರೆ ಶಾಸ್ತ್ರ, ಅದೇ ನಮಗೆ ಮನೆ ಅದೇ ದಾರಿ. ಶಾಸ್ತ್ರಜ್ಞಾನದಿಂದಲೇ ಅವನನ್ನು ಪಡೆಯಲು ಸಾಧ್ಯ. ಅವನು ವೇದವೇದ್ಯ ವೇದೈಕಗಮ್ಯ.

''ಸದಾಗಮೈಕ ವಿಜ್ಞೇಯಂ''

ನಾವೂ ಭಕ್ತಿ ಕೊಟ್ಟರೆ ದೇವ ಸಂಪತ್ತು ನೀಡುವ. ಇದು ವ್ಯಾಪಾರ ವೃತ್ತಿಯಾಗುವದು. ಇದರಲ್ಲಿ ದೇವರದೇನು ದೊಡ್ಡತನ? ಇದಕ್ಕೂ ಉತ್ತರ ''ಸಿರಿ ನಿಲಯ''.

''ಶ್ರೀ'' ಎನ್ನುವ ಒಂದಕ್ಷರದ ಶಬ್ದವನ್ನು ''ಸಿರಿ'' ಎಂದು ಎರಡಕ್ಷರ ಮಾಡಿ ಸೇರಿಸಿರುವರು. ಇದರ ಆಂತರ್ಯ ನಾವು ಕೊಟ್ಟಷ್ಟೇ ಕೊಡುವ ಅಥವಾ ಮೋಸದಿಂದ ಕಡಿಮೆ ಮಾಡಿಕೊಡುವ ಕಠೋರ ವ್ಯಾಪಾರಿ ಇವನಲ್ಲ, ಇಮ್ಮಡಿಯಾಗಿ ಉಪಲಕ್ಷಣಯಾ ಬಹು ಮಡಿ ಮಾಡಿ ನೀಡುವ. ಅದಕ್ಕಾಗಿ ಇವ ಕರುಣೆಯ ಕಡಲು.

''ತನಗರ್ಪಿಸಲು ಕೊಟ್ಟುದನಂತ ಮಡಿ ಮಾಡಿ' ಭಾಗವತದ ಬೆಂಬೆಳಕಿನಲ್ಲಿ ಬಾರದ ಬರಡು ಶಬ್ದದ ಬದುಕಾಗಿ ಯಾವ ಭಾಗ್ಯವಿಲ್ಲ, ಸಂಸ್ಕೃತ ಶಾಸ್ತ್ರದ ಸಾರವನ್ನು ಸಂಗ್ರಹಿಸುವ ಕನ್ನಡ ಪದ್ಯವಿದು ಎಂದು ತಿಳಿಸಿದರು. ಸಂಸ್ಕೃತ ''ಶ್ರೀ'' ಶಬ್ದದ ಕನ್ನಡರೂಪವಾದ ''ಸಿರಿ'' ಎಂಬ ಶಬ್ದವನ್ನು ನುಡಿಯುವ ಮೂಲಕ.

ಇದು ''ಅಣು ಹರಿಕಥಾಮೃತಸಾರ'' ಎಂದು ದೃಢಪಡಿಸಿದರು ''ಸಿರಿ'' ಎಂಬ ಶಬ್ದದಿಂದ . ಹರಿಕಥಾಮೃತಸಾರದ ಮೊದಲ ಪದ್ಯದ ಮೊದಲಕ್ಷರ ''ಶ್ರೀ (ಶ್ರೀ ರಮಣಿ ಕರಕಮಲಪೂಜಿತ...) ಇದಕ್ಕಾಗಿ ಇಲ್ಲಿಯೂ ''ಶ್ರೀ'' (ಸಿರಿ) ಶಬ್ದ.

ಇದು ಎನ್ನ ಬಿಂಬ ನುಡಿಸಿದ ''ಸಿರಿ ನಿಲಯ'' ಶಬ್ದದ ಐಸಿರಿಯಿದು. ಸರಿಯಿದ್ದಲ್ಲಿ ಸ್ವೀಕರಿಸಿ ಆಶೀರ್ವದಿಸಿ. ತಪ್ಪಿದ್ದಲ್ಲಿ ತಿದ್ದಿ ತಿಳಿಸಿ. ಮುಂದಿನ ಹೆಜ್ಜೆ ಇಡಲು ಶಕ್ತಿ ಉತ್ಸಾಹ, ಇಮ್ಮಡಿಯಾಗಲು ಒಡೆಯನಲ್ಲಿ ಬೇಡಿ, ದಯಮಾಡಿ.

ಗುಣಗಳ.........

ವ್ಯಕ್ತಿಯನ್ನು ತಿಳಿಯುವುದು ಎಂದರೆ ಅವನ ಗುಣಗಳನ್ನು ತಿಳಿಯುವದು ಎಂದರ್ಥ ಅಂದ ಮೇಲೆ 'ಗುಣ' ಎಂಬ ಪ್ರತ್ಯೇಕ ಶಬ್ದವೇಕೆ ವ್ಯರ್ಥವಲ್ಲವೇ.

ಅಲ್ಲ ಗುಣಪರಿಪೂರ್ಣನಾದ ದೇವನನ್ನು ನಿರ್ಗುಣನೆಂದು ಸಾರುವ ದುಃಸಿದ್ಧಾಂತ ಒಂದುಂಟು. ಹೀಗಾಗಿ ದೇವನನ್ನೇ ತಿಳಿ ಎಂದಾಗ ನಿರ್ಗುಣನಾದ ದೇವನಲ್ಲಿ ನಮ್ಮ ಜ್ಞಾನ ಓಡೀತು ಎಂಬ ತುಮುಲದಿಂದ ದೇವನ ಗುಣಗಳನ್ನು ತಿಳಿ ಎಂದು ತಿಳಿಸಲು ಪ್ರತ್ಯೇಕವಾಗಿ ''ಗುಣ'' ಶಬ್ದವನ್ನೇ ನುಡಿದಿರುವರು.

''ಜ್ಞೇಯಂ ಗಮ್ಯಂ ಗುಣೈಃ...''

ಎಲ್ಲರಲ್ಲೂ ದೋಷ ಹುಡುಕುವುದು ಸಾಮಾನ್ಯ ಮಾನವನ ಸಾಮಾನ್ಯ ಸ್ವಭಾವ, ಗುಣಕಾಣುವುದೇ ಇಲ್ಲ. ಕಂಡರೂ ಒಪ್ಪಲಾರ ಒಪ್ಪಿದರೂ ನುಡಿಯಲಾರ. ನುಡಿದರೂ ಒಡಲದಿಂದ ಹೆಮ್ಮೆಯಿಂದ ನುಡಿಯಲಾರ. ಇಂಥ ನೀಚ ಬುದ್ಧಿಯನ್ನು ದೇವರಲ್ಲಿ ಹರಿಸಬೇಡ ಎಂದು ತಿಳಿಸಲು ''ಗುಣಗಳ'' ಎಂದು ನುಡಿದಿದ್ದಾರೆ.

ಇವನು ಗುಣಗಳೆಂಬ ರತ್ನಗಳನ್ನು ತುಂಬಿ ತುಂಬಿಕೊಂಡ ರತ್ನಾಕರನು. ''ಹೇ ಹುಲ್ಲು ಮಾನವ ನೀನೆಷ್ಟೇ ತಡಕಾಡಿದರೂ.. ಮಿಡುಕಾಡಿದರೂ.. ಜಿಗಿದಾಡಿದರೂ ದೋಷ ಲೇಶದ ಲೇಪವೂ ನಿನಗೆ ಸಿಗದು. ದೋಷ ಹುಡುಕಬೇಡ. ಇದ್ದ ಗುಣಗಳೆಂಬ ರತ್ನಗಳಿಗೆ ದೋಷವೆಂಬ ಕೆಸರನ್ನ ಚೆಲ್ಲುವ ದುಸ್ಸಾಹಸ ಮಾಡಬೇಡ. ಗುಣ ಗ್ರಾಹಿಯಾಗು ನೀನಾಗ ಗುಣವಂತನಾಗುವಿ ಎಂದು ತಿಳಿಸಲು ''ಗುಣ'' ಶಬ್ದವನ್ನು ಹೇಳಿರುವರು.

ಅನವದ್ಯಕರವಾದ ಆದ್ಯ ಪದ್ಯದಲ್ಲಿ ಮುಂದಿನ ಪದ್ಯಗಳ ಹೃದ್ಯವನ್ನು ವೇದ್ಯವಾಗಿಸಬೇಕೆಂಬುದು ವಿದ್ವದ್‌ವಿದಿತ. ಅದರಂತೆ ಇಲ್ಲಿಯೂ ಕೂಡ ಮುಂದಿನ ಪದ್ಯಗಳ ಸಾರಾಂಶವನ್ನು ಸಂಗ್ರಹಿಸಿದರು ''ಗುಣ'' ಎಂಬ ಪದದಿಂದ ಮುಂದೆ ಒಂದೊಂದು ಪದ್ಯದಲ್ಲಿ ಮಹಾಮಹಿಮನಾದ ಅನಂತ ಗುಣ ಪರಿಪೂರ್ಣನಾದ ಪರಮಾತ್ಮನ ಮುಖ್ಯವಾದ ಕೆಲವೆಡೆ ಗುಣಗಳನ್ನು ವಿಸ್ತಾರಮಾಡಿ ಹೇಳುತ್ತಾರೆ. ಕೆಲವೆಡೆ ಕರ್ತವ್ಯದ ಕಿರುನೋಟ ತೋರಿದರು. ಕೆಲವೆಡೆ ಕಾರುಣ್ಯವೆಂಬ ಗುಣನದಿ ಗುಪ್ತನದಿಯಾಗಿ ಹರಿಯುತ್ತಿರುವುದು. ಮನಬಿಚ್ಚಿ ನೋಡಿದೆಡೆ ಕಣ್ಣಲ್ಲಿ ವ್ಯಕ್ತನದಿಯಾಗಿ ಹೊರ ಹೊಮ್ಮುವುದು. ಅದೆಲ್ಲವನ್ನು ''ಗುಣಗಳು'' ಎಂಬ ಸಾಮಾನ್ಯ ಪದದಿಂದ ಗ್ರಹಣ ಮಾಡಿ ಗ್ರಂಥದ ಗೌಣತೆಯನ್ನು ತೆಗೆದು ಉತ್ತಮತೆಯನ್ನು ನೀಡಿದ್ದಾರೆ.

ನಮಿಸಲು ವ್ಯಕ್ತಿಬೇಕು. ಭಜಿಸಲು ವ್ಯಕ್ತಿಯ ನಾಮ ಸಾಕು. ಗುಣಗಳ ಗಣನೆಯಿಂದೇನು ಲಾಭ. ಎಂದರೆ ಟೀಕಾಕೃತ್ಪಾದರು ತಿಳಿಸುವರು.

'ನ ಅನಿರ್ಧಾರಿತ ಸ್ವರೂಪಸ್ಯ ವಂದನಂ ಯುಕ್ತಮ್'

ವ್ಯಕ್ತಿಯ ವ್ಯಕ್ತಿತ್ವ ವ್ಯಕ್ತವಾಗದಿದ್ದರೆ ಭಕ್ತಿಯ ಸೆಲೆ ಪುಟಿಯದು. ತಲೆ ತಗ್ಗಿದರೂ ಮನ ಮಣಿಯದಿದ್ದರೆ ನಮನ ಎನಿಸದು. ಅದಕ್ಕಾಗಿ ಸ್ವರೂಪಜ್ಞಾನವಾಗಬೇಕು. ''ನ ಚ ಲಕ್ಷಣೇನ ವಿನಾ ನಿರ್ಧಾರಮ್'' ಆ ಸ್ವರೂಪವಾದರೂ ಲಕ್ಷಣ, ಗುಣಜ್ಞಾನವಾಗದೆ ತಿಳಿಯದು. ಅದಕ್ಕಾಗಿ ಹೇಳಿದರು ಮೊದಲು ''ಗುಣಗಳ'' ತಿಳಿ ಎಂದು.

ಇಂಥ ಗುಣಜ್ಞಾನದಿಂದ ಪ್ರಯೋಜನವಾದರೂ ಏನು? ವೇದ ಮಾತಾ ಮುಚ್ಚಿಟ್ಟ ಮುತ್ತನ್ನು ಎತ್ತಿ ತೋರುವಳು.

''ನ ತಾದೃಶೀಪ್ರೀತಿರೀಡ್ಯಸ್ಯ ವಿಷ್ಣೋ ಗುಣೋತ್ಕರ್ಷಾತ್ ಜ್ಞಾತರೀ ಯಾದೃಶೀಃ ಸ್ಯಾತ್''

ವಿಷ್ಣುವಿನ ಗುಣಗಳ ಉತ್ಕರ್ಷಜ್ಞಾನದಿಂದ ವಿಷ್ಣುವಿಗೆ ಆಗುವಷ್ಟು ಪ್ರೀತಿ ಇನ್ನಾವುದರಿಂದಲೂ ಆಗದು. ಶ್ರೀನಿಕೇತನ ಪ್ರಸನ್ನವಾದಲ್ಲಿ ಅಲಭ್ಯವಾದದ್ದೇನುಂಟು. ಆದ್ದರಿಂದ ಗುಣಗಳ ತಿಳಿಯಬೇಕು. ತಿಳಿವಿಗೆ ತಿಳಿದಿದ್ದು ತಿಳಿಯದದ್ದೂ ಪಾದ ತಳದಲ್ಲಿ ತಲೆಯೊಡ್ಡಿ ನಿಲ್ಲುವದು. ರಮೆ ವಿರಮಿಸದೆ ಎಣಿಸಿದರೂ ಯಾರ ಉಗುರಿನ ಕಣಗಳ ಗುಣಗಳು ಕೊನೆಗಾಣಲಿಲ್ಲವೊ ಅಂಥಹ ರಮೆಯರಸನ ಅತೀ ಸ್ವಲ್ಪ ಗುಣವನ್ನಾದರೂ ತಿಳಿದು ಧನ್ಯರಾಗೋಣ.

1. ಸೃಷ್ಟಿ – ಚರಾಚರ ಪ್ರಾಣಿಗಳಿಗೆ ಸ್ಥೂಲ ದೇಹಗಳನ್ನೀಯುವದು. ನಿತ್ಯ ಪದಾರ್ಥಗಳಿಗೆ ವಿಭಿನ್ನ ಅವಸ್ಥೆ ನೀಡುವದು.
2. ಸ್ಥಿತಿ – ಸೃಷ್ಟಿ ಮಾಡಿದವರನ್ನು ಬ್ರಹ್ಮನ ಪ್ರಳಯ ಪರ್ಯಂತ ಅವರಲ್ಲಿದ್ದು ಸಾಧನೆ ಮಾಡಿ ಮಾಡಿಸುತ್ತಾ ಪಾಲಿಸುವದು.
3. ಸಂಹಾರ – ಪ್ರಳಯದಲ್ಲಿ ಸ್ಥೂಲದೇಹ ನಾಶ ಮಾಡಿ ನಿತ್ಯ ಪದಾರ್ಥಗಳಿಗೆ ಸಂಬಧವನ್ನು ಬೇರ್ಪಡಿಸಿ ಎಲ್ಲವನ್ನು ತನ್ನುದರದಲ್ಲಿ ಧರಿಸಿಕೊಳ್ಳುವದು.
4. ನಿಯಮನ – ಸರ್ವ ಜೀವರಿಗೂ ಸ್ವರೂಪ, ಅದೃಷ್ಟಾನುಸಾರ ಕರ್ಮಗಳನ್ನು ಮಾಡಿಸುತ್ತಾ ತನ್ನ ಸ್ವಾತಂತ್ರ್ಯವನ್ನು ಸ್ಪಷ್ಟ ಮಾಡುವದು.
5. ಜ್ಞಾನ – ಸಾತ್ವಿಕ ಜೀವರಿಗೆ ಸ್ವರೂಪಾನುಸಾರ ಯಥಾರ್ಥ ಜ್ಞಾನ ನೀಡುವದು.
6. ಅಜ್ಞಾನ – ತಮೋಯೋಗ್ಯರಿಗೆ ಸ್ವರೂಪಭೂತ ಅಜ್ಞಾನವನ್ನು ವ್ಯಕ್ತಮಾಡುವದು.
7. ಬಂಧ – ಸಾಧನೆಯಾಗುವವರೆಗೆ ಸಾಧಕರನ್ನು ಸಂಸಾರದಲ್ಲಿರಿಸುವುದು ನಂತರ ಕಲ್ಯಾದಿಗಳಿಗೆ ತಮಸ್ಸಿನಲ್ಲೇ ಬಂಧಿಸುವದು.

8. ಮೋಕ್ಷ – ಸಾಧನೆ ನಂತರ ಮುಕ್ತಿಯೋಗ್ಯರನ್ನು ವೈಕುಂಠದಲ್ಲಿಟ್ಟು ಸ್ವರೂಪಭೂತ ಆನಂದವನ್ನು ನೀಡುವದು.

ಶಿಷ್ಟವಾದ ಈ ಅಷ್ಟ ಗುಣಗಳನ್ನು ಇಷ್ಟಾದರೂ ತಿಳಿದಲ್ಲಿ ದುಷ್ಟರಿಂದ ಕಷ್ಟ ಕರಗಿ ಪ್ರೇಷ್ಟನಾಗಿ ಇಷ್ಟನಾಗುವ.

ತಿಳಿದು ಭಜಿಸುವದೆ......

ಮುಂದಿನ ಪದದ ಪದ (ಸ್ಥಾನ)ಕ್ಕೆ ಪಾದಾರ್ಪಣೆ ಮಾಡೋಣ. ಸಿರಿ ನಿಲಯನ ಗುಣಗಳ ಭಜಿಸುವದೇ ಬದುಕಿನ ಫಲ ಎಂದರೆ ಸಾಕಾಗುತ್ತಿತ್ತು. ''ತಿಳಿದು'' ಎನ್ನುವ ವಿಶೇಷಣ ಏಕೆ?

ಆಧಾರವಿರಲಿ, ಇಲ್ಲದಿರಲಿ, ಆಪ್ತರಾಗಿರಲಿ, ಆಗದಿರಲಿ, ಗಾಳಿಗೂ ತೂರಿ ಬಂದ ಹಾರಿಕೆಗಳನ್ನೆಲ್ಲಾ ಆಲಿಸಿ ಆಚರಿಸುವದು ಮೂಢನಂಬಿಕೆ. ಅದರಿಂದ ಲಾಭವಿಲ್ಲ, ಅಷ್ಟೇ ಅಲ್ಲ, ನಷ್ಟವೇ ಉಂಟು. ದೈಹಿಕ, ಆರ್ಥಿಕ, ಮಾನಸಿಕ ಶ್ರಮದ ಭಾರ ಹೊರುವುದಲ್ಲದೇ ನಿನ್ನ ಬಗ್ಗೆ ಓಡಿ ಬರುವ ಜಗದ ಜನರ ಬಿರುನುಡಿಗಳನ್ನು,

ಕೀಳು ಭಾವನೆಯನ್ನು ಹೊರಬೇಕಾಗುವದು. ಆದ್ದರಿಂದ ಅರಿಯದೇ ಆಚರಿಸಬೇಡ. ಮಹತ್ವ ತಿಳಿದಾಗ ಶ್ರದ್ಧೆ, ವಿಶ್ವಾಸಗಳು ಬೆಳೆಯುವವು. ತಪ್ಪುಗಳು ತಿದ್ದಿಕೊಳ್ಳುವವು. ಪುಣ್ಯ ಹೆಚ್ಚುವದು ಫಲವೂ ಪೂರ್ಣವಾಗಿ ಬರುವದು ಎಂಬ ಭಾವವನ್ನು ವ್ಯಕ್ತಮಾಡಲು ''ತಿಳಿದು ಭಜಿಸು'' ಎಂದರು ದಾಸರು.

ಇನ್ನೊಂದು ಕಾರಣವುಂಟು. ದುರ್ಯೋಧನ ರಾಜಸೂಯ ಯಾಗದ ಸಂದರ್ಭದಲ್ಲಿ ಇಂದ್ರಪ್ರಸ್ಥಕ್ಕೆ ಬಂದ. ಚೆಂದದ ಅರಮನೆಯಲ್ಲಿ ನಿಂದ. ಅದರ ಅಂದಕ್ಕೆ ಮಂದನಾದ ಕನ್ನಡಿಯ ಕಣ್ಣನ್ನು ಕೋರೆವ ಆ ಹೊಳೆವ ಮಣಿ ಮಂಡಿತ ಆ ನೆಲವನ್ನು ಸಲಿಲವೆಂದು ತಿಳಿದ. ಬಟ್ಟೆ ಎತ್ತಿ ನಡೆದ. ಸುಪ್ರಸಿದ್ಧ ಸಭಿಕರೆಲ್ಲ ಜೋರಾಗಿ ನಕ್ಕರು. ದುರಭಿಮಾನ ಬೆಟ್ಟದ ತುಟ್ಟತುದಿಯಲ್ಲಿದ್ದ ಆ ರಾಜಕುವರ ಪಾತಾಳದ ಗಡಿಯ ಅಡಿಯಲ್ಲಿ ಉರುಳಿ ಬಿದ್ದವನಂತೆ ತಲೆ ತಗ್ಗಿಸಿ ನಡೆದ.

ಮುಂದೊಂದು ಸುಂದರ ಚಿತ್ರಣ. ದೂರ ಸರಿದಿದ್ದ ಗಾಂಭೀರ್ಯವನ್ನು ಬಲಾತ್ಕಾರದಿಂದ ಬರಸೆಳೆದು ಎದೆ ಸೆಟೆಸಿ ನಡೆದ. ಅದು ನೀರಿನ ಮಡುವಾಗಿತ್ತು. ಉರುಳಿಬಿದ್ದ, ಹೊರಳಿ ತೊಯ್ದ, ಮರಳಿ ಎದ್ದ. ಇಮ್ಮಡಿಯಾಗಿ ಬಂದ ಅಪಹಾಸದ ನಗು ಇವನ ದೇಹವನ್ನೆಲ್ಲಾ ತಪ್ತ ಮಾಡಿತು. ಹಟಕ್ಕೆ ಬಿದ್ದು ಜೂಜಾಡಿ, ವನವಾಸಕ್ಕೆ ಕಳಿಸಿದ. ಕೊನೆಗೆ ತಾ ತಮವಾಸಿಯಾದ.

ಇಷ್ಟೆಲ್ಲಾ ಆಗಿದ್ದು ಕೇವಲ ತಿಳಿಯದೇ ಮುನ್ನುಗ್ಗಿದ್ದರಿಂದ. ಎಲ್ಲೆಡೆ ತಿಳಿವಳಿಕೆ ಬೇಕು. ಭಜನೆಯಲ್ಲೂ ತಿಳಿದು ಭಜಿಸು. ಇದು ದಾಸರ ಹಾರ್ದ. ಮತ್ತೊಂದು ಮಾತು ಇಲ್ಲುಂಟು. ಅರಿಯದಿರುವುದರಿಂದ ಅಪಚಾರ, ಅಪಮಾನ, ಆಸ್ತಿಪತನ, ಕಾಯಕ್ಲೇಶ ಮಾತ್ರವಲ್ಲ ತಮಸ್ಸೇ ನಿಶ್ಚಿತ.

''ಮಿಥ್ಯಾಜ್ಞಾನೇನ ಚ ತಮಃ'' ಇದು ಆಚಾರ್ಯರಾದೇಶ. ಆತ್ಮಸ್ವರೂಪದ ವಿಷಯದಲ್ಲಂತೂ ಅನಿವಾರ್ಯ.

ಆದ್ದರಿಂದ ಓ ಮಗು ತಿಳಿದು ನಡೆ, ತಿಳಿದು ನುಡಿ, ತಿಳಿದು ಭಜಿಸು, ತಿಳಿಯಾದ ಮುಕುತಿಯಲ್ಲಿ ವಿರಮಿಸು.

ಹೀಗೆ ಮುಂದಿನ ಪ್ರತಿ ನುಡಿಯಲ್ಲಿಯ ಪ್ರತೀ ಶಬ್ದಕ್ಕೂ ಅನೇಕಾರ್ಥಗಳನ್ನು ತಿಳಿಯಬೇಕು. ಸಮಯ, ಬುದ್ಧಿಯ ಕೊರತೆಯಿಂದಾಗಿ ಕೆಲವೊಂದನ್ನು ತಿಳಿಸಲು ಪ್ರಯತ್ನಿಸುವೆ.

ಪಲ್ಲ ಅನುಪಲ್ಲಗಳೆಂಬ ಪಲ್ಲವಗಳ ರುಚಿ ನೋಡಿದ ನಂತರ ನುಡಿಗಳತ್ತ ನಡೆಯೋಣ.

ಸ್ವೋಚಿತ ಕರ್ಮಗಳಾಚರಿಸುತ
ಬಲು ನೀಚರಲ್ಲಿ ಪೋಗಿ ಯಾಚಿಸದೆ
ಖೇಚರವಾಹ ಚರಾಚರ ಬಂಧಕ
ಮೋಚಕನಹುದೆಂದ್ಯೋಚಿಸುತಿಪ್ಪದೆ **॥ 1 ॥**

ಭಾಗವತ ಸಂದೇಶವನ್ನು ದಾಸರು ನುಡಿಯುವ ಈ ಪದ್ಯದಲ್ಲಿ

''ನಿನ್ನ ಕರ್ಮವ ಬಿಡದಿರು–ಅನ್ಯವನು ಮಾಡದಿರು ಸಂತರ ಸಂಗವನ್ನು ಬಿಡದಿರು. ಅದರಿಂದಲೇ ಮುಕ್ತಿ ದುಷ್ಟ ಸ್ತ್ರೀಯರಿಂದ ತಮಸ್ಸೇ ನಿಶ್ಚಿತ'' ಎಂದು

ಮಹತ್ಸೇವಾಂ ದ್ವಾರಮಾಹುರ್ವಿಮುಕ್ತೇಃ ತಮೋದ್ವಾರಂ ಯೋಷಿತಾಂ ಸಂಗಿಸಂಗಮ್
–ಭಾಗವತ

ನೀಚರಲ್ಲಿ ಎಂದೂ ಯಾಚಿಸದಿರು. ಅವರು ನೀಡುವ ಅನ್ನ ರುಚಿಯಾಗಿರಬಹುದು. ಶುಚಿ ಎಂದೆನಿಸಬಹುದು. ಆದರೆ ಪವಿತ್ರವಾಗಿರದು. ಅವರಿತ್ತ

ಅನ್ನದೊಡನೆ ಕೊಟ್ಟವರ ಕೆಟ್ಟ ಗುಣಗಳು ನಿನ್ನ ಕೊಚ್ಚಿ ಹಾಕಿ ಬೇಗನೇ ಚಟ್ಟದ ಪಟ್ಟಿ ಕಟ್ಟುವುವು. ಇದನ್ನೇ ಗರುಡಪುರಾಣ ನುಡಿಯುವುದು.

ಅವೈಷ್ಣವ ಕೃತಂ ದಾನಂ ಹರಿಭಕ್ತಸ್ಯ ದುಃಖದಮ್

ಪುಣ್ಯ ಪಾಪಗಳತ್ತ ಕಿವಿಗೊಡದ ಲೋಕದಲ್ಲಿ ಮಾನ್ಯತೆ ಬಯಸುವ ಸಾಮಾನ್ಯ ಲೌಕಿಕ ನರನಿಗೂ ಕರ್ತವ್ಯ ಕರ್ಮ ಮಾಡಿದರೆ ಜಗದಲ್ಲಿ ಬೆಲೆ. ಶೋಭೆ ಇದು ಮಹಾಭಾರತದ ಹೇಳಿಕೆ

ದ್ವೇಕರ್ಮಣೆ ನರಃಕುರ್ವನ್ ಅಸ್ಮಿನ್ ಲೋಕೆ ವಿರಾಜತೇ -ಉದ್ಯೋಗ ಪರ್ವ

ಹೊಳೆವ ದಾರಿಯನ್ನು ಮಹಾಭಾರತ ಹೇಳಿದರೆ ಸ್ಕಾಂದ ಪುರಾಣ ಅಳಿವ ದಾರಿಯನ್ನು ಹೇಳಿ ಎಚ್ಚರಿಸುತ್ತದೆ.

ನಯಾಚತೇ ಯಃ ಪುರುಷಃ ಲೋಕಸ್ಮಿನ್ ಪ್ರವಿರಾಜತೇ

ಕಂಡವರೆದರು ಬೇಡುವವಗೆ ಎಲ್ಲಿಯೂ ಬೇಡಿಕೆ ಇರುವದಿಲ್ಲ.

ದಾಸರು ಪ್ರತಿನುಡಿಯಲ್ಲಿ ದೇವರ ನಾಮವನ್ನು ನುಡಿದಿದ್ದಾರೆ. ಆದರೆ ಪ್ರತಿನುಡಿಯಲ್ಲೂ ಬೇರೆ ಬೇರೆ ಶಬ್ದಗಳು. ಆ ನುಡಿಯ ಭಾವಕ್ಕೂ ಅಲ್ಲಿ ನಿರ್ದೇಶಿತನಾಮಕ್ಕೂ ಒಂದು ಸಾಂಗತ್ಯ ಉದ್ದೇಶ ಇರಬಹುದೆಂದು ನನ್ನ ಅನಿಸಿಕೆ.

ಅರಿತುದರಲ್ಲಿ ಅಲ್ಪವನ್ನ ಅರುಹುವ ಪ್ರಯತ್ನ ಮಾಡುವೆ. ಪ್ರಥಮನುಡಿಯಲ್ಲಿ ಸತ್ಕರ್ಮ ಮಾಡು. ಅಸತ್ ಕರ್ಮ ಬಿಡು ಎಂದಾಗ ಯಾವದೋ ಮೂಲೆಯಲ್ಲಿ ನಾ ಮಾಡಿದ ಕರ್ಮ ದೂರದ ವೈಕುಂಠದಲ್ಲಿರುವ ದೇವಗೆ ಕಂಡೀತೆ? ಫಲಸಿಕ್ಕೀತೇ? ಎಂಬ ಸಂದೇಹ. ಮತ್ತು ಕದ್ದು ಮಾಡುವ ಕರ್ಮವನ್ನು ಕಾಣುವರಾರು? ಎಂಬ ಬುದ್ಧಿಯ ವೈಪರೀತ್ಯ ಉದ್ಭವಿಸಬಹುದು ಅದಕ್ಕೆ ಉತ್ತರ "**ಖೇಚರವಾಹ**" ಎಂದು. ಗಗನದಲ್ಲಿ ಸಂಚರಿಪ ಸೂಕ್ಷ್ಮದೃಷ್ಟಿಯ ಪಕ್ಷಿಯ ಮೇಲೇರಿ ಕುಳಿತವ ಇವನು ಸಹಸ್ರಾಕ್ಷ. ಎಲ್ಲೇ ಇದ್ದರೂ ಎಲ್ಲೆಡೆ ನೋಡುವ ಎಲ್ಲೆಡೆ ಇರುವ ಶಕ್ತಿವುಂಟು. ಹೀಗಾಗಿ ನಿರಾಸೆ, ಉನ್ಮತ್ತತೆ ಎಂದಿಗೂ ಬೇಡ. ಎಲ್ಲರ ಮೇಲೇರಿ ನಿಂತವ ಎನ್ನುವ ಅರ್ಥವೂ ಇದಕ್ಕುಂಟು.

ಇವನೇ ಚರಾಚರ ಬಂಧಕ ಮತ್ತು ಮೋಚಕ. ಇದನ್ನರಿತು ನಡೆದಾಗಲೇ ಬದುಕು ಸಾರ್ಥಕ.

ನಿಚ್ಚ ಸುಭಕುತಿಯೊಳಚ್ಯುತನಂಘ್ರಿಗ-
ಳರ್ಚಿಸಿ ಮೆಚ್ಚಿಸುತೆಚ್ಚರದಿ ।
ತುಚ್ಛ ವಿಷಯಗಳನಿಚ್ಛೈಸದೆ ಯ-
ದೃಚ್ಛಾ ಲಾಭದಿ ಪ್ರೋಚ್ಯನಾಗುವದೇ ॥ 2 ॥

ದಾಸರು ಬದುಕಿನ ಸಾರ್ಥಕತೆ ತಿಳಿಸಲು ಎರಡನೇ ಪದ್ಯವನ್ನು ರಚಿಸುತ್ತಾ ತಿಳಿಸುತ್ತಾರೆ.

ಅಚ್ಯುತನ ಅಂಘ್ರಿಗಳ ಅರ್ಚಿಸುವದೇ ಮುಖ್ಯವಾದ ಬದುಕಿನ ಉದ್ದೇಶವಾಗಿರಬೇಕು. ಪೂಜೆ ಮಾಡಬೇಕಾದರೆ ನೋಡುವ ಜನ ಮೆಚ್ಚಲೆಂದಾಗಲಿ, ಮೇಲಿನ ಅಧಿಕಾರಿಗಳು ಪ್ರಸನ್ನರಾಗಲಿ ಎಂದಾಗಲಿ ಅಥವಾ ಕೇವಲ ಪಾಪದ ಭೀತಿಯಿಂದಲೂ ಪೂಜಿಸುವದಲ್ಲ. ''ಭಕುತಿಯೊಳು'' ಪೂಜಿಸಬೇಕು.

ಕೇವಲ ಭಕುತಿ ಎನ್ನದೆ ಸುಭಕುತಿ ಎಂದಿದ್ದಾರೆ. ಕಾರಣ ದೇವರಲ್ಲಿ ತಾರತಮ್ಯಯುಕ್ತ ಭಕ್ತಿ ಮಾಡಬೇಕು. ದೇವರು ಮಾತ್ರ ನಮಗೆ ಸಾಕು. ಅವನ ಸೇವಕರು ನನಗೇಕೆ ಬೇಕು! ಎಂದರೆ ಅದು ಸುಭಕುತಿಯಾಗದು.

ಅವನಿಯೊಡೆಯನ ಸೇವಕರು ನಮ್ಮ ಇಂದ್ರಿಯಗಳಿಗೆ ನಿಯಾಮಕರು. ಅವರ ಪೂಜೆ ಮಾಡದಿದ್ದರೆ ಅವರು ನಮ್ಮ ಇಂದ್ರಿಯಗಳನ್ನು ದೇವರತ್ತ ಕಳಿಸಲಾರರು. ದೇವರಲ್ಲಿ ಭಕ್ತಿಯನ್ನು ಬೆಳಿಸಲಾರರು.

ಅದಕ್ಕಾಗಿ ತಾರತಮ್ಯ ಪೂರ್ವಕವಾಗಿ ಎಲ್ಲ ದೇವತೆಗಳನ್ನು ಪೂಜಿಸಿ ದೇವರನ್ನು ಪೂಜಿಸಿದರೆ ಸುಭಕುತಿಯಾಗುವದು. ಪುಷ್ಕರನಿಂದ ಆರಂಭಿಸಿ ಪ್ರತಿಯೊಬ್ಬ ದೇವತೆಯ ಮಹಿಮೆಯನ್ನು ತಿಳಿದು ಇವರೆಲ್ಲರಿಗಿಂತಲೂ ಅತ್ಯುತ್ತಮನಾಗಿದ್ದಾನೆ ಶ್ರೀಹರಿ ಎಂದಾಗ ಸರ್ವೋತ್ತಮ ಭಕ್ತಿಯಾಗುವುದು. ಈ ಭಕ್ತಿ ನಿಚ್ಚವಾಗಬೇಕು.

ಅಂದರೆ ''ಸಂಕಟಬಂದಾಗ ವೆಂಕಟರಮಣ'' ಎನ್ನುವಂತಾಗದೇ ನಿತ್ಯದಲ್ಲಿ ನಿರ್ವ್ಯಾಜ ಭಕ್ತಿಯಿರಬೇಕು. ನಿತ್ಯ ಅಂದರೆ ಈ ಜೀವನ ಪೂರ್ಣ ಎಂದು ಮಾತ್ರವಲ್ಲ ನಮ್ಮ ಈ ಪ್ರಕೃತಿಬಂಧನ ಕಡಿದ ನಂತರ ಅಂದರೆ ಮೋಕ್ಷದಲ್ಲೂ ಅವನು ಸರ್ವೋತ್ತಮನೇ ನಾ ದಾಸನೇ ಎನ್ನುವ ಭಕ್ತಿಯಿರಬೇಕು.

ಇನ್ನೊಂದರ್ಥ ನಿಚ್ಚ ಭಕುತಿ ಅಂದರೆ ನಿಶ್ಚಯ ಭಕುತ ಎಂದರ್ಥ. ಆ ಬಾಬಾ, ಈ ಗುರೂಜಿಯ ಅನುಗ್ರಹ ಪಡೆದಂತೆ ದೇವರದೂ ಸ್ವಲ್ಪ ಇರಲಿ ನೋಡೋಣ ಎಂದೂ

ಅಥವಾ ದೇವರದಾಯಿತೊ ಬಿಡ್ತೋ ನಮ್ಮದು ಸ್ವಲ್ಪ ಇರಲಿ ಎಂಬ ಸಂಶಯದಿಂದ ದೇವರ ಹತ್ತಿರ ಹೋದರೆ ಉಪಯೋಗವಿಲ್ಲ. 'ಅನ್ಯಥಾ ಶರಣಂ ನಾಸ್ತಿ' ಎಂದು ನಿಶ್ಚಯವಾಗಿ ದೇವರಲ್ಲಿ ಭಕ್ತಿ ಮಾಡಿರೆಂದು ತಿಳಿಸಲು ನಿಚ್ಚಭಕುತಿ ಎಂದಿದ್ದಾರೆ.

ನಿತ್ಯವಾದ, ನಿಶ್ಚಯವಾದ ತಾರತಮ್ಯಯುಕ್ತ ಭಕ್ತಿಯಿಂದ ಅಚ್ಯುತನ ಅಂಘ್ರಿಗಳ ಅರ್ಚಿಸಬೇಕೆಂದು ಜಗನ್ನಾಥದಾಸರು ಅಪ್ಪಣೆ ಗೈದರು.

ಇಲ್ಲೊಂದು ಸಂದೇಹ - ನಿರಂತರ ಅಂದರೆ ಮುಕುತಿಯಲ್ಲೂ ಭಜಿಸಬೇಕು ಎಂದಾಯಿತು. ನಮ್ಮ ಅರ್ಚನೆಯ ಅರ್ಧದಲ್ಲೇ ಅವನ ಅಧಿಕಾರಾವಧಿ ಮುಗಿದರೆ ನಮ್ಮ ಗತಿಯೇನು? ಮತ್ತೇ ಇನ್ನೊಬ್ಬ ಅಧಿಕಾರಿ ಬಂದರೆ ಅವನನ್ನು ಒಲಿಸಿಕೊಳ್ಳಬೇಕೆಂದಾದರೆ ಬರಡು ಬಾಳಿನ ಬಂಧನದ ಬಿಡುಗಡೆಯ ಬಯಕೆ ಬಾನಿನತ್ತ ಬೀಸಬೇಕಾದೀತು. ಇಂದಿನ ರಾಜರಂತೆ 5 ವರ್ಷದ ಮೊದಲೇ ನಿವೃತ್ತನಾಗುವನೋ 5 ವರ್ಷ ಪೂರ್ಣನಿರುವನೋ, ಈ ಜನ್ಮ ಪೂರ್ಣನಿರುವನೋ ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸಿದರು ''ಅಚ್ಯುತ'' ಎಂಬ ನಾಮವನ್ನು ಉಲ್ಲೇಖಿಸಿ.

ಈಜನ್ಮ ಅಲ್ಲ ಇಂಥಹ ಅನಂತ ಜನ್ಮ ಅಳಿದರೂ ಅಳಿಯದ ಅರಸನಿವನು. ಇವನಿಗೆ, ಇವನ ಪದಕ್ಕೆ, ಅಧಿಕಾರಕ್ಕೆ ಚ್ಯುತಿ ಇಲ್ಲ. ಇವನು ಅಚ್ಯುತ. ಇವನಿಂದಲೇ ಮುಕುತಿ ನಿಶ್ಚಿತ. ಅದಕ್ಕಿರಲಿ ನಿನ್ನ ಯತ್ನ ಸತತ.

ಎಷ್ಟು ರೀತಿಯಿಂದ ಭಕ್ತಿ ಮಾಡಿದರೂ ದೇವರ ದಯೆ ದೊರೆಯುತ್ತಿಲ್ಲವಲ್ಲ ಎಂದರೆ ಉತ್ತರ ''ಅಚ್ಯುತ'' ಮಾಡುವ ಭಕ್ತಿಯು ಅಚ್ಯುತವಾಗಿರಬೇಕು. ಸ್ವಲ್ಪ ದಿನ ಭಕ್ತಿ ಮಾಡಿದಂತೆ ಮಾಡಿ ಮಧ್ಯದಲ್ಲೇ ನಿಲುಕದ ನೇರಳೆ ಎಂದೋ ಅಥವಾ ಕಾರ್ಯ ಮುಗಿಯಿತಲ್ಲ ಮತ್ತೇಕೆ ಎಂದೋ ದೂರ ಸರಿದಲ್ಲಿ ಅದು ಅಚ್ಯುತ ಭಕ್ತಿಯಾಗದು ನಿರುಪಾಧಿಕ ಭಕ್ತಿಯಾಗಿರಬೇಕು ಎಂದರ್ಥ.

ನನ್ನಿಷ್ಟದಂತೆ, ನನ್ನ ಅರಿವಿನಂತೆ ನಾ ಪೂಜಿಸುವೆ. ಅದರಿಂದಲೇ ಫಲ ಸಿಗಲಿ ಎಂದರೆ ಸಾಧ್ಯವಿಲ್ಲ, ನಿನ್ನಲ್ಲಿ ಮೆಚ್ಚುವಂತಿರಬೇಕು. ಅಂದರೆ ಅವನು ಪ್ರೀತನಾಗಬೇಕು. ಅವನು ಪ್ರೀತನಾಗುವದು ನನ್ನಿಷ್ಟದಂತೆ ಮಾಡಿದರಲ್ಲ, ದೇವರಿಷ್ಟದಂತೆ ಮಾಡಬೇಕು. ಆಗ ಅನುಗ್ರಹ.

ದೇವರು ನನ್ನ ಸೇವೆಯಿಂದ ಸಂತುಷ್ಟನಾಗಬೇಕು. ಎಂದರೆ, ಇಲ್ಲಿಯವರೆಗೆ ಸಂತೋಷ ಇದ್ದಿದ್ದಿಲ್ಲ ಎಂದಾದೀತು. ಅದಕ್ಕೆ ಅವನು ಮೆಚ್ಚುವ ಅಂದರೆ, ''ಇವನು ನನ್ನವ'' ಎಂಬ ಭಾವನೆ ದೇವರಲ್ಲಿ ವ್ಯಕ್ತವಾಗಬೇಕು. ವಾಯುದೇವರು ''ದೀನಂ, ದೂನಂ,

........ಉದ್ಧರ'' ಎಂದು ವಾಸುದೇವನಲ್ಲಿ ಬೇಡುವಂತಾಗಬೇಕು. ಆಗಲೇ ನಿನಗೆ ಮುಕುತಿ ಬದುಕಿನ ಸಾರ್ಥಕತೆ.

ಅಚ್ಯುತನ ಅರ್ಚಿಸಿ ಮೆಚ್ಚಿಸಬೇಕಾದರೆ ತುಚ್ಛ ವಿಷಯಗಳ ಇಚ್ಛಿಸಬಾರದು.

ತುಚ್ಛವಿಷಯಗಳುಯಾವುವು? ಎನ್ನುವ ಪ್ರಶ್ನೆಗೆ ಅಧಮರು ಉತ್ತರಿಸುವ ಉತ್ತರ ''ನಮಗೆ ಹೇಸಗೆ ಬರುವ ಅಥವಾ ನಮಗೆ ಸೇರದ ವಸ್ತುಗಳು'' ಎಂದು.

ಇಂಥಹ ವಿಷಯಗಳ ತ್ಯಾಗ ಮನುಜ ಸಹಜಗುಣ. ದಾಸರುಬರೆದು ತಿಳಿಸಬೇಕಿಲ್ಲ. ಹಾಗಾದರೆ ದಾಸರ ಭಾವವೇನು?

''ನನಗಿಷ್ಟವಾದರೂ ಪಲಾಂಡು ಮೊದಲಾದ ಶಾಸ್ತ್ರ ನಿಷಿದ್ಧ ವಸ್ತುಗಳ ತ್ಯಾಗ''. ಇದೂ ಮಧ್ಯಮ ಉತ್ತರವಾದೀತು. ಉತ್ತಮ ಉತ್ತರ ಯಾವುದು ಗೊತ್ತೇ? ಶಾಸ್ತ್ರವಿಹಿತವಾದ ದೇವಪೂಜಾದಿಗಳನ್ನೇ ಐಹಿಕ ಫಲಕ್ಕಾಗಿ ಮಾಡಿದರೆ ತುಚ್ಛವೆನಿಸುವುದು. ಆದ್ದರಿಂದ ಸಕಾಮ ಕರ್ಮದ ತ್ಯಾಗ ಇದು ಮುಖ್ಯ ತ್ಯಾಗ.

ಯಾದವಾರ್ಯರು, ಸತ್ಯಧರ್ಮತೀರ್ಥಾದಿಗಳಂತೂ ಸಕಾಮಕರ್ಮಬಂಧಕ ಮಾತ್ರ ಅಲ್ಲ, ಇದರಿಂದ ದೇವರಿಗೆ ಕೋಪ ಬರುವುದರಿಂದ ಪಾಪವೇ ಬರುವುದು ಎನ್ನುತ್ತಾರೆ.

ತುಚ್ಛ ವಿಷಯಗಳ ಇಚ್ಛಿಸಬಾರದು ಎನ್ನುವುದಕ್ಕೆ ಏನೂ ಬೇಡಬಾರದು ಎನ್ನುವ ಅರ್ಥಮಾಡಿದರೆ ನಮ್ಮ ಬದುಕೇನು? ಏನೂ ಬಯಸದಿರೆ ಈ ಕರಾಳಕಲಿಯುಗದಲ್ಲಿ ಬದುಕುವುದು ಹೇಗೆ ಎಂದರೆ ದಾಸರೆಂದರು ''ಯದೃಚ್ಛಾಲಾಭದಿಂ.... '' ಬದುಕು. ಪಾಪ, ದು:ಖ ನೀ ಬೇಡವೆಂದರೂ ಹೇಗೆ ನಿನ್ನ ಕಾಲಡರುವದೊ ಹಾಗೇ ಸುಖ, ಪುಣ್ಯಗಳು ನೀ ಬೇಡದಿದ್ದರೂ ಬರುವವು. ಅದಕ್ಕಾಗಿ ಏನು ಬರುವದೊ ಅದನ್ನ ತಿಂದು ಸುಖವಾಗಿರು. ಅದರಿಂದ ಪ್ರೊಚ್ಛನಾಗುವಿ. ಆಚಾರ್ಯರು ಯದೃಚ್ಛಾ ಎನ್ನುವುದಕ್ಕೆ ನಮ್ಮ ಅದೃಷ್ಟದಿಂದ ಬಂದದ್ದು ಎಂಬ ಅರ್ಥ ಮಾಡದೇ ಯದೃಚ್ಛಾ ಎಂದರೆ ಹರೀಚ್ಛಾ ಎಂದು ಅರ್ಥೈಸುವರು.

ನಿತ್ಯವಾದ ಎಲ್ಲ ಪದಾರ್ಥಗಳು ದೇವರ ಅಧೀನವಾದಂತೆ ಎಲ್ಲ ಸುಖ-ದು:ಖಗಳು ದೇವಾಧೀನ. ಏನೇಬಂದರೂ ಅದು ದೇವರ ಪ್ರಸಾದವೆಂದು ಅನುಸಂಧಾನಿಸಿಕೊ ದು:ಖದ ಅನುಭವ ಕಡಿಮೆ ಆಗುವದು. ಆಗಲೂ ಆನಂದವೇ ಆಗುವದು. ಆಗಲೇ ನೀಉಚ್ಛ ಮಾತ್ರವಲ್ಲ ಪ್ರೊಚ್ಛನಾಗುವಿ.

ಗೀತೆ – ಭಾಗವತಗಳು ಸಾರಿ–ಸಾರಿ ಸಾವಿರಾರು ಬಾರಿ ಹೇಳುವದು ಇದೇ ಅಲ್ಲವೆ.

ಹರಿಯಿಚ್ಛೆ ಇಲ್ಲದಿದ್ದರೂನನ್ನ ಸಾಹಸದಿಂದ ಸಾಧಿಸುವೆ ಎಂಬ ಉದ್ಧಟನಿಗೆ ಹರಿಕಥಾಮೃತಸಾರದ ಸರ್ವಪ್ರತೀಕ ಸಂಧಿಯಲ್ಲಿ ''ಸೂಸಿ ಬಹುನದಿಯೊಳಗೆ .....'' ಎಂಬುವಲ್ಲಿ ಅಸಾಧ್ಯವೆಂದು ತಿಳಿಸುವರು.

ಆದ್ದರಿಂದ ಅಚ್ಯುತನ ಅರ್ಚಿಸಿ ತುಚ್ಛಗಳ ತ್ಯಜಿಸಿ ಪ್ರೌಚ್ಛನಾಗು.

ಮನವಾಕ್ಕಾಯದೊಳನುಭವಿಸುವ ದಿನ-
ದಿನದ ವಿಷಯ ಸಾಧನಗಳನು ।
ಅನಿಲಾಂತರ್ಗತ ವನರುಹದಳಲೋ-
ಚನಗರ್ಪಿಸಿ ದಾಸನು ನಾನೆಂಬುದೆ ॥ 3 ॥

ದೇವನೇ ಈಶ. ನಾನವನ ದಾಸ ಎಂಬ ಜ್ಞಾನ ಮೋಕ್ಷ ಸಾಧನ ಎಂದು ಹಿಂದಿನ ನುಡಿಯಲ್ಲಿ ತಿಳಿದಾಯಿತು.

ನಾ ದಾಸನಾಗಿರಬೇಕಾದರೆ ನಾನೇನು ಮಾಡಬೇಕು? ಎಂದು ತಿಳಿಸುವದು ಈ ನುಡಿ.

ನನಗಿರುವದು ಬಾಹ್ಯ ಇಂದ್ರಿಯಗಳು 10. ಒಂದು ಆಂತರ. ಅದೇ ಮನಸ್ಸು. ಬಾಹ್ಯೇಂದ್ರಿಯಗಳಲ್ಲಿ ಪಂಚಜ್ಞಾನೇಂದ್ರಿಯ ಪಂಚಕರ್ಮೇಂದ್ರಿಯಗಳುಂಟು. ಈ ಹನ್ನೊಂದು ಇಂದ್ರಿಯಗಳಿಂದ ಅನುಭವಿಸುವ ವಿಷಯಗಳನ್ನು ಹರಿಗರ್ಪಿಸುವದು ಒಂದು ಬಗೆಯಾದರೆ ಮತ್ತೊಂದು ಹೊಸ ಬಗೆಯನ್ನು ಇಲ್ಲಿ ತಿಳಿಸುತ್ತಿರುವರು.

ಮನಸ್ಸು, ಮಾತು, ದೇಹವೆಂಬ ತ್ರಿಕರಣವನ್ನು ಶುದ್ಧ ಮಾಡಿಕೊಂಡು ಇವುಗಳಿಂದ ಅನುಭವಿಸುವ ಪದಾರ್ಥಗಳನ್ನು ದೇವರ ಕಾರುಣ್ಯದ ಕೊಡುಗೆ ಎಂದು ಅರಿಯಬೇಕು. ಇದನ್ನೋದಿದ ದಿನದಂದು ಒಂದು ಬಾರಿ ಅರ್ಪಿಸಿದರೆ ಸಾಕೆ? ಇಲ್ಲ.

''ದಿನ–ದಿನದಿ ವಿಷಯ ಸಾಧನಗಳನು'' ಪ್ರತಿದಿನವೂ ಅಂದಿನ ವಿಷಯಗಳನ್ನು ಸಾಧನಗಳನ್ನು ಹರಿಯ ಅಧೀನ. ಈ ಭೋಗವೂ ಒಂದು ಹರಿಯ ಪೂಜೆ ಎಂದರಿಯಬೇಕು. ಹೀಗೆ ನಾವು ಮಾಡುವ ಸಕಲ ಕರ್ಮಗಳನ್ನು ದೇಹದ ಪುಷ್ಟಿಗಾಗಿ, ಸಂಸಾರದ ಸುಖಕ್ಕಾಗಿ ಮಾಡಿದ ಭೋಗವು ಬಂಧಕವಾಗದೇ ಪೂಜೆ ಎನಿಸುವದು.

ಕರ್ಮಾಭಿಮಾನ ತೊರೆದರೆ ಕರ್ಮಲೇಪವೆಲ್ಲಿ.

ಇಲ್ಲಿ ದೇವನನ್ನು "ವನರುಹದಳ ಲೋಚನ" ಎಂಬ ಪಾದದಿಂದ ಕರೆದಿದ್ದಾರೆ ಏಕೆ?

ಇದಕ್ಕೂ ಮೊದಲ ಪ್ರಶ್ನೆ ಹರಿ ವಾಚಕ ಏಕೆ? ಕಮಲದಂತೆ ಕಣ್ಣುಳ್ಳವ ಇವನೇ ಏಕೆ? ಎಂದವಗೆ ವಿಷ್ಣುವಿನ ನಾಮವನ್ನೇ ಹೇಳಲು ಹೊರಟ ವಿಷ್ಣುಸಹಸ್ರನಾಮ ಉತ್ತರಿಸುವದು "ಅಮೋಘಃ ಪುಂಡರೀಕಾಕ್ಷ" ಮತ್ತು "ಪದ್ಮನಾಭೋ ಅರವಿಂದಾಕ್ಷ" ಎಂಬ ಶ್ಲೋಕ. ಇನ್ನು ಈ ಪದ ಇಲ್ಲೇಕೆ ಎಂದರೆ ಕಮಲದಂತೆ ವಿಶಾಲವಾದ ಕಣ್ಣಿದ್ದ ಮೇಲೆ ದೃಷ್ಟಿಯು ವಿಶಾಲ. ನಮ್ಮ ಸಣ್ಣ ಕರ್ಮವನ್ನು ಸೂಕ್ಷ್ಮವಾಗಿ, ಹಿರಿದಾಗಿ ನೋಡಿ ಫಲನೀಡುವ.

ಮತ್ತೊಂದು ಕಾರಣ-ಕಮಲ ನೀರಿನ, ಕೆಸರಿನ ಮಧ್ಯೆ ಇದ್ದರೂ, ಅದರ ಲೇಪವಿಲ್ಲ. ನಿತ್ಯನೂತನ ಸುಂದರ ಹಾಗೇ ಹರಿಯೂ ಕೆಸರಿನಂತಿರುವ ನಮ್ಮಲ್ಲಿದ್ದರೂ ಕರ್ಮಗಳನ್ನೆಲ್ಲ ಹೊತ್ತರೂ ಅವನಿಗಾವ ಲೇಪವಿಲ್ಲ.

ಅಳಕು ಅಳುವುಗಳಿಲ್ಲದ ಅರಿವಿನ ಸಾಗರ, ಅವ. ಇದನ್ನು ಹರಿಕಥಾಮೃತಸಾರದ ಧ್ಯಾನ ಪ್ರಕ್ರಿಯಾಸಂಧಿಯ 14ನೇ ಪದ್ಯದಲ್ಲಿ ಹೇಳಿದರು

.... "ಸುಖದುಃಖಾದಿ ದ್ವಂದ್ವಗಳ ನಿರುತ ಅವನಂಘ್ರಿಗೆ ಸಮರ್ಪಿಸಿ" ... ಎಂದು.

ನನಗೂ ಹರಿಗೂ ನೇರ ವ್ಯವಹಾರವುಂಟು ನಾ ಮಾಡುವ ಅರ್ಪಣೆಗೆ ಮಧ್ಯವರ್ತಿಗಳಾರು ಬೇಕಿಲ್ಲ, ಅನ್ನುವಂತಿಲ್ಲ

"ಅನಿಲಾಂತರ್ಗತ.........."

ಅರ್ಪಣೆಯ ಅರಿವು ನನಗಿರಬಹುದು. ಆದರೆ ನುರಿತವನು ನಾನಲ್ಲ, ಆದ್ದರಿಂದ ನಮ್ಮ ತಾಯಿಯಂತಿರುವ, ಈ ದಾರಿ ತೋರಿದ ಮಧ್ವರ ಕೈಯಲ್ಲಿ ಕೊಡೋಣ. ಶೋಧಿಸಿ ನೀಡಿರೆಂದು ಬೇಡೋಣ.

ಕೊಡುವುದಾದರೂ ವಾಯುವಿಗೇಕೆ ನೀಡಬೇಕು.

"ತಸ್ಮಿನ್ನಪೋ ಮಾತರಿಶ್ವಾ ದದಾತಿ"

ಎಂದು ಈಶಾವಾಸ್ಯೋಪನಿಷತ್ ಉತ್ತರಿಸುವದು.

ನಮ್ಮೆಲ್ಲ ಕರ್ಮಗಳನ್ನು ಹರಿಗರ್ಪಿಸುವವನೇ ವಾಯು. ಇದು ದೇವ ಅವನಿಗಿತ್ತ ವೈಭವ. ಇವನಿತ್ತರೇ ಹರಿಗೆ ಬಲು ಪ್ರೀತಿ. ಇವನಿದ್ದಲ್ಲಿ ಇರುವ. ಇವನು ಕೊಟ್ಟಿದ್ದನ್ನು ಸ್ವೀಕರಿಸುವ. ಅದಕ್ಕಾಗಿ ಜಗನ್ನಾಥದಾಸರು ಪ್ರಾಣದೇವನ ಪರಿಪರಿಯ ವೈಭವವನ್ನು ಪೊಗಳುತ್ತಾ ಸ್ತುತಿಸಿದರು.

ಪರಿಸರ ನೀನಿರೆ ಹರಿ ತಾನಿರುವನು ಇರದಿರೆ ತಾ ನಿರನು

ಉಪನಿಷತ್ತಿನ ಈ ಕಥೆ ಸುಪ್ರಸಿದ್ಧ. ಬ್ರಹ್ಮ ನಿರ್ಮಿಸಿದ ಆ ದೇಹದಲ್ಲಿ ಎಲ್ಲ ಇಂದ್ರಿಯ ಅಭಿಮಾನಿಗಳು ಹೊರಹೊರಟರೂ ಚೇತನ ಹೋಗಲಿಲ್ಲ. ಪ್ರಾಣದೇವ ಇದ್ದ ನಿಮಿತ್ತದಿಂದ.

ಎಲ್ಲರಿದ್ದರೂ ದೇಹ ಬೀಳ ತೊಡಗಿತು. ಪ್ರಾಣದೇವ ಹೊರಟುದರಿಂದ. ಆದ್ದರಿಂದ ಎಲ್ಲರಿಗಿಂತ ಉತ್ತಮ ನಮ್ಮ ವಾಯು. ಆ ಜೀವೋತ್ತಮನ ಅಣತಿಯಿಂದಲೇ ಎಲ್ಲ ಇಂದ್ರಿಯಾಭಿಮಾನಿಗಳು ನಮ್ಮನ್ನು ಪ್ರೇರಿಸುವರು. ಯಾವ ಇಂದ್ರಿಯ ಭೋಗವಿದ್ದರೂ ಅದು ಅನಿಲಾಂತರ್ಗತ ವನರುಹದಳಲೋಚನಿಗೆ ಅಂದರೆ ಮಧ್ವಾಂತರ್ಗತ ಶ್ರೀಕೃಷ್ಣನಿಗೆ "ಅರ್ಪಿತ" ನೆನ್ನಬೇಕು. ಅರ್ಪಿಸುತ್ತಾ "ನಾ ದಾಸ" ಎಂದು ಹೇಳಿ ಸ್ಮರಿಸಬೇಕು. ಇದನ್ನು ಹೇಳಿದವನು ಆ ವಾಯುವೇ

ದಾಸೋಹಂ ಕೋಸಲೇಂದ್ರಸ್ಯ

ಎಂಬ ಮಾತಿನಿಂದ ದಾಸನೆಂದು ನಾ ತಿಳಿಯುವುದಲ್ಲದೆ ದೇವರಿಗೆ ದಾಸನಾಗಿ ನನ್ನ ಸ್ವೀಕರಿಸೆಂದು ಬೇಡಬೇಕು.

ಭೃತ್ಯಸ್ಯ ಭೃತ್ಯ ಇತಿಮಾಂ ಸ್ಮರ ಲೋಕನಾಥ

ಇದನ್ನೇ ಹರಿಕಥಾಮೃತಸಾರದ ಧ್ಯಾನ ಪ್ರಕ್ರಿಯಾ ಸಂಧಿಯಲ್ಲಿ

"ಮನವೇ ಮೊದಲಾದಿಂದ್ರಿಯಗಳೊಳಗನಿಲದೇವನು......" ಎಂದು ಸೂಚಿಸುವರು.

ಪ್ರತಿನಿತ್ಯ ಪ್ರತಿಯೊಬ್ಬ ಸಾಧಕನೂ ಮಾಡಲೇ ಬೇಕಾದ ಮುಖ್ಯಾನುಸಂಧಾನ **"ಮಮಸ್ವಾಮೀ ಹರಿರ್ನಿತ್ಯಂ ಸರ್ವಸ್ಯ ಪತಿರೇವ ಚ"** ಎಂದು.

ಎನ್ನ ಸ್ವಾಮಿಯಾದ ಹರಿ ಸರ್ವಸ್ವಾಮಿಯಾಗಿದ್ದಾನೆ ಎಂದು ತಿಳಿಯಬೇಕು. ಆ ದೇವ ಜಗದೊಡೆಯ ಎಂದು ತಿಳಿಯಬೇಕಾದಲ್ಲಿ ಜಗತ್ತಿನ ಜ್ಞಾನ ಅನಿವಾರ್ಯ. ಅದನ್ನು ತಿಳಿಸುವರು ಈ ಪದ್ಯದಲ್ಲಿ

ವಾಸವ ಮುಖ ವಿಬುಧಾಸುರ ನಿಚಯಕೆ
ವಾಸುದೇವನೇ ಶುಭಾಶುಭದಾ ।
ಈ ಸಮಸ್ತ ಜಗಕೀಶ ಕೇಶವಾ
ನೀಶ ಜೀವರೆಂಬೀ ಸುಜ್ಞಾನವೆ ॥ 4 ॥

ಇಂದ್ರಾದಿ ದೇವತಾಸಮೂಹಕ್ಕೆ ಮತ್ತು ದೈತ್ಯರಿಗೆ ಶುಭಾಶುಭಗಳ ಕೊಡುವವ ಹರಿಯೇ. ಇಲ್ಲಿ ವಿಭಾಗ ಮಾಡಿ ಅರ್ಥ ಮಾಡಿಕೊಳ್ಳಬೇಕು.

ದೇವತಾಸಮೂಹಕ್ಕೆ ಶುಭವನ್ನು ದೈತ್ಯರಿಗೆ ಅಶುಭವನ್ನು ಕೊಡುತ್ತಾನೆ ಎಂದರ್ಥ.

ದೇವತೆಗಳಿಗೆ ಸೋಲು ದೈತ್ಯರಿಗೆ ಗೆಲುವು ಕೆಲವೊಮ್ಮೆ ಆಗುತ್ತದೆ. ಅಂದಮೇಲೆ ದೇವತೆಗಳಿಗೇ ಶುಭ, ದೈತ್ಯರಿಗೆ ಅಶುಭ ಎಂದು ಎಲ್ಲಾಗುವದು. ಎಂದರೆ ದೇವತೆಗಳಿಗೆ ಸೋಲು ಬಂದರೆ ಭಕ್ತಿ ಬೆಳೆದು ಸಾಧನೆ ಹೆಚ್ಚುವದು ಇದರಿಂದ ಇವರಿಗೆ ಶುಭವೇ. ದೈತ್ಯರಿಗೆ ಗೆಲುವಾದರೆ ಧರ್ಮದ ನಿಂದೆಗೆ, ಉನ್ಮತ್ತತೆಗೆ ಅವಕಾಶವಾಗಿ ಅಶುಭವೇ ಆಗುವದು.

ಆದ್ದರಿಂದ ಫಲದ ದೃಷ್ಟಿಯಿಂದ ಹೇಳಿದ್ದಿದು ಎಂದು ತಿಳಿಯಬೇಕು.

ಇನ್ನೊಂದರ್ಥ ''ಶುಭ'' ಎರಡಕ್ಷರದ ಶಬ್ದ ಅಂದರೆ ದ್ವೈತ ಇದು ಶುಭ ದ್ವೈತವಾಗದಿದ್ದದ್ದು ಅಶುಭ ಎಂದು.

ಒಬ್ಬರಿಗೆ ಶುಭವನ್ನೇ ಒಬ್ಬರಿಗೆ ಅಶುಭವನ್ನೇ ನೀಡಿದರೆ ಪಕ್ಷಪಾತವಲ್ಲವೇ ಎಂದು ದೇವರನ್ನು ಕೇಳಿದರೆ ದೇವರು ಪುಣ್ಯ-ಪಾಪದತ್ತ ಬೆರಳು ಮಾಡುವ. ಪುಣ್ಯ-ಪಾಪಕರ್ಮ ಮಾಡಿಸುವವ ನೀನಲ್ಲವೇ? ಎಂದರೆ ಅವರವರಸ್ವರೂಪ ಎಂದು ಉತ್ತರ ನೀಡುವ. ಸ್ವರೂಪ ನಿತ್ಯ ಅದಕ್ಕೆ ಪ್ರಶ್ನೆಯಿಲ್ಲ. ದೇವರಲ್ಲಿ ಪಕ್ಷಪಾತವೂ ಇಲ್ಲ.

ಇನ್ನು ಇಲ್ಲಿ ದೇವನನ್ನು ''ವಾಸುದೇವ'' ಎಂಬ ನಾಮದಿಂದ ಕರೆದಿದ್ದಾರೆ.

ಕಾರಣ ಶುಭ ಅಂದರೆ ಮೋಕ್ಷ. ಅಶುಭ ಅಂದರೆ ತಮಸ್ಸು ಎಂದರ್ಥ. ಮೋಕ್ಷ ಕೊಡುವ ರೂಪ ತುರೀಯರೂಪ ಎಂಬುದು ಮಾಂಡೂಕ್ಯದ ವಚನ. ಅದೇ ವಾಸುದೇವ ರೂಪ ಎಂಬುದು ಟಿಪ್ಪಣಿಕಾರರ ಮಾತು. ಶುಭ (ಮೋಕ್ಷ) ಕೊಡುವ ಪ್ರಸಂಗ ಬಂದದ್ದಕ್ಕಾಗಿ ಲಿಂಗಭಂಗಮಾಡಿ ಮೋಕ್ಷವನ್ನು ಕೊಡುವ ವಾಸುದೇವನನ್ನು ಸ್ಮರಿಸಿ ಉಪನಿಷತ್ತಿನ ಸಂದೇಶ ಸೂಚಿಸಿದ್ದಾರೆ.

ಮೋಕ್ಷ ಬರುವವರೆಗೆ ದೇವರು ಬೇಕು ನಂತರ ದೇವರ ಅಪೇಕ್ಷೆ ಬೇಕಿಲ್ಲ ಎನ್ನುವಂತಿಲ್ಲ. **ಆನಂದದಶ್ಚ ಮುಕ್ತಾನಾಂ......** ಮುಕ್ತರಿಗೆ ಆನಂದನೀಡುವವ ಹರಿಯೇ.

ವಸು ಎಂದರೆ ಸಂಪತ್ತು ಅದಕ್ಕೆ ದೇವನೇ ವಾಸುದೇವ. ಧನ ಸಂಪತ್ತೋ, ಧಾನ್ಯ ಸಂಪತ್ತೋ, ವಿದ್ಯಾಸಂಪತ್ತೋ ಇದರಿಂದ ಬರುವ ಆನಂದ ಸಂಪತ್ತೋ ಯಾವದೇ ಸಂಪತ್ತಿದ್ದರೂ ಅದರ ಒಡೆಯ ವಾಸುದೇವ. ಮುಕ್ತಿಯಲ್ಲಿ ಆನಂದ ಕೊಡುವ ಎಂಬುದನ್ನು ತಿಳಿಸಲು ಈ ನಾಮವನ್ನು ಉಲ್ಲೇಖಿಸಿದ್ದಾರೆ.

ವಾಸವ (ಇಂದ್ರ) ಮೊದಲಾದ ವಿಬುಧ (ದೇವತೆಗಳಿಗೆ)ರಿಗೆ ಶುಭ (ಮೋಕ್ಷ)ವನ್ನು, ಅಸುರ ನಿಚಯಕೆ ಅಶುಭ (ತಮ)ವನ್ನು ಕೊಡುವ ವಾಸುದೇವ ಎಂದು ತಿಳಿವುದು ಬದುಕಿನ ಸಾರ್ಥಕತೆ ಎಂದಾಯಿತು.

ದೇವತೆಗಳಿಗೆ ಸುಖಕೊಡುವ ಮೋಕ್ಷ, ದೈತ್ಯರಿಗೆ ದುಃಖಕೊಡುವ ತಮಸ್ಸು ನೀಡುವುದು ವೈಷಮ್ಯವಲ್ಲವೇ? ಎಂದರೆ ದಾಸರ ಹರಿಕಥಾಮೃತಸಾರದಲ್ಲಿ ದೃಷ್ಟಾಂತ ಪೂರ್ವಕ ಉತ್ತರಿಸುವರು.

ಮೋಡ ಎಲ್ಲ ಗಿಡಗಳ ಮೇಲೆ ಒಂದೇ ರೀತಿಯಾಗಿ ಮಳೆ ಸುರಿಸಿದರೂ ಮಾವಿನಲ್ಲಿ ಸಿಹಿ, ಬೇವಿನಲ್ಲಿ ಕಹಿ, ಹುಣಿಸೆಯಲ್ಲಿ ಹುಳಿ ರುಚಿ ಕಾಣುವುದು. ಗಿಡದ ಸ್ವಭಾವ. ಇದ್ದದ್ದನ್ನು ಬೆಳೆಸುವದು ಮಳೆಯ ಸ್ವಭಾವ. ಒಂದೇ ನೀರು ಒಂದೇ ಗಿಡದಲ್ಲಿ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯ ರೂಪ, ಸ್ಪರ್ಶ, ರುಚಿ ಆಕಾರಗಳನ್ನು ವಿಕಾರಗೊಳಿಸಿದರೂ ಯಾರೂ ಮಳೆಯನ್ನು ನಿಂದಿಸಲಾರರು. ನಿಂದಿಸಿದರೇ ಅವನೇ ನಿಂದ್ಯನಾಗುವ. ಹಾಗೇ ದೇವ ಪುಣ್ಯ ಮಾಡುವ ಸ್ವಭಾವದ ದೇವತೆಗಳಿಗೆ ಸುಖ, ಪಾಪದ ದೈತ್ಯರಿಗೆ ದುಃಖ ನೀಡಿದರೂ ದೋಷ ಲೇಶವೂ ಇಲ್ಲ.

ಇದರ ಜೊತೆಯಲ್ಲಿ ಸರ್ವೋತ್ತಮತ್ವ ಜ್ಞಾನವೂ ಅತ್ಯಾವಶ್ಯ. ಇಲ್ಲವಾದರೆ ನಮಗೆ ಇವನು ನಾಯಕನಾದರೆ ಇವನಿಗೆ ಮತ್ತೊಬ್ಬ ನಾಯಕ ನಿರಬಹುದು. ನಾವು ಭಜಿಸುವ ದೇವರಿಗೆ ನಮ್ಮ ಮೇಲೆ ಪ್ರೀತಿ ಇದ್ದು ಕರುಣಿಸಬೇಕೆಂಬ ಆಸೆಯಿದ್ದರೂ, ಈ ದೇವನ ನಿಯಾಮಕ ಬೇಡ ಎಂದರೆ ನಮಗೆ ಫಲವೇ ದೂರಾದೀತು ಎಂಬ ಸಂದೇಹ ಬರುವದು.

ಅದಕ್ಕೆ ದಾಸರೆಂದರು ''ಈ ಸಮಸ್ತ ಜಗಕೆ ಈಶ ಕೇಶವ'' ನಮಗೆ ಮಾತ್ರ ಒಡೆಯ ಈ ಶ್ರೀಹರಿ. ಇವನ ಒಡೆತನದ ಅಡಿಯಲ್ಲಿ ಅಡಗದ ಒಬ್ಬ ಒಡೆಯವುಂಟು ಎಂದು ತಿಳಿಯದಿರಿ ಸಮಸ್ತ ಜಗಕ್ಕೆ ಒಡೆಯನಾದ ಇವನ ಅಧೀನರಾಗದವರು ಯಾರೂ ಇಲ್ಲ.

ಕೇವಲ ಜಗತ್ತು ಎಂದರೆ ಸಾಕಲ್ಲ. ಸಮಸ್ತ ಯಾಕೆ? ಅಂದರೆ ನಮ್ಮ ಶಾಲೆಗಳಲ್ಲಿ ತೋರಿಸುವ ಗೋಲಾಕಾರದ ಜಗತ್ತನ್ನು ನೋಡಿದಾಗ ಇಷ್ಟೇ ಜಗತ್ತು ಎಂಬ ಭ್ರಮೆ ಬರುವದು. ನೀನೊಡುವ ತಿಳಿದ ಜಗತ್ತು ಜಗತ್ತೇ. ಇದೊಂದೇ ಜಗತ್ತೆಂದು ತಿಳಿಯಬೇಡ. ಇಂಥ ಸಾವಿರಾರು ಜಗತ್ತು ಕಳೆದಿವೆ. ಕಳೆಯುತ್ತಿವೆ. ಹಿಂದಿನ, ಇಂದಿನ, ಮುಂದಿನ ಎಲ್ಲ ಜಗತ್ತುಗಳಿಗೆ ಏಕಮಾತ್ರ ಒಡೆಯ ಕೇಶವ.

ಜಗಕೀಶನನ್ನು ''ಕೇಶವ'' ಎಂಬ ನಾಮದಿಂದ ಏಕೆ ಕರೆದಿರಬಹುದು.

ಇದಕ್ಕೆ "ಕಂ" ಅಂದರೆ ಸುಖ. ಯಾವದೇ, ಯಾರದೇ ಸುಖವಿದ್ದರೂ ಈಶ ಇವನೇ. ಎಲ್ಲರಿಗೂ ಸುಖಬೇಕು. ಎಲ್ಲ ಸುಖವೂ ಇವನಧೀನ ಎಂದ ಮೇಲೆ ಎಲ್ಲರೂ ಇವನಧೀನ ಎಂದಂತಾಗಲಿಲ್ಲವೆ.

ಇನ್ನೊಂದು ಕಾರಣ ಬ್ರಹ್ಮಸೃಷ್ಟಿಕರ್ತನೆಂದು ಶಿವನು ಲಯಕರ್ತೃವೆಂದು ಪ್ರಸಿದ್ಧರಾಗಿದ್ದಾರೆ. ಇವರಿಬ್ಬರೂ ಹರಿಯ ಅಧೀನ ಎಂದು ತಿಳಿಸಲು ಕೇಶವ ಎಂದಿದ್ದಾರೆ.

ಕ = ಬ್ರಹ್ಮ, ಈಶ = ರುದ್ರ ಇವರನ್ನು ಪ್ರೇರಿಸುವ ಕೇಶವ.

ಜಗಕೀಶ ಎಂದು ವರ್ಣಿಸುವ ಈ ಪ್ರಸಂಗದಲ್ಲಿ ಕೇಶವ ಪದ ಔಚಿತ್ಯ ಪೂರ್ಣ ಅಲ್ಲವೇ. ಇದನ್ನೇ ಹರಿವಂಶ ಸಾರುತ್ತಿದೆ.

"ಸಮಸ್ತ ಜಗತಃ ಸ್ವಾಮಿ ವಿಷ್ಣುರೇವ ನಚಾಪರಃ"

ಇಂದು ಹರಿಯು ಸರ್ವೋತ್ತಮ ಎಂದಾಗಲಿ. ಇಂದಲ್ಲ ನಾಳೇ ನಾನೂ ಆಗಬಹುದಲ್ಲ ಎಂದರೆ ದಾಸರು ಹೇಳಿದರು "ಅನೀಶ ಜೀವರು"

ದೇವನೊಬ್ಬನೇ ಈಶ. ನಾ ಸದಾ ಅವನ ದಾಸ ಎಂದರೇ ಮಾತ್ರ ಸಾರ್ಥಕ ಬದುಕು.

ನನ್ನಿಚ್ಛೆಯಂತೆ ದುಃಖ ಹೋಗಿಲ್ಲ. ಎಷ್ಟೋ ಬಾರಿ ಬಯಸದ ಭಾಗ್ಯ ಬಂದಿದೆ. ಮರಣದ ದಿನ ಗೊತ್ತಿಲ್ಲ. ಹಿಂದಿನ ಜನ್ಮ ನೆನಪಿಲ್ಲ. ನನ್ನ ಮಾತು ಮಡದಿ ಮಕ್ಕಳೂ ಕೇಳುತ್ತಿಲ್ಲ. ಇಷ್ಟೆಲ್ಲ ಇದ್ದೂ ನಾನಾವ ಬಾಯಿಯಿಂದ ಈಶನೆಂದು ಹೇಳಲಿ. ಕೇವಲ ಹೀಗೆ ತಿಳಿದರೆ ಸುಜ್ಞಾನವಾಗದು. ಅದು ಅನುಭವಕ್ಕೆ ಸದಾ ಬರುತ್ತಿದ್ದರೆ ಮಾತ್ರ.

ಇದನ್ನೇ ಸ್ಥಾವರ ಜಂಗಮಸಂಧಿಯಲ್ಲಿ "ಅಸ್ವತಂತ್ರನು ಜೀವ....." ಎಂಬಲ್ಲಿ ದಾಸರು ವಿವರಿಸಿದ್ದಾರೆ.

ನಾವೆಲ್ಲ ದೇವರ ಕೈಯಲ್ಲಾಡುವ ಕಟ್ಟಿಗೆಯ ಗೊಂಬೆಗಳು ಎಂಬ ಈ ಜ್ಞಾನ ಎಂದು ಪಕ್ವವಾಗುವುದೋ ಅಂದು ಭಗವಂತ ಸಂಸಾರ ಕಳಚಿ ತನ್ನ ವರನ್ನಾಗಿ ಮಾಡಿಕೊಳ್ಳುವ.

ಪಂಚ ಭೇದಯುತ ಪ್ರಪಂಚ ಸುಸತ್ಯ
ವಿರಿಂಚಿಮುಖರು ಬಲಿ ವಂಚಕಗೆ
ಸಂಚಲಪ್ರತಿಮೆಯು ಚಂಚಲಪ್ರಕೃತಿಲಿ
ಸಂಚಿಂತಿಸಿ ಮುದ ಲಾಂಛನಾಗುವದೆ" ॥ 5 ॥

ಪಂಚದ ಪ್ರಪಂಚವೇ (ವಿಸ್ತಾರ) ಈ ಪ್ರಪಂಚ (ಜಗತ್ತು).

ಈ ಪಂಚವಿಧಗಳನ್ನು ಹಲವರು ಹಲವು ಬಗೆಯಾಗಿ ಬಣ್ಣಿಸುವರು. ಎಲ್ಲದರ ಮೂಲೋದ್ದೇಶವೂ ಭೇದವನ್ನೇ ತಿಳಿಸುವದು. ಆದ್ದರಿಂದ ಎಲ್ಲವೂ ಸರಿಯೇ.

ಪ್ರಸಿದ್ಧವಾದ ಮುಖ್ಯವಾದ ಭೇಧ ಪಂಚಕವನ್ನು ವಿಷ್ಣು ತತ್ವನಿರ್ಣಯದಲ್ಲಿ ಕಾಣುತ್ತೇವೆ.

ಜೀವೋ ಭೇದೋ ಮಿಥಶ್ಚೈವ ಜಡಜೀವ ಭಿಧಸ್ತಥಾ
ಮಿಥಶ್ಚ ಜಡ ಭೇದೋಯಂ ಪ್ರಪಂಚೋ ಭೇದ ಪಂಚಕಃ ॥

ಜೀವ ಈಶ ಭೇದ, ಜೀವ ಜೀವ ಭೇದ, ಜೀವ ಜಡ ಭೇದ, ಜಡ-ಜಡ ಭೇಧ. ಜಡ ಈಶ ಭೇದ ಹೀಗೆ ಐದು ರೀತಿಯ ಭೇದಗಳನ್ನು ತಿಳಿಯಬೇಕು.

ಇದನ್ನೇ ಪುರಂದರದಾಸರು ''ಸತ್ಯ ಜಗಕಿದು ಪಂಚಭೇಧವು'' ಎಂಬ ಪದ್ಯದಲ್ಲಿ ತಿಳಿಸುವರು.

''ಜೀವ ಈಶಗೆ ಭೇದ ಸರ್ವತ್ರ ಜೀವ ಜೀವಕೆ ಭೇಧವು
ಜೀವ ಜಡ ಜಡ ಜಡಕೆ ಭೇಧವು ಜೀವಜಡ ಪರಮಾತ್ಮಗೆ'' ಎಂದು

ಜೀವ-ಜಡ-ಈಶ ಈ ಮೂರನ್ನು ಸೇರಿಸಿದ ಪಂಚಕ ಒಂದಾದರೆ. ಕೇವಲ ಜೀವರಲ್ಲೇ ಪಂಚ ವಿಧ ತಿಳಿಸುವರು ಕೆಲವರು.

ಅಥವಾ ಮೇಲೆ ತಿಳಿದ ಜೀವ-ಜೀವರ ಭೇದ ಎಂಬುದರ ವಿವರಣೆ ಎಂದಾದರೂ ತಿಳಿಯಬಹುದು. ಬ್ರಹ್ಮಾದಿ ತತ್ವೇಶದೇವತೆಗಳು, ಬಲ್ಯಾದಿ ಪುಷ್ಕರಾಂತ ಕರ್ಮಜ ದೇವತೆಗಳು, ಅಜಾನಜ ಗಂಧರ್ವರು, ಮನುಷ್ಯೋತ್ತಮರು, ಪಶ್ವಾದಿಗಳು.

ಅಥವಾ ಜೀವರಲ್ಲಿ ಜಡ ಜೀವರು. ಚೇತನ ಜೀವರು ಎಂದು ಎರಡು ವಿಭಾಗ ಮಾಡಿ ಜೀವ, ಜಡ, ಈಶ ಈ ಮೂರರಲ್ಲಿ ಐದು ಭೇದ ಕಂಡಂತೆ ಈಶ, ಜಡಜೀವ, ಚೇತನ ಜೀವ ಈ ಮೂರರಲ್ಲಿ ಐದು ವಿಭಾಗ ಮಾಡಬಹುದು.

ಜಡಜೀವ ಎಂದರೆ ಓಡಾಡಲಾಗದ ವೃಕ್ಷಾದಿಗಳು. ಚೇತನ ಜೀವ ಎಂದರೆ ಓಡಾಡುವ ಜೀವರು.

ವೃಕ್ಷಾದಿಗಳಲ್ಲೂ ಪರಸ್ಪರ ಭೇದವುಂಟು. ಜೀವರಲ್ಲೂ ಪರಸ್ಪರ ಭೇದವುಂಟು. ಈಶನಿಗೂ ಜೀವರಿಗೆ ಭೇಧವಿರುವಂತೆ ಈಶನಿಗೆ ವೃಕ್ಷಾದಿಗಳಿಗೂ ಉಂಟು.

ವಂಚನೆಯಿಲ್ಲದೆ ಪಂಚದ ಪ್ರಪಂಚ ತಿಳಿದವ ಅಂಚಿತನಾಗುವ.

ಭೇಧ ಪ್ರಪಂಚದ ಅಂಚಿನಲ್ಲಿ ಸಂಚಾರ ಮಾಡುತ್ತಾ ಕಿಂಚಿತ್ತು ತಿಳಿದಾಗಿದೆ. ಈಗ ಮತ್ತೊಂದು ಬಗೆಯಾಗಿ ತಿಳಿಸುವರು.

ಜೀವರಲ್ಲಿ ಮೂರು ವಿಧ. ಸಾತ್ವಿಕ, ರಾಜಸ, ತಾಮಸ, ಇದರಲ್ಲಿ ಐದು ಭೇದ ತಿಳಿಯಬೇಕು.

ಅಥವಾ ಜೀವರಲ್ಲಿ ಸ್ಥಾವರ - ಜಂಗಮ ಎಂದು ಎರಡು ವಿಧ ವೃಕ್ಷಾದಿಜೀವರೆಲ್ಲ ಅಂದರೆ ಒಂದೆಡೆ ಸ್ಥಿತಿಯುಳ್ಳವರು ಸ್ಥಾವರರು. ಗಮನವುಳ್ಳ ಮನುಷ್ಯ ಮೊದಲಾದ ಜೀವರು ಜಂಗಮರು.

ಈಶ - ಸ್ಥಾವರ - ಜಂಗಮ ಈ ಮೂರನ್ನು ವಿವಕ್ಷಿಸಿದಾಗಲೂ ಐದು ಭೇದವನ್ನು ಕಾಣಬಹುದು.

ಅಥವಾ ಜಡ-ಸ್ಥಾವರ-ಜಂಗಮ ಈ ಮೂರರಲ್ಲೂ ವಿಭಾಗಿಸಬಹುದು. ಅಥವಾ ಜೀವರಲ್ಲಿ ಪುರುಷ ಸ್ತ್ರೀ ಎಂದು ವಿಭಾಗಿಸಿದಾಗಲೂ ಮೂರು ಪದಾರ್ಥಗಳು, ಆಗಲೂ ಭೇಧ ಪಂಚಕ ಕಾಣಬಹುದು.

ಅಥವಾ ಈಶನ ಪ್ರತಿಮೆಗಳು ಎರಡು ಒಂದು ಜಡ ಪ್ರತಿಮೆ. ಇನ್ನೊಂದು ಚೇತನ ಪ್ರತಿಮೆ. ಈ ಎರಡು ಪ್ರತಿಮೆಗಳಲ್ಲಿ ಪರಸ್ಪರ ಭೇಧವಿರುವಂತೆ ಈ ಎರಡು ಪ್ರತಿಮೆಗಳಿಂದ ಒಳಗಿರುವ ದೇವನಿಗೆ ಭೇಧವುಂಟು. ಇದೇ ಮಾತಿನ ವಿವರಣೆಯನ್ನು ಇದೇ ಪದ್ಯದ ಮುಂದಿನ ಸಾಲುಗಳಲ್ಲಿ ಮುಂದೆ ಕಾಣೋಣ.

ಜೀವರಲ್ಲಿ ಹೀಗೆ ಇನ್ನೂ ಅನೇಕ ರೀತಿಯ ವಿಭಾಗಗಳನ್ನು ನಮ್ಮ ನಮ್ಮ ಬುದ್ಧ್ಯನುಸಾರ ಮಾಡಬಹುದು.

ಜಡದಲ್ಲೂ ಕೆಲವು ವಿಭಾಗಗಳನ್ನು ಕಾಣೋಣ.

ಚಲ ಜಡ, ಅಚಲ ಜಡ ಎಂದು. ಸಾಮಾನ್ಯರಿಂದ ಚಲಿಸಲಾಗದ ಪರ್ವತ. ಭೂಮಿ ಮೊದಲಾದವುಗಳು ಅಚಲ ಜಡಗಳು. ಸಣ್ಣ ಸಣ್ಣ ಪಾಶಾಣಾದಿಗಳು, ಅಂದರೆ ನಮ್ಮಿಂದ ಚಲಿಸಲು ಸಾಧ್ಯವಾಗುವ ಪದಾರ್ಥಗಳು ಚಲಜಡಗಳು.

ಅಥವಾ ಸ್ಪೃಷ್ಟ ಜಡ ಅಸ್ಪೃಷ್ಟ ಜಡ ಎಂದು ವಿಭಾಗಿಸಬಹುದು.

ಭೂ-ಜಲ, ಅಗ್ನಿ ಇವೆಲ್ಲ ಸ್ಪೃಷ್ಟ ಅಂದರೆ ಸ್ಪರ್ಶಿಸಲು ಯೋಗ್ಯ. ಆದರೆ

ದೇಶಕಾಲಾದಿಗಳೂ, ಜಡವಾದರೂ ಸ್ಪರ್ಶಿಸಲಾಗದು. ಆದ್ದರಿಂದ ಅವು ಅಸ್ಪೃಷ್ಟ

ಹೀಗೆ ಜೀವ-ಜಡಾದಿಗಳಲ್ಲಿ ವಿಭಾಗಿಸಿದಂತೆ ಈಶನಲ್ಲಿ ವಿಭಾಗಿಸಲು ಅಸಾಧ್ಯ ಈಶನೊಬ್ಬನೆ ಇರುವನು. ಒಬ್ಬ ಈಶನೇ ಮೇಲೆ ತಿಳಿದ ಎಲ್ಲ ವಸ್ತುಗಳಲ್ಲಿ ವ್ಯಾಪಿಸಿದ್ದು ನಿಯಮನ ಮಾಡುತ್ತಿರುವನು.

ಹೀಗೆ ಪ್ರತಿಯೊಂದು ಅಧಿಷ್ಠಾನದಲ್ಲಿ ದೇವನ ಚಿಂತಿಸಬೇಕು. ಅಧಿಷ್ಠಾನಗಳಲ್ಲಿ ಭೇಧವಿದ್ದರೂ, ದೋಷವಿದ್ದರೂ, ಒಳಗಿರುವ ದೇವನಿಗೆ ಮಾತ್ರ ಸ್ವಲ್ಪವೂ ದೋಷ, ಅಭೇಧಗಳಿಲ್ಲ ಎಂಬುದನ್ನು ಸ್ಪಷ್ಟ ತಿಳಿಯಬೇಕು.

ಇಷ್ಟು ತಲೆಗೆಡುವಷ್ಟು ಭೇಧಪ್ರಪಂಚವು ಸ್ಪಷ್ಟ ಅನುಭವವಕ್ಕೆ ಮೂಢಬಾಲಕನಿಗೂ ಬರುವಾಗ ಭೇಧವೆ ಇಲ್ಲ ಎನ್ನುವದು ಎಷ್ಟು ಹಾಸ್ಯಾಸ್ಪದ. ಹಾಗೂ ಮತ್ತ ಮಾತೆಂಬುದನ್ನು ಮನುಜ ಮನಗಾಣಬೇಕು.

ಪ್ರಪಂಚದಲ್ಲಿ ಪ್ರಪಂಚಿತ (ವಿಸ್ತೃತ)ವಾದ ಭೇಧ ಪಂಚಕಗಳನ್ನು ತಿಳಿಸುತ್ತಾ ದಾಸರು ಇದು ''ಸುಸತ್ಯ'' ಎನ್ನುವರು.

ಇಲ್ಲಿ ''ಸು'' ಎನ್ನುವ ಅಕ್ಷರ ಪರಕೀಯರ ತತ್ವವನ್ನು ತಿರಸ್ಕರಿಸುತ್ತದೆ. ಮಾಯಾವಾದಿಗಳು ಸತ್ಯವೆಂದು ಹೇಳುವ ಎಲ್ಲ ಪ್ರಮಾಣಗಳನ್ನು ವ್ಯಾವಹಾರಿಕ ಸತ್ಯ ಎಂದು ಕೇವಲ ವ್ಯವಹಾರಕ್ಕಾಗಿ ಸತ್ಯ ಎನ್ನುವರು. ವಾಸ್ತವಿಕವಾಗಿ ಅಂದರೆ ಪಾರಮಾರ್ಥಿಕವಾಗಿ ಸತ್ಯವಲ್ಲ. ಪಾರಮಾರ್ಥಿಕ ಸತ್ಯವೇ ಶ್ರೇಷ್ಠ ಸತ್ಯ. ಅದು ಬ್ರಹ್ಮನಲ್ಲಿ ಮಾತ್ರವುಂಟು. ಹೀಗೆಲ್ಲ ಹೇಗೋ ಸಾಧಿಸಿಕೊಳ್ಳುವರು. ಅದಕ್ಕಾಗಿ ದಾಸರೆಂದರು. ಇದು ''ಸುಸತ್ಯ''ಅಂದರೆ ಶ್ರೇಷ್ಠವಾದ ಪಾರಮಾರ್ಥಿಕ ಸತ್ಯ, ವ್ಯಾವಹಾರಿಕವಲ್ಲ ಎಂದು.

ಹಿಂದೊಂದು ಮಾತು ತಿಳಿದಾಯಿತು. ದೇವನ ಅಧಿಷ್ಠಾನಗಳಲ್ಲಿ ಚೇತನ ಪ್ರತಿಮೆ - ಅಚೇತನ ಪ್ರತಿಮೆ ಎಂದು ಎರಡು ವಿಭಾಗವುಂಟೆಂದು. ಯಾವವು ಆ ಪ್ರತಿಮೆ ಗಳೆಂಬುದನ್ನು ತಿಳಿಸುವರು 'ವಿರಿಂಚಿ ಮುಖರು........' ಬ್ರಹ್ಮಾದಿ ಸಮಸ್ತ ಜೀವರು ಸಂಚಲ ಪ್ರತಿಮೆಗಳು. ಪ್ರಕೃತಿ ಇದು ಜಡ. ಚಲಿಸಲಾಗದ್ದು. ಆದ್ದರಿಂದ ಇದು ಅಚಲ ಪ್ರತಿಮೆ.

ಪ್ರತಿಮೇ ದ್ವೇ ಹರೇಸ್ತಸ್ಯ ಚಲಾಚಲ ವಿಭೇಧತಃ
ಚಲಾ ಬ್ರಹ್ಮಾದಯ ಪ್ರೋಕ್ತಾ ಸ್ತ್ವಚಲಾ ಪ್ರಕೃತಿಸ್ಮೃತಾ ॥

ಈ ಪದ್ಯದಲ್ಲಿ ಪರಮಾತ್ಮನ ನಾಮವನ್ನು ತಿಳಿಸುವಾಗ ''ಬಲಿ ವಂಚಕ'' ಎಂಬ ಶಬ್ದ ಬಳಸುವರು. ಇದರಿಂದ ಅನೇಕ ಸಂದೇಶಗಳನ್ನು ಸಾರುವರು.

ಹರಿ ಮೊದಲು ವಾಮನನಾಗಿ ಪುಟ್ಟ ಬಾಲಕನಾಗಿದ್ದ. ನಂತರ ಬೆಳೆದ. ಜಗವನ್ನೇ

ಒಂದು ಮಾಡುವ ತ್ರಿವಿಕ್ರಮನಾದ. ಹಾಗೆ ಒಂದೊಂದು ವಸ್ತುವಿನಲ್ಲೂ ಪುಟ್ಟ ಪುಟ್ಟ ರೂಪದಿಂದ ಇರುವ, ಪೂರ್ಣ ಜಗತ್ತಿನಲ್ಲಿ ವ್ಯಾಪಿಸಿಯೂ ಇರುವ.

ದೇವ ಬಲಿ ಎದರು ಯಾಚನೆ ಮಾಡಿದ್ದು ತನಗಾಗಿ ಅಲ್ಲ ತನ್ನ ಭಕ್ತರಿಗಾಗಿ. ಹಾಗೆ ನಮ್ಮಿಂದ ಪೂಜೆ ಪಡೆಯುವದು ತನಗಾಗಿ ಅಲ್ಲ, ತನ್ನ ಭಕ್ತರಿಗಾಗಿ ಅಂದರೆ ನಮ್ಮ ಉದ್ಧಾರಕ್ಕಾಗಿ. ಬಲಿಯಿಂದ ಎಲ್ಲವನ್ನು ಕಸಿದಿದ್ದು ಮುಂದೆ ಹತ್ತು ಮಡಿ ಮಾಡಿ ಸ್ವರ್ಗಾಧಿಪತ್ಯ ನೀಡಲಿಕ್ಕೆ. ಹಾಗೆ ನಮಗೆ ದೇವ ಬಡತನ ನೀಡುವದು ಮುಂದಿನ ಹೆಚ್ಚಿನ ಸುಖಕ್ಕಾಗಿ.

ಎಲ್ಲ ಕೊಡಲೂ ಸಮರ್ಥ, ಎಲ್ಲ ಕಸಿಯಲೂ ಸಮರ್ಥ ಹರಿಯೇ.

ಭೇಧಜ್ಞಾನ ಪಡೆವದು ಅಂತರ್‌ದೀಕ್ಷೆಯಾದರೆ ಬಾಹ್ಯದೀಕ್ಷೆ ತಿಳಿಸುವರು.

''ಮುದದಿಂದ ಲಾಂಛಿತನಾಗುವದೆ'' ಎಂದು.

ನಿತ್ಯದಲ್ಲಿ ಯಾವದಾದರೊಂದು, ಮೃತ್ತಿಕೆಯಿಂದೋ, ಜಲದಿಂದೋ, ಗೋಪಿ ಚಂದನ ದಿಂದೊ, ಗಂಧದಿಂದಲೋ ನಾಮಧರಿಸಿರಲೇಬೇಕು. ಅದೂ ಇನ್ನೊಬ್ಬರ ಒತ್ತಾಯಕ್ಕಾಗಲಿ, ಬೈಯುವರೆಂಬ ಹೆದರಿಕೆಯಿಂದಾಗಲಿ, ಬೇಸರದಿಂದಾಗಲಿ ಅಲ್ಲ, ''ಮುದದಿಂದ'' ಸಂತೋಷ ದಿಂದ, ದೇವನ ತೃಪ್ತಿಗಾಗಿ ಅನುಗ್ರಹಕ್ಕಾಗಿ ದೇವ ನಿರ್ಮಾಲ್ಯ ಎಂದು ಧರಿಸಬೇಕು.

ಪಂಚ ಋತುಗಳಲಿ ಪಂಚಾಗ್ನಿಗಳಲಿ
ಪಂಚ ಪಂಚ ರೂಪವ ತಿಳಿದು
ಪಂಚ ಸುಸಂಸ್ಕಾರಾಂಚಿತನಾಗಿ ದ್ವಿ
ಪಂಚಕರಣದಲಿ ಪಂಚಕನರಿವುದೆ **|| 6 ||**

ಬದುಕಿನ ಸಾರ್ಥಕತೆಯ ಮಜಲುಗಳನ್ನು ಮಂಡಿಸುವಾಗ ದಾಸರು ಛಾಂದೋಗ್ಯೋಪನಿಷತ್ತಿನ ಪ್ರಮೇಯವೊಂದನ್ನು ತಿಳಿಸುತ್ತಿದ್ದಾರೆ.

ಜಗದೊಡೆಯ ಶ್ರೀಕೃಷ್ಣನಿಗೆ ಸಕಲವನ್ನು ಶ್ರೀಕೃಷ್ಣಾರ್ಪಣವೆನ್ನಬೇಕು. ಎಂಬ ಪ್ರಮೇಯಪುಂಜದ ಬೆಳಕಿನ ಕಿರಣವೊಂದು ಈ ನುಡಿಯಲ್ಲಿ ಕಾಣುತ್ತಿದ್ದೇವೆ. ಎಲ್ಲವನ್ನು ಅರ್ಪಿಸುವಾಗ ನಮ್ಮ ಆಯುಷ್ಯವನ್ನು ಅರ್ಪಿಸಬೇಕು. ಅದರ ವಿವರಣೆ - ಸಂವತ್ಸರ, ಅಯನ, ಋತು, ಮಾಸ, ಪಕ್ಷ, ತಿಥಿ, ವಾರ, ನಕ್ಷತ್ರ, ಯೋಗ, ಕರಣ ಇವುಗಳನ್ನರ್ಪಿಸುವುದಲ್ಲದೇ ದಿನದ ಗಂಟೆ, ಕ್ಷಣ, ಲವಾದಿಗಳನ್ನೂ ಅರ್ಪಿಸಬೇಕು. ಅಂದರೆ

ಸರ್ವಕರ್ತನಾದ ಶ್ರೀಹರಿ ತತ್ತನ್ನಾಮಕನಾಗಿ ತತ್‌ದ್ವಸ್ತುಗಳಲ್ಲಿದ್ದು ಪ್ರೇರಿಸುವ ಎಂದು ಅರಿತು ಅನುಸಂಧಾನಿಸಬೇಕು.

ಈ ಎಲ್ಲ ವಿಷಯಗಳನ್ನು ಪುಟ್ಟ ಮಾತಿನಲ್ಲಿ ಸಾಂಕೇತಿಸುತ್ತಿದ್ದಾರೆ ಶ್ರೀ ಜಗನ್ನಾಥದಾಸರು, ''ಪಂಚ ಋತುಗಳಲಿ.....'' ಎಂದು.

ಋತು ಎಂಬ ಒಂದು ಶಬ್ದದಿಂದ ಹಿಂದು-ಮುಂದಿನದೆಲ್ಲವನ್ನು

ದೆಹಲಿ ದೀಪನ್ಯಾಯೇನ ಸ್ವೀಕರಿಸಬೇಕು. ಇದನ್ನು ಕೇಳಿದಾಗ ಬರುವ ಸಂದೇಹ ಋತುಗಳು '6' ಎಂದು ಪ್ರಸಿದ್ಧವಾದಾಗ ಪಂಚ ಋತುಗಳಲಿ ಎಂಬ ಮಾತು ಹೇಗೆ ಸೂಕ್ತವಾದೀತು?

ಇದಕ್ಕೆ ಉತ್ತರ ಶ್ರೀಮದಾಚಾರ್ಯರು ಛಾಂದೋಗ್ಯಭಾಷ್ಯದಲ್ಲಿ ಸೂಚಿಸುತ್ತಾರೆ. ವಸಂತ, ಗ್ರೀಷ್ಮ, ವರ್ಷ, ಹೇಮಂತ, ಶರತ್, ಶಿಶಿರ ಎಂಬ ಆರು ಋತುಗಳಿದ್ದರೂ ಹೇಮಂತ ಮತ್ತು ಶರತ್ ಈ ಎರಡು ಋತುಗಳಲ್ಲಿ ಸಮಾನಧರ್ಮಗಳಿದ್ದರಿಂದ ಇವೆರಡನ್ನು ಸೇರಿಸಿ ಒಂದನ್ನಾಗಿ ಮಾಡಿ ಒಟ್ಟಾರೆ 'ಐದು' ಋತುಗಳೆಂದು ಹೇಳಿದ್ದಾರೆ ಈ ಋತುಗಳಲ್ಲಿ ಪರಮಾತ್ಮನ ವಿವಿಧ ರೂಪಗಳ ಚಿಂತನೆಯನ್ನು ಉಪನಿಷತ್ ಉಪದೇಶಿಸುತ್ತದೆ. ವಸಂತದಲ್ಲಿ 'ಹಿಂ'ಕಾರ, ಗ್ರೀಷ್ಮ ಋತುವಿನಲ್ಲಿ ಪ್ರಸ್ತಾವ, ವರ್ಷದಲ್ಲಿ ಉದ್ಗೀಥ, ಶರತ್‌ನಲ್ಲಿ ಪ್ರತಿಹಾರ, ಹೇಮಂತದಲ್ಲಿ ನಿಧನ ಎಂಬ ರೂಪವನ್ನು ಚಿಂತಿಸಬೇಕು.

ಪಂಚ ಋತುಗಳಲ್ಲಿ ಪಂಚಮುಖ ಪ್ರಾಣ (ಛಾಂದೋಗ್ಯ ಭಾಷ್ಯದಲ್ಲಿ) ಪ್ರಪಂಚಿಸಿದ ಹಿಂಕಾರ, ಪ್ರಸ್ತಾವ, ಉದ್ಗೀಥ, ಪ್ರತಿಹಾರ, ನಿಧನ ಎಂಬ ಪಂಚರೂಪಗಳ ಚಿಂತನೆಯಾಯಿತು.

ಇನ್ನು ಪಂಚಾಗ್ನಿಗಳತ್ತ ಪೋಗೋಣ. ಪ್ರಸಿದ್ಧವಾದ ಅಗ್ನಿಗಳು

1) ಆಹವನೀಯ, 2) ಗಾರ್ಹಪತ್ಯ 3) ದಕ್ಷಿಣಾ 4) ನಾವಸತ್ತಿ 5) ಸಭ್ಯಂಚಿತಿ ಎಂಬ ಹೆಸರಿನ ಅಗ್ನಿಗಳು.

ಇವು ನಮ್ಮ ದೇಹದಲ್ಲೂ ಇವೆ. ಮುಖದಲ್ಲಿ ಆಹವನೀಯ, ಹೃದಯದಲ್ಲಿ ಗಾರ್ಹಪತ್ಯ, ನಾಭಿಯಲ್ಲಿ ದಕ್ಷಿಣಾ ಸವ್ಯ ಅಂದರೆ ಬಲಭಾಗದಲ್ಲಿ ನಾವಸತ್ತಿ ಅಪಸವ್ಯ ಅಂದರೆ ಎಡಭಾಗದಲ್ಲಿ ಸಭ್ಯಂಚಿತಿ ಅಗ್ನಿಗಳುಂಟು.

ಇವುಗಳಲ್ಲಿ ''ಪಂಚ ಪಂಚ ರೂಪವ ತಿಳಿದು'' ಎನ್ನುವರು ದಾಸಾರ್ಯರು. ಈ

ಮಾತಿಗೆ ಎರಡು ಬಗೆಯಾಗಿ ಅರ್ಥೈಸಬಹುದು. ಒಂದು ಗುಣಿಸಿ (5 × 5) 25 ರೂಪಗಳ ಚಿಂತನೆ ಮಾಡಬೇಕೆಂದು. ಮತ್ತೊಂದು ಕೂಡಿಸಿ (5 + 5) 10 ರೂಪಗಳನ್ನು ಚಿಂತಿಸಬೇಕೆಂದು ತಿಳಿಯಬೇಕು.

25 ರೂಪಗಳನ್ನು ತಿಳಿಯುವಾಗಲೂ 2 ಬಗೆಯಾಗಿ ತಿಳಿಯಬೇಕು.

ತೈತ್ತರೀಯ ಉಪನಿಷತ್ ಭಾಷ್ಯದಲ್ಲಿ ತಿಳಿಸುವಂತೆ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ, ನಾರಾಯಣ ರೂಪಗಳನ್ನು ಪರಸ್ಪರ ಜೋಡಿಯಾಗಿ ಅಂದರೆ ಅನಿರುದ್ಧ ಅನಿರುದ್ಧ, ಅನಿರುದ್ಧ ಪ್ರದ್ಯುಮ್ನ, ಅನಿರುದ್ಧ ಸಂಕರ್ಷಣ, ಅನಿರುದ್ಧ ವಾಸುದೇವ, ಅನಿರುದ್ಧ ನಾರಾಯಣ ಅದರಂತೆ ಪ್ರದ್ಯುಮ್ನ ಅನಿರುದ್ಧ, ಪ್ರದ್ಯುಮ್ನ ಪ್ರದ್ಯುಮ್ನ ..... ಹೀಗೆ 25 ರೂಪಗಳನ್ನು ಚಿಂತಿಸಬೇಕು.

ಎರಡನೆಯ ಬಗೆ ನಿತ್ಯ ಆಚಮನದಲ್ಲಿ ನೆನೆಯುವ ಕೇಶವನಾರಾಯಣಾದಿ 24 ರೂಪಗಳು ಮತ್ತು ಮೂಲರೂಪವಾದ ನಾರಾಯಣ ಹೀಗೆ 25 ರೂಪಗಳ ಚಿಂತನೆ ಮಾಡಬೇಕು.

ಇನ್ನು 10 ಎಂದು ವಿವಕ್ಷಿಸಿದಾಗ ಋತುಗಳಲ್ಲಿಯ ಪಂಚರೂಪಗಳು ಮತ್ತು ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ, ನಾರಾಯಣ ಎಂಬ ಪಂಚರೂಪಗಳನ್ನು ನೆನೆಯಬೇಕು. ಒಟ್ಟು 10 ರೂಪಗಳು. ಈ ರೂಪಗಳನ್ನು ಸಪತ್ನೀಕವಾಗಿ ನೆನೆಯಬೇಕು.

ಅನಿರುದ್ಧ ರೂಪಪರಮಾತ್ಮನ ಪತ್ನಿಯ ಹೆಸರು ಶಾಂತಾ, ಪ್ರದ್ಯುಮ್ನ, ಪತ್ನಿ-ಕೃತಿ ಸಂಕರ್ಷಣ ಪತ್ನಿ ಜಯಾ, ವಾಸುದೇವನ ಪತ್ನಿ ಮಾಯಾ, ನಾರಾಯಣನ ಪತ್ನಿ ಲಕ್ಷ್ಮೀ ಈ ದಂಪತಿಗಳನ್ನು ನೆನೆಯಬೇಕು.

ಇನ್ನೊಂದು ಬಗೆಯ ಅಗ್ನಿಗಳನ್ನು ಛಾಂದೋಗ್ಯದಲ್ಲಿ ತಿಳಿಸುವರು. ಜೀವನು ಪಂಚ ಸ್ಥಾನಗಳಲ್ಲಿ ಭೇಟಿ ಕೊಟ್ಟು ಜನ್ಮ ತಾಳುವನು. ಆ ಐದು ಸ್ಥಾನಗಳೇ ಪಂಚಾಗ್ನಿಗಳು.

ಅವಾವೆಂದರೆ ದ್ಯು (ಆಕಾಶ), ಪರ್ಜನ್ಯ (ಮಳೆ) ಧರಾ (ಭೂಮಿ) ಪುಂ (ಪುರುಷ) ಸ್ತ್ರೀ. ಈ ಐದು ಜೀವನ ಆಗಮನ ಸ್ಥಾನಗಳು ಇವುಗಳಲ್ಲಿಯೂ ಅನಿರುದ್ಧಾದಿ ಪಂಚ ರೂಪಗಳ ಧ್ಯಾನಿಸಬೇಕು. ಕೊನೆಗೆ ಇದರ ಫಲ ತಿಳಿಸುವರು.

''....ಪಂಚಾಗ್ನಿ ವಿನ್ನಾಮ ಭವೇತ್ ಸಯಾತಿ ಪರಮಾಂ ಗತಿಂ''

ಈ ಪಂಚಾಗ್ನಿಗಳ ವಿವರ ತಿಳಿದವಗೆ ಉತ್ತಮ ಗತಿ ನಿಶ್ಚಿತ. ವಿಸ್ತೃತವಾದ ಉಪನಿಷತ್ತುಗಳ ವಿವರಣೆ ಶ್ರೀ ಜಗನ್ನಾಥದಾಸರ ಪುಟ್ಟನುಡಿಯಲ್ಲಿ ಅಡಗಿದೆ.

ವಸಂತ, ಗ್ರೀಷ್ಮ ವರ್ಷ, ಶರತ್, ಹೇಮಂತ (ಶಿಶಿರ) ಎಂಬ ಪಂಚ ಋತುಗಳಲ್ಲಿ ಆಹವನೀಯ ಗಾರ್ಹಪತ್ಯಾ, ದಕ್ಷಿಣಾ, ನಾವಸತ್ತಿ, ಸಭ್ಯಂಚಿತಿ ಅಥವಾ ದ್ಯು, ಪರ್ಜನ್ಯ, ಧರಾ, ಪುರುಷ, ಸ್ತ್ರೀ ಎಂಬ ಪಂಚಾಗ್ನಿಗಳಲ್ಲಿ ಶಾಂತಾಪತಿ ಅನಿರುದ್ಧ, ಕೃತಿಪತಿ ಪ್ರದ್ಯುಮ್ನ ಮಾಯಾಪತಿ ವಾಸುದೇವ, ಜಯಾಪತಿ. ಸಂಕರ್ಷಣ, ಲಕ್ಷ್ಮೀಪತಿ ನಾರಾಯಣನನ್ನು ಅಥವಾ ಕೇಶವಾದಿ 24 ರೂಪಗಳ ಜೊತೆ ನಾರಾಯಣ ರೂಪವನ್ನು ಚಿಂತಿಸಬೇಕೆಂಬುದು ತಿಳಿದಾಯಿತು. ಇದು ಅಂತಃಶುದ್ಧಿಗೆ ಕಾರಣ. ಮನೋನೈರ್ಮಲ್ಯದ ನಿರ್ಮೂಲನಕ್ಕೆ ಕಾರಣ.

ಅಂತಃಶುದ್ಧಿ ಹೇಗೆ ಆವಶ್ಯಕವೋ ಹಾಗೇ ಬಾಹ್ಯಶುದ್ಧಿಯೂ ಆವಶ್ಯಕ. ದೇಹದ ಹೊರಗಿನ ಸ್ವಚ್ಛತೆಯಿದ್ದರೆ ಒಳಗಿನ ಭಾಗ ಆರೋಗ್ಯಕರವಾಗಿರುವವು. ಮಿಂದದೆ, ಸ್ವಚ್ಛಗೊಳಿಸದೆ ದೇಹವನ್ನು ಕಲುಷಿತವಾಗಿಟ್ಟುಕೊಂಡರೆ ಒಳಗೆ ತಾನಾಗಿ ಕಲುಷಿತ ಗೊಳ್ಳುವದು. ಧರ್ಮದ ಪಥದಲ್ಲೂ ಬಾಹ್ಯ ಶೌಚ ಇಲ್ಲದಿದ್ದಲ್ಲಿ ಅಂತಃಶುದ್ಧಿ ಸಿದ್ಧಿಸಲಾರದು. ನನ್ನ ಮನ ಯಾವಾಗಲೂ ಶುದ್ಧ ನನಗೆ ಆಚಾರ ಬೇಕಿಲ್ಲ, ಎನ್ನುವದು ಧರ್ಮದಿಂದ ಜಾರಿಕೊಳ್ಳುವ ಉಪಾಯವದು. ಆದ್ದರಿಂದ ಎರಡನ್ನೂ ನಡೆಸುವದು ವ್ಯಾಸ-ದಾಸ ಸಾಹಿತ್ಯದ ಸರ್ವಾನುಮತ ತತ್ವ. ಆ ಬಾಹ್ಯಶೌಚವನ್ನು ದಾಸರು ತಿಳಿಸುತ್ತಾರೆ.

'ಪಂಚಸುಸಂಸ್ಕಾರಾಂಚಿತನಾಗಿ'' – ಎಂದು

ಯಾವದು ಪಂಚ ಸಂಸ್ಕಾರಗಳು ಕೆಲವು ಟಿಪ್ಪಣಿಕಾರರು ಕೆಲವು ಬಗೆಯಲ್ಲಿ ತಿಳಿಸುವರು.

ಸಂಕರ್ಷಣ ಒಡೆಯರು ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ, ಅಂತಃಕರಣ ಈ ಐದು ವೃತ್ತಿಗಳನ್ನು ಸಂಸ್ಕರಿಸಬೇಕು ಎನ್ನುವರು. ಅಂದರೆ ಇದು ಭಗವಂತನಿಂದ ಬಂದದ್ದು. ಅವನಿಂದಲೇ ನಿಯಮ್ಯವಾದದ್ದು. ಅವನಿಗೇ ಅರ್ಪಿತ ಎಂದು ಚಿಂತಿಸಿ ಸಮರ್ಪಿಸಬೇಕು.

ಗುರು ಶ್ರೀಶ ವಿಠಲರು : ತಪ್ತಮುದ್ರೆ, ಶಂಖಚಕ್ರಾದಿ (ಗೋಪಿಚಂದನದಿಂದ) ಧಾರಣ, ಊರ್ಧ್ವಪುಂಡ್ರ, ದ್ವಾದಶನಾಮ, ಹರಿಸ್ಮರಣ ಇವು ಐದುಗಳನ್ನು ನಿತ್ಯ ಆಚರಿಸುವದೇ ಪಂಚ ಸಂಸ್ಕಾರಗಳಿಂದ ಕೂಡಿದಂತೆ.

ಅದಕ್ಕೆ ಪ್ರಮಾಣವನ್ನು ನೀಡುವರು.

''ತಾಪಃ ಪುಂಡ್ರಸ್ತಥಾನಾಮ, ಮಂತ್ರೋನಾಮಸ್ತಥೋತ್ತರಃ''
ಅಮೀಹಿ ಪಂಚ ಸಂಸ್ಕಾರಾಃ........''

ಮತ್ತೊಬ್ಬರು ಬ್ರಹ್ಮಯಜ್ಞ, ಅಧ್ಯಾಪನ, ಅಧ್ಯಯನ, ತರ್ಪಣ, ಗುರುದೇವತಾಪೂಜೆ

ಇವುಗಳೈದು ಪಂಚ ಸಂಸ್ಕಾರಗಳೆನ್ನುವರು.

ಸ್ಕಾಂದ ಪುರಾಣವು "ತಪ್ತಮುದ್ರಾ ತಥಾ ಪುಂಡ್ರಂ ಹರಿಮಂತ್ರಃ ಜಪಸ್ಮೃತಃ ಯೋಗಮಭ್ಯರ್ಚನಂ ವಿಷ್ಣೋಃ ಇತಿ ಸಂಸ್ಕಾರ ಪಂಚಕಂ"

ಎನ್ನುವದು. ತಪ್ತಮುದ್ರೆ, ಊರ್ಧ್ವ ಪುಂಡ್ರನಾಮ, ಪರಮಾತ್ಮನ ಮಂತ್ರ ಸ್ತೋತ್ರಗಳು ಜಪಯೋಗ ಅರ್ಚನೆ ಇವೈದು ಪಂಚ ಸಂಸ್ಕಾರಗಳು. ಒಂದೊಂದೆಡೆ ಒಂದೊಂದು ಹೇಳಿದರೂ ಎಲ್ಲವೂ ವಿಹಿತವೇ. ಆವಶ್ಯಕವೂ ಆಗಿದೆ. ಈ ಪಂಚಸಂಸ್ಕಾರಗಳಿಂದ ಕೂಡಿ ದಶ ಇಂದ್ರಿಯಗಳಲ್ಲಿ ಪ್ರಪಂಚವನ್ನು ಕಾಣುವದು ಬದುಕಿನ ಫಲವೆಂಬುದು ದಾಸರ ಅಭಿಪ್ರಾಯ.

ಹೃದಯದಿ ರೂಪವು ವದನದಿ ನಾಮವು
ಉದರದಿ ನೈವೇದ್ಯವು ಶಿರದಿ
ಪದಜಲ ನಿರ್ಮಾಲ್ಯವನೆ ಧರಿಸುತ ಕೋವಿದರ
ಸದನ ಹೆಗ್ಗದವ ಕಾಯುವದೆ ॥ ॥ 7 ॥

ಹಿಂದಿನ ನುಡಿಯಲ್ಲಿ ಬಾಹ್ಯ ಶೌಚವನ್ನು ಸೂಚಿಸಿದ ಜಗನ್ನಾಥದಾಸರು ಈ ನುಡಿಯಲ್ಲಿ ವಿಸ್ತರಿಸುವರು. ಅಥವಾ ಮತ್ತೊಂದು ಬಗೆಯಲ್ಲಿ ತಿಳಿಯುವುದಾದರೆ ಶ್ರೀಮದಾಚಾರ್ಯರ ಕೃಷ್ಣಾಮೃತಮಹಾರ್ಣವದ ಶ್ಲೋಕವೊಂದರ ಭಾವವನ್ನು ಕನ್ನಡೀಕರಿಸುವರು.

ಹೃದಿರೂಪಂ ಮುಖೇ ನಾಮಂ ನೈವೇದ್ಯಮುದರೇ ಹರೇಃ
ಪಾದೋದಕಂ ಚ ನಿರ್ಮಾಲ್ಯಂ ಮಸ್ತಕೇ ಯಸ್ಯ ಸೋಽಚ್ಯುತಃ

ಹೃದಯ ಇದೊಂದು ಸುಂದರ ಸ್ವಚ್ಛ. ಶುದ್ಧ ಭಿತ್ತಿ. ಹಸಿಗಡಿಗೆ ಇದ್ದಂತೆ. ಇದರಲ್ಲಿ ನಾವೇನು ಮೂಡಿಸುತ್ತೇವೆಯೋ ಅದೇ ಉಳಿವುದು. ಆದ್ದರಿಂದ ಏನನ್ನೋ ಹೃದಯದಲ್ಲಿ ಇಟ್ಟುಕೊಳ್ಳದೆ ಭಗವಂತನ ರೂಪದ ಚಿತ್ರವನ್ನೇ ಇಟ್ಟುಕೊಳ್ಳಬೇಕು. ಮನಸ್ಸಿನಲ್ಲಿ ದೇವರ ರೂಪ ಮೂಡಿದ್ದರೆ ಯಾವಾಗಲೂ ಅದರದೇ ಧ್ಯಾನ ಅದರದೇ ಚಿಂತೆ ಇರುವುದು. ಮನಸ್ಸು ಬೇರೆ ವಿಷಯಗಳಿಗೆ ಹೋಗದೆ ಏಕಾಗ್ರತೆ ಸಿದ್ಧಿಸುವುದು. ಮಾಡಿದ ಜಪ, ಯಜ್ಞ, ಸಕಲ ಸತ್ಕರ್ಮಗಳು ಸರಿಯಾದ ಫಲ ನೀಡುವುವು. ಮುಕುತಿಯ ಪಥದಲ್ಲಿ ಸಾಗಿದಂತಾಗುವುದು. ಹೃದಯದಲ್ಲಿ ರೂಪವಿದ್ದಂತೆ ವದನದಲ್ಲಿ ನಾಮವೂ ಸದಾ ಇರಬೇಕು. ದೇವ ನೀಡಿದ ಅನೇಕ ಅಮೂಲ್ಯಗಳಲ್ಲಿ ಮಾತೂ ಒಂದು. ಶಬ್ದರಾಶಿ ಅವನ ಆಸ್ತಿ. ಅದನ್ನು ಬಳಿಸುವ ಅಧಿಕಾರ ಹಕ್ಕು ಯಾರಿಗೂ ಇಲ್ಲ, ಭಾಗವತ ತಿಳಿಸುತ್ತದೆ.

''ಶಬ್ದಸ್ಯ ಹಿ ಬ್ರಹ್ಮಣಃ ಏಷ ಪಂಥಾ''

ಹೇಳದೆ, ಕೇಳದೆ ಬಳಸುವುದೇ ಮಹಾಪರಾಧವಾದಾಗ ಕಬಳಿಸಿ ನಮ್ಮದೆಂದುಕೊಳ್ಳುವುದು ಏನಾಗುವುದು. ಬಳಸಿದರೂ ಅವನಿಗಾಗೇ ಬಳಸಿದರೆ ಸುಮ್ಮನಿರುವ. ಅವನಿಗಾಗಿಯೂ ಬಳಸಿದರೆ ಕ್ಷಮಿಸುವ. ಕೇವಲ ನಮ್ಮ ವ್ಯವಹಾರಕ್ಕೆ , ಇನ್ನೊಬ್ಬರ ನಿಂದನೆಗೆ, ಅವಹೇಳನೆಗೆ ಬಳಸಿದರೆ ಜನ್ಮಾಂತರದಲ್ಲೊ ಅತಿಯಾದರೆ ಈ ಜನ್ಮದಲ್ಲೇ ಅದನ್ನು ಕಸಿದುಕೊಂಡು ಮೂಗನನ್ನಾಗಿ ಮಾಡುವ. ಆದ್ದರಿಂದ ವದನದಲ್ಲಿ ನಾಮವಿರಲೇಬೇಕು. ''ನುಡಿಯುವುದೆಲ್ಲ ದೇವರನಾಮ'' ಎನ್ನುವ ಅನುಸಂಧಾನವಿರಬೇಕು.

ಹರಿ ನಿವೇದಿತಾನ್ನವೇ ಉದರದಲ್ಲಿರಬೇಕು. ಅದರಿಂದಲೇ ಸದ್ಬುದ್ಧಿ, ಸದ್ಭಕ್ತಿ. ತಿನ್ನುವ ವಿಹಿತವಾದದ್ದೆಲ್ಲ ಹರಿಯ ಪ್ರಸಾದವೆಂದು ಭುಂಜಿಸಬೇಕು. ದೇವರ ನಿರ್ಮಾಲ್ಯವನ್ನು , ತೀರ್ಥವನ್ನು ತಲೆಯ ಮೇಲೆ ಧರಿಸಿರಬೇಕು. ಧರಿಸಿದೆಲ್ಲ ಪುಷ್ಪಾದಿಗಳನ್ನು ಬಿಂಬಮೂರ್ತಿಯ ನಿರ್ಮಾಲ್ಯವೆಂದರಿಯಬೇಕು. ತತ್ವ ಸುವ್ವಾಲಿಯಲ್ಲಿ ಇದೇ ಮಾತನ್ನು ತಿಳಿಸುವರು.

ಹೃದಯದಲಿ ತವರೂಪ । ವದನದಲಿ ತವನಾಮ
ಉದರದಲಿ ನೈವೇದ್ಯ ಶಿರದಲ್ಲಿ । ನಿರ್ಮಾಲ್ಯ
ಪದ ಜಲಗಳಿರಲು ಭಯವುಂಟೆ ॥

ಇಷ್ಟಾಗಿ ಜ್ಞಾನಿಗಳ ಮನೆಯ ಬಾಗಿಲ ಮುಂದೆ ಕಾಯಬೇಕು. ಆಗ ಅನೇಕ ಜ್ಞಾನಿಗಳ ದರ್ಶನ ಸಮಾಗಮವಾಗಿ ಹೆಚ್ಚಿನ ತತ್ವೋಪದೇಶ ಸಿಗುವುದು. ಆಗ ಬದುಕು ಸಾರ್ಥಕ.

ಪಾತ್ರರ ಸಂಗಡಯಾತ್ರೆಯ ಚರಿಸುತ
ವಿಧಾತೃಪಿತನ ಗುಣಸ್ತೋತ್ರಗಳ
ಶ್ರೋತೃದಿ ಸವಿದು ವಿಚಿತ್ರಾನಂದದಿ
ಗಾತ್ರವ ಮರೆದು ಪರತ್ರವ ಪಡೆವದೇ ॥ 8 ॥

ದೇವನನ್ನು ಒಲಿಸಿಕೊಳ್ಳಲು, ಬದುಕನ್ನು ಸಫಲಗೊಳಿಸಲು ಅನೇಕ ದಾರಿಗಳುಂಟು ಜಪ, ತಪ, ಯಜ್ಞ, ಧ್ಯಾನ, ದೇವ-ಬ್ರಾಹ್ಮಣರ ಸೇವೆ ಇತ್ಯಾದಿ. ಅದರಂತೆ ಮತ್ತೊಂದು ಮಾರ್ಗ. ಮಾರ್ಗಗಳಲ್ಲಿ ತಿರುಗುವುದು ಅಂದರೆ ಯಾತ್ರೆಯನ್ನು ಮಾಡುವುದು.

ಯಾತ್ರೆ ಮಾಡುವುದು ಒಂದು ದೊಡ್ಡ ಸಾಧನೆ. ಐಹಿಕ, ಪಾರತ್ರಿಕ ಉಭಯ ಲಾಭಗಳುಂಟು. ಈ ಎರಡು ತರಹದ ಲಾಭ ಸಿಗಬೇಕಾದರೆ ನಮಗೆ ತಿಳಿದಂತೆ ಒಂದು

ವಾಹನ ಮಾಡಿಕೊಂಡು ಲಾಡ್ಜ್‌ನಲ್ಲಿ ಇಳಿದು ಮಿಂದು, ತಿಂದು ದಾರಿಗುಂಟ ಚಲಚಿತ್ರಗೀತೆಗಳನ್ನು ಕೇಳಿ ಸುಂದರ ಪರಿಸರವೆನಿಸಿದರೆ ಮಾತ್ರ ನಿಂದು ಭಾವಚಿತ್ರಗಳನ್ನು ತೆಗೆದು ಕಂಡ ಕಂಡಲ್ಲಿ ಕಂಡ ಕಂಡದ್ದನ್ನು ತಿಂದು ತೇಗಿ ಮಜಾ ಮಾಡಿದರೆ ಸಿಗಲಾರದು. ಅದು ಯಾತ್ರೆಯಲ್ಲ ಬಹಳಾದರೆ ಪಿಕ್‌ನಿಕ್ ಎನಿಸಬಹುದು. ಆದ್ದರಿಂದ ಆ ತರಹದ ಪ್ರಯಾಣ ಪ್ರವಾಸ ಮಾಡಿದರೆ ಉಪಯೋಗವಿಲ್ಲ. ಧನ ಪೋಗುವುದು. ಸಮಯವೂ ಸರಿಯುವುದು. ಹಾಗಾದರೆ ನಿಜವಾದ ಯಾತ್ರೆ ಏನು? ದಾಸರು ತಿಳಿಸುವರು.

ಯಾತ್ರೆಯನ್ನು ಮಾಡಬೇಕಾದಾಗ ನಮ್ಮೊಡನೆ ಒಬ್ಬ ಯೋಗ್ಯ ಪಾತ್ರ ಅಂದರೆ ಜ್ಞಾನಿ ಜೊತೆಯಿರಬೇಕು. ಪೌರಾಣಿಕದ ಒಂದು ಮಾತು.

''ಯಾವತ್ಕಾಲಂ ತೀರ್ಥಯಾತ್ರಾಂ ಕರಿಷ್ಯೇ
ತಾವದ್ದೇಹಿ ವೈಷ್ಣವಾನಾಂ ಚ ಸಂಗಮ್''

ಎಲ್ಲಿಯವರೆಗೆ ತೀರ್ಥಯಾತ್ರೆ ಮಾಡುವವರೆಗೆ ದೇಹದಲ್ಲಿ ಶಕ್ತಿಯಿರುವುದೋ ಅಲ್ಲಿಯವರೆಗೆ ವೈಷ್ಣವರ ಸಂಗವಿರಲಿ ಎಂದು ದೇವನನ್ನು ಪ್ರಾರ್ಥಿಸಬೇಕು. ಪಾತ್ರರನ್ನು ಕರೆದುಕೊಂಡು ಹೋದಾಗಲು ನಮ್ಮ ಹರಟೆಗೆ ಅವರನ್ನು ಎಳೆಯಬಾರದು. ಅವರಿಂದ ವಿಧಾತೃಪಿತನಾದ ಪರಮಾತ್ಮನ ಗುಣಗಳ ಸ್ತೋತ್ರಗೈಯ್ಯಬೇಕು. ಆ ಜ್ಞಾನಿಗಳ ಉಪದೇಶವನ್ನು, ತೀರ್ಥಗಳ ಮಹತ್ವ, ಅಲ್ಲಿರುವ ಅಭಿಮಾನಿ ದೇವತಾರೂಪ, ಪರಮಾತ್ಮನ ರೂಪಗಳ ಪರಿಚಯ ಮಾಡಿಕೊಳ್ಳಬೇಕು. ಕ್ಷೇತ್ರ ಮೂರ್ತಿಗಳ ವಿವರ ತಿಳಿಯಬೇಕು. ಅದನ್ನು ಶ್ರೋತ್ರದಿ ಸವಿದು ವಿಚಿತ್ರವಾದ ಆನಂದ ಪಡೆಯಬೇಕು. ಆ ಆನಂದದಲ್ಲಿ ದೇಹಾಭಿಮಾನ ಮರೆತು ಕುಣಿಯುತಲಿರಬೇಕು. ನಾವು ನಲಿಯಲು ನಾರಾಯಣನು ನಮ್ಮೊಡನೆ ನಲಿಯುವ ಎನ್ನುವುದು ವಾಯುಪುರಾಣ.

''ನೃತ್ಯದ್ಭಿಃ ಭಗವದ್ಭಕ್ತ್ಯೈಃ ಸಹ ನೃತ್ಯತಿಕೇಶವಃ''

ನಲಿವ ಭಗವದ್ಭಕ್ತರೊಡನೆ ಕೇಶವನೂ ನಲಿವ. ಇದರಿಂದ ದೇಹದಲ್ಲಿ ಆರೋಗ್ಯವೂ ಬಲಗೊಳ್ಳುವುದು. ಆಗ ನಿಜವಾದ ಯಾತ್ರೆಯಾಗುವುದು. ಬದುಕು ಸಫಲವಾಗುವುದು.

ಸಾಧನೆಗಳು ಅನೇಕ. ಯಾತ್ರೆಯು ಅದರಲ್ಲಿ ಏಕ ಎಂದು ತಿಳಿದಾಯಿತು. ಈ ಯಾತ್ರೆ ಪಾತ್ರರ ಸಂಗಡಾಗಬೇಕೆಂದು ಅರಿತಾಯಿತು. ಪಾತ್ರರೆಂದರೆ ಯಾರೆಂಬುದು ಈಗ ತಿಳಿಯ ಬೇಕಾದದ್ದಿದೆ. 'ವಿದ್ಯಾ ದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾ'

ಜಗದಲ್ಲಿ ವಿದ್ಯಾವಂತರು ಅವಿದ್ಯಾವಂತರೆಂಬ ವಿಭಾಗವನ್ನು ಕಾಣುತ್ತೇವೆ. ವಿದ್ಯೆಯಿದ್ದಲ್ಲಿ ಸ್ವಲ್ಪ ಅಹಂಕಾರವಿರುವುದು ಹೆಚ್ಚು. ವಿದ್ಯೆಯಿಲ್ಲದೆ ಅಹಂಕಾರಿಯಾದರೆ ಅದಕ್ಕೆ ಯಾರೂ ಬೆಲೆ ಕೊಡರು. ಅಹಂಕಾರದೊಡನೆ ವಿದ್ಯೆಯಿದ್ದರೆ ಎದುರಿಗಾದರೂ

ಬೆಲೆಯಿರುವುದು. ವಿದ್ಯೆಯಿಲ್ಲದವ ವಿನೀತನಾಗುವುದು ಸಹಜ. ಹಾಗಿದ್ದರೆ ಸುಖ. ವಿದ್ಯಾವಂತರಲ್ಲಿ ವಿದ್ಯೆಯಿದೆ ವಿನಯವಿಲ್ಲ. ಅವಿದ್ಯಾವಂತರಲ್ಲಿ ವಿನಯವಿದೆ ವಿದ್ಯೆಯಿಲ್ಲ. ಆಗ ಇವರಿಬ್ಬರೂ ಪಾತ್ರರೆನಿಸಲಾರರು. ವಿದ್ಯೆಯೊಡನೆ ವಿನಯವಿದ್ದರೆ ವಿದ್ಯೆಯಿಂದಾಗಿ ವಿನಯ ಬಂದಿದ್ದರೆ ಅವನು ಪಾತ್ರ. "ತುಂಬಿದ ಕೊಡ ತುಳುಕುವುದಿಲ್ಲ" ಎನ್ನುವಂತೆ ಪೂರ್ಣ ವಿದ್ಯೆಯಿದ್ದರೆ ಅಹಂಕಾರಕ್ಕೆ ಜಾಗವಿಲ್ಲ. ಅರ್ಧ ವಿದ್ಯೆಯಿದ್ದರೆ ಅಹಂಕಾರಿಯಾಗಿ ಅನರ್ಥಕಾರಿಯಾಗುವ. ವಿದ್ಯೆ ವಿನಯವಿರುವ ಪಾತ್ರನನ್ನು ಹುಡುಕಬೇಕು. ಅವನ ಸಂಗಡ ಯಾತ್ರೆ ಚರಿಸಬೇಕು. ಆಗ ಸಾರ್ಥಕ.

ಧನವಿದ್ದವ ಅನುಕೂಲವಿದ್ದವ ತಾನೂ ಹೊರಟು ತನ್ನವರನ್ನು ಕರೆದುಕೊಂಡು ಯೋಗ್ಯಜ್ಞಾನಿಗಳನ್ನು ಕರೆದುಕೊಂಡು ಹೋಗಲು ಸಾಧ್ಯ. ಬಡವನಾದವನು ಗತಿ ಏನು? ಎಂದರೆ ದಾಸರು ನುಡಿವರು.

ನೀನೊಬ್ಬನೆ ಹೊರಡು ಆದರೆ ಪಾತ್ರರ ಸಂಗಡನಿದ್ದೇನೆ ಎಂದು ತಿಳಿದು ಹೊರುಡು. ನಾನೊಬ್ಬನೆ ಹೊರಟಾಗ ಪಾತ್ರರೂ ನನ್ನೊಡನಿದ್ದಾರೆ ಎನ್ನುವುದು ಮಿಥ್ಯಾಜ್ಞಾನವಾಗುವುದಿಲ್ಲವೇ? ಇಲ್ಲ. ನಿಜವಾದ ಪಾತ್ರರೂ ಬ್ರಹ್ಮಾದಿ ದೇವತೆಗಳು, ತತ್ವಾಭಿಮಾನಿಗಳು. ಅವರು ಯಾವಾಗಲೂ ನನ್ನೊಡನೆ ಇರುವರು. ನಾನು ಹೊರಟರೆ ನನ್ನೊಡನೆ ಹೊರಡುವರು. ಆದರೆ ಆ ಅನುಸಂಧಾನವಿರಬೇಕು. ಅಷ್ಟರಿಂದಲೇ ಫಲ ಅಶಕ್ತನಿಗೆ.

ಇನ್ನು ಅಶಕ್ತನಾದರೆ ನಡೆಯಲೂ ಶಕ್ತಿಯಿಲ್ಲ. ಸಂಗ್ರಹಿಸಿಟ್ಟ ಹಣವಿಲ್ಲ. ಆ ಅನಿವಾರ್ಯ ಪರಿಸ್ಥಿತಿಯಲ್ಲಿ ಚಿಂತನೆ ತಿಳಿಸುವುದು ಭಾಗವತ.

'ಸಂಸಾರ ಯಾತ್ರಾಮನುವರ್ತಯಿಷ್ಯೇ'

ಪ್ರತ್ಯೇಕ ಕ್ಷೇತ್ರಾದಿಗಳಿಗೆ ಹೋಗಲು ಆಗದಿದ್ದರೂ ನೀ ನಡೆಸುವ ಸಂಸಾರವನ್ನು ಜೀವನವನ್ನು ಯಾತ್ರೆಯೆಂದರಿತರೆ ಸಾಕು ಫಲವುಂಟು.

ಯಾತ್ರೆಗೆ ಹೋದಾಗ ನದಿ, ಪರ್ವತ, ಗುಹೆ, ಜಲಪಾತ, ಮುಂತಾದ ಆಶ್ಚರ್ಯಕರ ದೃಶ್ಯಗಳನ್ನು ನೋಡಿದಾಗ ಎಂಥ ಸೃಷ್ಟಿ! ಏನು ಆ ಬ್ರಹ್ಮನ ಶಕ್ತಿ ಎಂದು ಮೂಗ ಮೇಲೆ ಬೆರಳಿಡುತ್ತೇವೆ. ಇದೆಲ್ಲವನ್ನು ಸೃಷ್ಟಿಸಿದವ ಬ್ರಹ್ಮ-ವಿಧಾತನಾದರೆ ಈ ಪರಮಾತ್ಮ ಅವನನ್ನು ಅವನ ಸಕಲ ಶಕ್ತಿಯನ್ನು ಸೃಷ್ಟಿಸಿದ ಪಿತ ಎಂದು ಧ್ಯಾನಿಸಬೇಕು.

ಆ ವಿಧಾತೃ-ಪಿತನ ಗುಣಗಳನ್ನು ಶ್ರೋತ್ರದಿ ಸವಿಯಬೇಕು. ಶ್ರೋತ್ರಿಯಿರಿಂದ

ಕೇಳಬೇಕು. ಶ್ರೋತ್ರದಿ ಕೇಳಬೇಕು. ಕಿವಿಗೊಟ್ಟು ಕೇಳಬೇಕು. ಅದು ಕೇವಲ ಕೇಳುವುದಲ್ಲ ಅದರ ಸವಿ ಹತ್ತಬೇಕು. ಕೇಳಿ ಸುಮ್ಮನೆ ಕೂಡುವುದಲ್ಲ, ಆನಂದ ಪಡಬೇಕು. ಸುಮ್ಮನೆ ಮಂದಹಾಸ ಬೀರುವುದಲ್ಲ, ವಿಚಿತ್ರ ಆನಂದವಾಗಬೇಕು. ಆ ಆನಂದದಲ್ಲಿ ಗಾತ್ರವನ್ನು ದೇಹವನ್ನು ಅಂದರೆ ದೇಹಾಭಿಮಾನವನ್ನು ಮರೆಯಬೇಕು.

'ಪ್ರೋತ್ಕಂಠ ಉದ್ಗಾಯತಿ ರೌತಿ ನೃತ್ಯತಿ'

ಗದ್ಗದಿತರಾಗಬೇಕು. ಜೋರಾಗಿ ಹಾಡಬೇಕು. ಅಳಬೇಕು, ನಗಬೇಕು, ಕುಣಿಯಬೇಕು. ಹೀಗೆ ಮಾಡುತ್ತ ಕೊನೆಗೆ ಪರತ್ರವನ್ನು ಪಡೆಯಬೇಕು.

ಆಗಲೇ ಬಾಳಿದ್ದಕ್ಕೆ ಸಾರ್ಥಕ ಫಲ.

ಹಂಸ ಮೊದಲು ಹದಿನೆಂಟು ರೂಪಗಳ
ಸಂಸ್ಥಾನವ ತಿಳಿದನುದಿನದೀ
ಸಂಸೇವಿಸುವ ಮಹಾಪುರುಷರ ಪದ
ಪಾಂಸುವ ಧರಿಸಿ ಅಸಂಶಯವನಪ್ಪುದೆ **॥ 9 ॥**

ಶ್ರೀಜಗನ್ನಾಥದಾಸರು ಸಾಧನೆಯ, ಸಾರ್ಥಕ ಬದುಕಿನ ಮುಂದಿನ ಸೋಪಾನವನ್ನು ಸೂಚಿಸುತ್ತಿದ್ದಾರೆ. ಮತ್ಸ್ಯಾದಿ ಹತ್ತು ಅವತಾರಗಳ, ಅನಿರುದ್ಧಾದಿ ಐದು ರೂಪಗಳ ಒಂದೊಂದು ಗುಂಪುಗಳಿದ್ದಂತೆ ಹಂಸಾದಿ ಹದಿನೆಂಟು ರೂಪಗಳ ಗುಂಪುವುಂಟು. ಅದನ್ನು ತಿಳಿಯಬೇಕು. ತಿಳಿದವರ ಪಾದಧೂಳಿಯನ್ನು ಶಿರದಲ್ಲಿರಿಸಬೇಕು. ಆಗ ಬದುಕು ಸಾರ್ಥಕ.

ಈ ಹಂಸಾದಿರೂಪಗಳು ಮಧ್ಯಾಹ್ನ ಸಂಧ್ಯಾವಂದನೆಯ ಮೊದಲನೆಯ ಅರ್ಘ್ಯ ಮಂತ್ರದಲ್ಲಿ ಉಕ್ತವಾಗಿದೆ.

ಋಗ್ವೇದ ಸಂಹಿತೆಯಲ್ಲಿ ತೈತ್ತರೀಯ ಸಂಹಿತೆಯಲ್ಲೂ ಇರುವದು.

ಋಗ್ವೇದ ಪಾಠದಲ್ಲಿ ಕಡೆಯ ನಾಮವಾದ ''ಬೃಹತ್'' ಎಂಬುವದು ಇರುವದಿಲ್ಲ.

ಶ್ರೀಮದಾಚಾರ್ಯರು ಕಾಠಕ ಭಾಷ್ಯದಲ್ಲಿ ಉದಾಹರಿಸಿದ್ದಾರೆ.

ಇದು ಕೂರ್ಮಪುರಾಣದ ವಚನವೆಂದು ಆಚಾರ್ಯರ ಅಭಿಪ್ರಾಯ. ಹರಿಕಥಾಮೃತಸಾರದ 22ನೇ ಸಂಧಿಯ ಟೀಕೆಯಲ್ಲೂ ಇದರ ವಿವರಣೆ ವುಂಟು.

ಯಾವವು 18 ರೂಪಗಳು ಎಂಬುದನ್ನು ತಿಳಿಯೋಣ.

1) ಹಂಸ :- ''ಹಂತಿ ತಮ ಇತಿ ಹಂಸಃ'' ಕತ್ತಲೆಯನ್ನು, ಅಜ್ಞಾನವನ್ನು ನಾಶಮಾಡುತ್ತಾನೆ. ಆದ್ದರಿಂದ ಇವನು ಸಂಸ್ಥಾನ ಸೂರ್ಯ.

2) ಶುಚಿಷತ್ :- ''ಶುಚಿತ್ವಾತ್ ಶುಚಿಃ ವಾಯುಃ ತಸ್ಮಿನ್ ತಿಷ್ಠತೀತಿ ಶುಚೀಷತ್. ಶುದ್ಧನಾದ್ದರಿಂದ ವಾಯುದೇವನ ಹೆಸರು ಶುಚಿ. ಅವನಿಗೆ ಶುದ್ಧಿಯನ್ನು ನೀಡಲು ಅವನಲ್ಲಿರುವ ಹರಿಯ ರೂಪ ಶುಚೀಷತ್.

3) ವಸು :- ''ವಸುಸ್ಥಿತತ್ವಾತ್ ವಸುಃ'' ಪಿತೃದೇವತೆಗಳಾದ ಅಷ್ಟ ವಸುಗಳಲ್ಲಿರುವನಾದ್ದರಿಂದ ವಸು.

4) ಅಂತರಿಕ್ಷಸತ್ :- ''ಅಂತರಿಕ್ಷಃ ಲಕ್ಷ್ಮ್ಯಾತ್ಮಕಃ ಆಕಾಶಃ ತಸ್ಯಾಂ ತಿಷ್ಠತೀತಿ ಅಂತರಿಕ್ಷಸತ್ – ಅಂತರಿಕ್ಷವೆಂದರೆ ಆಕಾಶ. ಅವ್ಯಾಕೃತಾಕಾಶ. ಲಕ್ಷ್ಮೀಸ್ವರೂಪವಾದದು. ಅಲ್ಲಿರುವ ಹರಿಯ ರೂಪ ಅಂತರಿಕ್ಷಸತ್.

5) ಹೋತಾ – ''ಜುಹೋತೀತಿ ಹೋತಾ'' ಹೋಮಕ್ಕೆ ಯೋಗ್ಯವಾದದ್ದು ಅಗ್ನಿ. ಅಲ್ಲಿದ್ದು ಆಹುತಿಯನ್ನು ಸ್ವೀಕರಿಸುವನಾದ್ದರಿಂದ ಹರಿಯು ಹೋತಾ.

6) ವೇದಿಷತ್ ''ವೇದ್ಯಾಂ ತಿಷ್ಠತೀತಿ ವೇದಿಷತ್'' ಹೋಮ ಮಾಡುವ ಯಜ್ಞ ಭೂಮಿ ವೇದಿ ಅಲ್ಲಿರುವ ಹರಿ ವೇದಿಷತ್.

7) ಅತಿಥಿ :- ''ಅತಿಥಿಸ್ಥಿತತ್ವಾತ್ ಅತಿಥಿಃ'' – ಆಹ್ವಾನವಿಲ್ಲದೆ ಬಂದ ಬ್ರಾಹ್ಮಣ ಅತಿಥಿ. ಅವನಲ್ಲಿರುವ ಹರಿಯ ರೂಪ ಅತಿಥಿ.

8) ದ್ರೋಣಸತ್ :- ''ಸೋಮರಸ ಪಾತ್ರೆ ತಿಷ್ಠತೀತಿ ದ್ರೋಣಸತ್'' ಸೋಮರಸ ಇಡುವ ಪಾತ್ರೆ (ದೊನ್ನೆ) ದ್ರೋಣ ಅಲ್ಲಿರುವ ಹರಿಯ ರೂಪ ದ್ರೋಣಸತ್.

9) ನೃಷತ್ – ''ನೃಷು ಮನುಷ್ಯೇಷು ತಿಷ್ಠತೀತಿ ನೃಷತ್''
ಮನುಷ್ಯರಲ್ಲಿರುವ ಹರಿಯ ರೂಪ ನೃಷತ್

10) ವರಸತ್ – ''ವರೇಷು ಬ್ರಹ್ಮಾದಿಷು ತಿಷ್ಠತೀತಿ ವರಸತ್'' ಉತ್ತಮರಾದ ಬ್ರಹ್ಮಾದಿಗಳಲ್ಲಿರುತ್ತಾನೆ ಆದ್ದರಿಂದ ವರಸತ್

11) ಋತಸತ್ – ''ಋತೇ ಯಥಾರ್ಥರೂಪೇ ವೇದೇ ತೀಷ್ಠತೀತಿ ಋತಸತ್ ಅನಾದ್ಯನಂತಕಾಲದಿಂದ ನಾಶವಾಗದ ಸತ್ಯವಾದ ವಸ್ತು ವೇದ. ಅಲ್ಲಿದ್ದು ಅದರಿಂದ ಪ್ರತಿಪಾದ್ಯನಾದ್ದರಿಂದ ಹರಿ ಋತಸತ್

12) ವ್ಯೋಮಸತ್ – ಶ್ರೀಃ ವ್ಯೋಮ ತಸ್ಯಾಂ ತಿಷ್ಠತೀತಿ ವ್ಯೋಮಸತ್''

ವ್ಯೋಮವೆಂದರೆ ಶ್ರೀದೇವಿ. (ಲಕ್ಷ್ಮೀದೇವಿ) ಅವಳಲ್ಲಿರುವ ಹರಿ ವ್ಯೋಮಸತ್.

13) ಅಬ್ಜ – ''ಅಪ್ಸುಜಾಯತೇತಿ ಅಬ್ಜಃ ಜಲಚರಃ – ತತ್ರ ನಿಯಾಮಕತ್ವಾತ್ ಸೋಪಿ ಅಬ್ಜಃ

ನೀರಿನಲ್ಲಿ ಹುಟ್ಟುವ ಪ್ರಾಣಿಗಳು ಜಲಚರಪ್ರಾಣಿಗಳು ಅಲ್ಲಿದ್ದು ನಿಯಮನ ಮಾಡುವ ಹರಿ ಅಬ್ಜ.

14) ಗೋಜಾ – ''ಗವಿ ಜಾಯಂತೇತಿ ಗೋಜಾಃ – ಭೂಮಿಯಲ್ಲಿ ಅಥವಾ ಸ್ವರ್ಗದಲ್ಲಿದ್ದವರು ಗೋಜರು ಅವರಲ್ಲಿ ನಿಯಾಮಕನಾದ ಹರಿ ಗೋಜಾ.

15) ಋತಜಾ – ಋತಾತ್ ಜಾತಾಃ ಋತಜಾಃ – ಸತ್ಯವನ್ನು ನಂಬಿ ಹುಟ್ಟಿದವರು ಭಗವದ್ಭಕ್ತರು. ಅವರಲ್ಲಿ ನಿಯಾಮಕನಾದ ರೂಪ ಋತಜಾ.

16) ಅದ್ರಿಜಾ – ''ಅದ್ರಿಷು ಪರ್ವತೇಷು ತಿಷ್ಠತೀತಿ ಅದ್ರಿಜಾ''
ಹಿಮಾಲಯ, ಮೇರು ಮುಂತಾದ ಪರ್ವತಗಳಲ್ಲಿ ವ್ಯಾಪ್ತನಾಗಿ ಎಲ್ಲ ತರಹದ ಶಕ್ತಿಯನ್ನು ಕೊಡುವ ಹರಿಯ ರೂಪ ಅದ್ರಿಜಾ.

17) ಋತಂ – ''ವೇದೈಃ ಮುಖ್ಯತಯಾ ಪ್ರೋಕ್ತಂ ಋತಮಿತ್ಯೇವ ಚೋಚ್ಯತೇ'' ಮುಖ್ಯತಃ ವೇದಪ್ರತಿಪಾದ್ಯನಾದ್ದರಿಂದ ಋತ ಹರಿ.

18) ಬೃಹತ್ – ''ಬೃಹತ್ ಪೂರ್ಣಗುಣತ್ವಾಚ್ಚ ಸ ಏವ ಪುರುಷೋತ್ತಮಃ'' ಗುಣಪೂರ್ಣನಾದ್ದರಿಂದ ಹರಿ ಬೃಹತ್.

ಇಲ್ಲಿ ಒಂದೊಂದು ಶಬ್ದಕ್ಕೂ ಅನೇಕ ಅರ್ಥಗಳುಂಟು. ಆ ಎಲ್ಲ ಅರ್ಥಗಳು ಪರಮಾತ್ಮನಲ್ಲಿ ಪೂರ್ಣವಾಗಿ ಹೊಂದುತ್ತವೆ. ತಿಳಿಯುವ, ತಿಳಿಸುವ ಬುದ್ಧಿ, ಸಮಯ ಹೆಚ್ಚಿಲ್ಲದ್ದರಿಂದ ಒಂದೊಂದು ಅರ್ಥಗಳನ್ನು ತಿಳಿಸಲಾಗಿದೆ. ಈ ತರಹದ 18 ರೂಪಗಳನ್ನು ಅವುಗಳ ಅರ್ಥಗಳನ್ನು ಇರುವ ಅಧಿಷ್ಠಾನಗಳನ್ನು ತಿಳಿಯಬೇಕು. ಇದು ಎಂದೋ ಒಂದು ದಿನ ತಿಳಿದರೆ ಸಾಲದು ''ಅನುದಿನದಿ'' ಎನ್ನುವರು ದಾಸರು ನಮಗೆ ತಿಳಿಯದಾಗದಿದ್ದರೆ, ತಿಳಿದವರ ಪಾದಧೂಳಿಯನ್ನು ಧರಿಸಬೇಕು. ನಿಶ್ಚಿತಜ್ಞಾನವನ್ನು ಪಡೆಯಬೇಕು. ಆಗಲೇ ಬಾಳಿದುದಕೆ ಫಲ.

''ಚ'' ಶಬ್ದದಿಂದ ಇನ್ನುಳಿದುದನ್ನೆಲ್ಲ ತಿಳಿಯಬೇಕು. ಆಗಲೂ ನಿನಗೆ ಇಲ್ಲಿಯ

ಲಾಭ ಹೆಚ್ಚು ಸಿಗದಿರಬಹುದು. ಮುಂದಿನ ಗತಿ ಮಾತ್ರ ಪರಮಗತಿಯಾಗುವದು ಮಾತ್ರ ನಿಶ್ಚಿತ. ನಾನು ಬ್ರಾಹ್ಮಣ, ಮಾಧ್ವನೆಂದು ನನ್ನ ಮನೆಯಲ್ಲಿನಾನು ಹೇಳಬಹುದು. ಹೊರಗೆ ಹೇಳಹೊರಟರೆ ಜನ ನಗುತ್ತಾ ಅಪಹಾಸ ಮಾಡುವರು. ಅದಕ್ಕಾಗಿ ಸ್ವರ್ಗಕ್ಕೆ ಹೋದಾಗ ಎಲ್ಲರೂ ಅಲ್ಲಿ ನಮ್ಮವರೇ ಇರುವರು ಅಲ್ಲಿ ಹೇಳುವೆ ಎಂದರೆ ದಾಸರೆನ್ನುವರು ''ಅವನಿಯೊಳಗೆ'' ನೀ ಹೇಳಬೇಕಾದದ್ದು ದೇವಲೋಕದಲ್ಲಲ್ಲ. ಅವನಿಯೊಳಗೆ ಭೂಮಿಯಲ್ಲಿ ಹೇಳು. ಆಗ ದೇವಲೋಕದಲ್ಲಿ ಪ್ರವೇಶ.

ಭೂಮಿಯಲ್ಲಿ ಯಾರೆದರು ಹೇಳಲಿ ಎಂದರೆ ''ಕವಿಜನರು'' ಎಂದರು ದಾಸರು. ಕವಿ ಜನರೆಂದರೆ ಕವಿತೆಗಳನ್ನು ರಚಿಸುವ ಕವಿಗಳು ಎಂದಲ್ಲ, ಕವಿ ಎಂದರೆ ಜ್ಞಾನಿ ಎಂದರ್ಥ. ಇಂದು ಧರ್ಮದ ವಿರುದ್ಧ ಬರೆದ ಕವಿತೆಗೆ, ಸಾಹಿತ್ಯಕ್ಕೆ ಹೆಚ್ಚು ಮನ್ನಣೆ. ಅಲ್ಲಿ ಹೋಗಲೇ ಬೇಡ, ಜ್ಞಾನಿಗಳತ್ತ ಪೋಗು. ಅಲ್ಲಿ ನಿನಗೆ ಅಭಯವಿದೆ ಗೌರವವಿದೆ. ನೆಮ್ಮದಿ ಇದೆ.

ಜ್ಞಾನಿಗಳೆಂದೊಡನೆ ಯಾವದೊ ಜ್ಞಾನವಿದ್ದವರತ್ತ ಹೋಗಬೇಡ. ''ಸತ್-ಕವಿಜನರ'' ಸತ್ ನಾಮಕ ಹರಿಯ ಜ್ಞಾನವಿದ್ದವರನ್ನು ಸೇರು.

ಅವರು ಬರದಿದ್ದರೆ ಅವರ ಭವನಗಳಲ್ಲಿ ನೀನೇ ಹುಡುಕುತ್ತ ಹೋಗು. ಜ್ಞಾನ ಪಡೆ. ತಂದೆ-ತಾಯಿ ಒತ್ತಾಯಕ್ಕೆ, ಹೆಂಡತಿಯ ಮೋಹಕ್ಕೆ ಪರಿಸರದವರ ಸಮಾಧಾನಕ್ಕೊ ಒಂದು ಬಾರಿ ಪ್ರವಚನ, ಪುರಾಣ ಕೇಳಿದರೆ ಏನು ಉಪಯೋಗವಾಗಲಾರದು ''ಪ್ರತಿದಿವಸದಿ'' ಕೇಳಬೇಕು. ನನ್ನ ದಿನಚರಿಯಲ್ಲಿ ಪ್ರತಿನಿತ್ಯ ಅದಕ್ಕಾಗಿ ಸಮಯವನ್ನು ನಿಗದಿಪಡಿಸಬೇಕು.

ನಿತ್ಯ ಹೋದಾಗ ವ್ಯರ್ಥವಾಗಿ ಹರಟೆ ಹೊಡೆದೊ ದೊಡ್ಡ ಮನುಷ್ಯರಂತೆ ಯೋಗಕ್ಷೇಮವನ್ನು ವಿಚಾರಿಸಿ ಆತಿಥ್ಯ ಸ್ವೀಕರಿಸಿ ಬಂದರೆ ಏನು ಪ್ರಯೋಜನವಿಲ್ಲ.

ನಿನಗಂತೂ ಸಾಧನೆಯಾಗಲಿಲ್ಲ, ಅವರ ಪಾಡಿಗೆ ಅವರು ಸಾಧನೆ ಮಾಡುತ್ತಿದ್ದಾಗ ಮನೆಗೆ ಹೋಗಿ ಸಂಸಾರದ, ಜಗತ್ತಿನ ವಿಚಾರಗಳನ್ನು ಮೆಲುಕು ಹಾಕಿ ಬಂದರೆ ಅವರಿಗೂ ಸಾಧನೆಯಾಗದೆ, ಪುಣ್ಯಕ್ಕಾಗಿ ಹೋಗಿ ಅವರ ಸಾಧನೆಗೆ ವಿಘ್ನ ತಂದಿದ್ದಕ್ಕೆ ಪಾಪವೇ ಬರುವದು. ಆದ್ದರಿಂದ ಅಲ್ಲಿ ಹೋದಾಗ ''ಸುಕಥಾ ಶ್ರವಣ ಮಾಡು'' ಭಗವಂತನ, ಭಗವದ್ಭಕ್ತರ ಕಥೆಗಳನ್ನು ಕೇಳಿ ತಿಳಿ. ನೀನು ಹೋಗಿದ್ದು ಶ್ರವಣಕ್ಕಾಗಿ ಎನ್ನುವ ಎಚ್ಚರವಿರಲಿ. ಅವರಿಗೆ ಉಪದೇಶಿಸುವ ಸಾಹಸ ಮಾಡಬೇಡ. ಹೀಗೆ ನಿತ್ಯ ಶ್ರವಣ ಮಾಡುತ್ತಿದ್ದರೆ ಎಲ್ಲ ಯಾತ್ರೆಯ ಫಲ, ದಾನದ ಫಲ, ಯಜ್ಞದ, ಪೂಜೆಯ ಫಲ ದೊರಕುವದೆಂದು ಪುರಾಣಗಳು ಸಾರುವವು. ಹೀಗಿರು ಪ್ರವರನಾಗುವೆ.

ವರಗಾಯತ್ರೀನಾಮಕ ಹರಿ
ಗೀರೆರಡಂಘ್ರಿಗಳ ವಿವರವ ತಿಳಿದು
ತರುವಾಯದಿ ಷಡ್ವಿಧ ರೂಪವ
ಸಾ ದರದಲಿ ಅನುದಿನ ಧ್ಯಾನಿಸುತಿಪ್ಪುದೆ ॥ 10 ॥

ಬ್ರಾಹ್ಮಣನಿಗೆ ಕಲಿಯುಗದಲಿ ದೇವರನ್ನು ಒಲಿಸಿಕೊಳ್ಳಲು ಸರಳ, ಸುಂದರ, ಸುಖಕರವಾದ ಶ್ರೇಷ್ಠ ದಾರಿಯೇ ಗಾಯನ. ಆ ಗಾಯನದಲ್ಲಿಯ ಶಬ್ದಗಳು ಮತ್-ಕೃತವಾದರೆ ಅಲ್ಪ ಫಲ. ಉತ್ತಮರ ಶಬ್ದವಿದ್ದಷ್ಟು ಉತ್ತಮ ಫಲ. ನಮ್ಮ ಮಾತಿಗಿಂತ ನಮ್ಮ ಗುರುಗಳ – ತಂದೆ-ತಾಯಿಗಳ ಮಾತು ಶ್ರೇಷ್ಠ. ಅವರಿಗಿಂತ ಅಪರೋಕ್ಷ ಜ್ಞಾನಿಗಳಾದ ದಾಸರ-ಯತಿಗಳ ಮಾತು ಉತ್ತಮ. ಅದರಲ್ಲಿಯೂ ಪ್ರಾಕೃತ ಭಾಷೆಗಳಿಗಿಂತ ಗೀರ್ವಾಣ ವಾಣಿ ಅಂದರೆ ದೇವಭಾಷೆಯಾದ ಸಂಸ್ಕೃತ ಉಚ್ಚ, ಇದಕ್ಕಿಂತ ಎತ್ತರವಾದದ್ದು ಪುರಾಣದಲ್ಲಿಯ ಸ್ತೋತ್ರಗಳು. ಎಲ್ಲದಕ್ಕಿಂತ ಅತೀ ಎತ್ತರದಲ್ಲಿದ್ದದ್ದು ಯಾರೂ ರಚಿಸದ, ಅನಾದಿಯಾದ ವೇದದ ಗಾಯನ. ಆ ವೇದದಲ್ಲಿ ವರವಾದದ್ದೇ ಗಾಯತ್ರಿ. ಅದಕ್ಕಾಗಿ ದಾಸರೆಂದರು "ವರ ಗಾಯತ್ರೀ ..... " ಎಂದು.

ತನ್ನನ್ನು ಗಾನ ಮಾಡುವವರನ್ನು ಸದಾ ರಕ್ಷಿಸುವುದು. ಆದ್ದರಿಂದಲೇ ಇದು ಗಾಯತ್ರೀ.

"ಗಾಯಂತಂ ತ್ರಾಯತೇ ಯಸ್ಮಾತ್ ಗಾಯತ್ರೀ"

ಮೂರು ಪಾದದ ಗಾಯತ್ರಿಯ ವಿವರವೇ ಮೂರು ವರ್ಗದ ಪುರುಷಸೂಕ್ತ, ಮೇರು ವರ್ಗದ ಪುರುಷ ಸೂಕ್ತದ ಭಾಷ್ಯವೇ ಮೂರು ವೇದಗಳು. ಹೀಗಾಗಿ ಸಮಸ್ತ ವೇದದ ತಾಯಿ ಗಾಯತ್ರೀ. ಆದ್ದರಿಂದಲೇ

"ವೇದಮಾತಾ ಚ ಗಾಯತ್ರೀ"

ಎಂದಿತು ಪ್ರಮಾಣ. ಗಾಯತ್ರೀ ವಾಮನವಾದರೆ ಸಮಸ್ತ ವೇದ ತ್ರಿವಿಕ್ರಮ ರೂಪ.

ಬ್ರಾಹ್ಮಣ ಎಂದಾಗಬೇಕಾದರೆ ಮಾಡಬೇಕಾದ ಮೊದಲ ಜಪ ಗಾಯತ್ರೀ. ಯಾವುದೇ ವ್ಯಕ್ತಿಯಾದ್ದರೂ ಬ್ರಾಹ್ಮಣ್ಯ ರಕ್ಷಣೆಗೆ ಬಿಡಲಾಗದ ಒಂದೇ ಒಂದು ಜಪ ಗಾಯತ್ರೀ.

ಮಹಾ ಭಗವದ್ಭಕ್ತನಾದ, ಅರ್ಜುನನ ಮೊಮ್ಮಗ ಪರೀಕ್ಷಿತನಂಥಹ ಮಹಾರಾಜನಿಗೆ ಶಾಪ ಕೊಟ್ಟ ಪುಟ್ಟ ಮಗು ಶೃಂಗಿಗಿದ್ದ ಏಕೈಕ ಶಕ್ತಿ ಗಾಯತ್ರಿಯ ಶಕ್ತಿ.

ಅಸ್ತ್ರಗಳಲ್ಲಿ ಅತೀ ಶ್ರೇಷ್ಠವಾದ ಬ್ರಹ್ಮಾಸ್ತ್ರದ ಸಿದ್ಧಿಗೆ ಬೇಕಾದ ಏಕೈಕ ಮಂತ್ರ ಗಾಯತ್ರೀಮಂತ್ರ.

ಈ ಕೃತಿ - ಕರ್ತೃಗಳಾದ ಜಗನ್ನಾಥದಾಸರ ಗುರುಗಳಾದ ಗೋಪಾಲದಾಸಾದಿ ಸಮಸ್ತ ಜ್ಞಾನಿಗಳನ್ನು ಸಿದ್ಧ ಪುರುಷರನ್ನಾಗಿ ಮಾಡಿದ್ದೇ ಈ ಗಾಯತ್ರಿಯ ಸಿದ್ಧಿ.

ಅದಕ್ಕಾಗಿ ದಾಸರು ನಿರ್ವಿಶೇಷಿತವಾಗಿ ಗಾಯತ್ರಿ ಶಬ್ದವನ್ನುಚ್ಚರಿಸದೆ ''ವರ ಗಾಯತ್ರೀ....'' ಎಂದರು. ಈ ಗಾಯತ್ರೀಮಂತ್ರದ ಅಭಿಮಾನಿ ಬ್ರಹ್ಮದೇವರ ಪತ್ನಿಯಾದ ಗಾಯತ್ರೀ ಎಂಬ ಹೆಣ್ಣು ದೇವತೆಯಾದರೂ ಪ್ರತಿಪಾದ್ಯ ದೇವತೆ ಮಾತ್ರ ಶ್ರೀಮನ್ನಾರಾಯಣನೊಬ್ಬನೇ ಎಂದು ಸ್ಪಷ್ಟವಾಗಿ ತಿಳಿಯಬೇಕು.

ನರಸಿಂಹಪುರಾಣ ತಿಳಿಸುವ ಗಾಯತ್ರಿ ಮಂತ್ರದ ಧ್ಯಾನಶ್ಲೋಕ ಧ್ಯೇಯನಾರೆಂಬುದನ್ನು ತಿಳಿಸುವದು.

''ಧ್ಯೇಯಃ ಸದಾ ಸವಿತೃಮಂಡಲಮಧ್ಯವರ್ತಿ
ನಾರಾಯಣಃ ಸರಸಿಜಾಸನಸನ್ನಿವಿಷ್ಟಃ''

ಸ್ಪಷ್ಟವಾಗಿ ನಾರಾಯಣನೆಂಬ ಶಬ್ದದಿಂದಲೇ ಪ್ರತಿಪಾದ್ಯನನ್ನು ತಿಳಿಸಿದೆ. ಅದಕ್ಕಾಗಿ ದಾಸರೆಂದರು ''ವರಗಾಯತ್ರೀನಾಮಕ ಹರಿ'' ಎಂದು. ಈ ನಾರಾಯಣ ನಮ್ಮೆಲ್ಲರ ಎಲ್ಲ ಪಾಪವನ್ನು ಹರಣ ಮಾಡುವನಾದ್ದರಿಂದ ''ಹರಿ'' ಎನಿಸುವ.

ಈ ಹರಿಯ, ಗಾಯತ್ರಿಯ ಪಾದಗಳನ್ನು ಮೊದಲು ತಿಳಿಯಬೇಕು. ಇವನಿಗಿರುವ ಪಾದಗಳು ಅಂಘ್ರಿಗಳು ಈರೆರಡು. ಅಂದರೆ ನಾಲ್ಕು. ಈ ನಾಲ್ಕು ಪಾದದ, ನಾಲ್ಕು ಪಾದವುಳ್ಳ ಗಾಯತ್ರಿಯ ವಿವರವನ್ನು ತಿಳಿದಾಗ ಬಾಳು ಸಾರ್ಥಕ ಎಂದರು ದಾಸರು. ಆದರೆ ಅದರ ವಿವರವೆಲ್ಲವನ್ನು ತಿಳಿಯತೊಡಗಿದರೆ ಅದೇ ಒಂದು ಹೊತ್ತಿಗೆಯಾದೀತು. ಆದ್ದರಿಂದ ಈ ಹೊತ್ತಿಗೆ ಆ ಹೊತ್ತಿಗೆ ಬೇಡ. ಆದರೂ ಸಂಕ್ಷಿಪ್ತ ವಿವರವನ್ನು ತಿಳಿಯೋಣ.

ಛಾಂದೋಗ್ಯ ಉಪನಿಷತ್ ತಿಳಿಸಿತು.

''ಸೈಷಾ ಚತುಷ್ಪದಾ ಗಾಯತ್ರೀ''

ಈ ಗಾಯತ್ರಿಗೆ ನಾಲ್ಕು ಪಾದಗಳುಂಟು. ಆ ನಾಲ್ಕು ಪಾದಗಳು ಯಾವುದೆಂಬುದಕ್ಕೆ ಅಭಿಪ್ರಾಯ ಭೇದಗಳುಂಟು.

ಪ್ರಸಿದ್ಧವಾದ ನಾಲ್ಕು ಪಾದಗಳು (1) ವ್ಯಾಹೃತಿ (ಭೂಃ, ಭುವಃ, ಸ್ವಾಹಃ)

(2) ತತ ಸವಿತುರ್ವರೇಣ್ಯಂ (3) ಭರ್ಗೋದೇವಸ್ಯ ಧೀಮಹಿ (4) ಧಿಯೋ ಯೋನಃ ಪ್ರಚೋದಯಾತ್

ಬೃಹತ್‌ಭಾಷ್ಯ ಪ್ರಕಾರ

''ಚತುರ್ಥಪಾದೋ ಗಾಯತ್ರ್ಯಾಃ ಪ್ರಣವಃ ಸಮುದೀರಿತಃ''

ವ್ಯಾಹೃತಿಯನ್ನು ಬಿಟ್ಟು ಗಾಯತ್ರಿಯ 3 ಪಾದಗಳು, ಒಂದು ಓಂ ಕಾರ ಒಟ್ಟು ನಾಲ್ಕು. ಈ ನಾಲ್ಕು ಪಾದಗಳಲ್ಲಿ ಪರಮಾತ್ಮನ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಎಂಬ 4 ರೂಪಗಳು ನಿಯಾಮಕವಾದವು.

ಕೆಲವೆಡೆ ಗಾಯತ್ರಿಯನ್ನು ''ತ್ರಿಪದಾ'' ಎಂದಿದ್ದಾರೆ. ಆಗ ಪ್ರಣವ, ವ್ಯಾಹೃತಿಯನ್ನು ಬಿಟ್ಟು ಶುದ್ಧ ಗಾಯತ್ರಿಯ ಮೂರು ಪಾದಗಳನ್ನು ಮಾತ್ರ ಗಣಿಸಬೇಕು.

ಈರೆರಡು ಎನ್ನುವುದಕ್ಕೆ ನಾಲ್ಕು ಎನ್ನುವ ಅರ್ಥ ಒಂದಾದರೆ ಇನ್ನೊಂದರ್ಥ ಇಲ್ಲುಂಟು. ಈರ ಎಂದರೆ ವಾಯು. ಆ ವಾಯುವಿನ ಎರಡು ಸ್ಥಾನಗಳನ್ನು ತಿಳಿಯಬೇಕು.

''ಪರಿಸರ ನೀನಿರೆ ಹರಿ ತಾ ನಿರುವನು'' ಎಂದು ದಾಸರು ತಿಳಿಸಿದಂತೆ ಹೃದಯದಲ್ಲಿ ಹರಿ ಇರಬೇಕಾದರೆ ಈರ (ವಾಯು) ಮೊದಲಿರಬೇಕು. ಹರಿ ಈಗ ಎರಡು ಸ್ಥಾನದಲ್ಲಿ ಇರಬೇಕಾಗಿದೆ. ಒಂದು ಹೃದಯ, ಇನ್ನೊಂದು ಮಂತ್ರ. ಹರಿ - ಈರರಿಬ್ಬರೂ ಒಂದು ಪಾದವನ್ನು ಹೃದಯದಲ್ಲಿ ಮತ್ತೊಂದನ್ನು ಮಂತ್ರದಲ್ಲಿ ಸನ್ನಿಹಿತರಾಗಿದ್ದರೆಂದ ತಿಳಿದರೆ ಸಿದ್ಧಿಯಾಗುವದು. ಮೊದಲು ಈರ (ವಾಯು) ಬಂದು ಶುದ್ಧಮಾಡಿ ಭಕ್ತಿ ಬದ್ಧ ಮಾಡಿದಾಗ ಈ - ಲಕ್ಷ್ಮೀಯೊಡನೆ ರ-ರಮಣ ಮಾಡುವ ಈರ ಅಂದರೆ ಹರಿ ಬಂದು ನೆಲೆಸುವ. ನಮಗೊಲಿದು ಸುಖದಲ್ಲಿರಿಸುವ.

ಗಾಯತ್ರೀ ಮಂತ್ರದಲ್ಲಿ ಕಾಣುವ 24 ಅಕ್ಷರಗಳು 24 ತತ್ವಗಳ ಪ್ರತೀಕ. 24 ದೇವತೆಗೆ ಅಧಿಷ್ಠಾನ. 24 ಭಗವದ್ರೂಪಗಳ ಪ್ರತಿಮೆ. 24 ವರ್ಣಗಳಿಗೆ 24 ವರ್ಣ (ಬಣ್ಣ)ಗಳು. ಅದರಿಂದ 24 ಪಾಪದ ಪರಿಹಾರವುಂಟು. ಅದೆಲ್ಲದರ ಸಂಕ್ಷೇಪ ಪರಿಚಯವನ್ನು ಮಾಡಿಕೊಳ್ಳೋಣ.

ಕ್ರ. ಸಂ.	**ಅಕ್ಷರ ಗಳು**	**ಅಭಿಮಾನಿ ದೇವತೆ**	**ಹರಿಯ ರೂಪ**	**ಹರಿರೂಪ ಗಳ ವರ್ಣ**	**ತತ್ವಗಳು**	**ಪರಿಹಾರವಾಗುವ ಪಾಪಗಳು**
1	ತತ್	ಬ್ರಹ್ಮ	ಕೇಶವ	ಶ್ವೇತ	ನಯನ	ಬ್ರಹ್ಮಹತ್ಯಾ
2	ಸ	ಪ್ರಾಣ	ನಾರಾಯಣ	ಲೋಹಿತ	ನಾಸಿಕ	ಪರಸ್ತ್ರೀಽಗಮನ

3	ವಿ	ಶಂಕರ	ಮಾಧವ	ಕಜ್ಜಲ	ರಸನ	ಸುವರ್ಣಹರಣ
4	ತ್ರಿ	ಇಂದ್ರ	ಗೋವಿಂದ	ರಕ್ತ	ಶ್ರವಣ	ಪರದಾರಾಗಮನ
5	ವ	ಗಣೇಶ	ವಿಷ್ಣು	ನೀಲ	ಚರ್ಮ	ಗುರುಪತ್ನಿಗಮನ
6	ರೇ	ಆದಿತ್ಯ	ಮಧುಸೂದನ	ಕ್ಷೀರ	ಪಾಣಿ	ಅಭಕ್ಷ್ಯ ಭಕ್ಷಣ
7	ಣಿ	ಪಾರ್ವತಿ	ತ್ರಿವಿಕ್ರಮ	ಸ್ವರ್ಣ	ಪಾದ	ಅನ್ನ ನಿಂದಾ
8	ಯಂ	ಶೇಷ	ವಾಮನ	ಸ್ವರ್ಣ	ಪಾಯು	ಅನ್ನತ್ಯಾಗ
9	ಭ	ಪ್ರಜಾಪತಿ	ಶ್ರೀಧರ	ಕೇತಕಿ	ಉಪಸ್ಥ	ಜ್ಞಾನನಿಂದಾ
10	ಗೋ	ಬುಧ	ಹೃಷೀಕೇಶ	ಕಾಂಚನ	ವಾಕ್	ಗುರುನಿಂದಾ
11	ದೇ	ಶನಿ	ಪದ್ಮನಾಭ	ಶ್ವೇತ	ಮನ	ಶಿಶುಹತ್ಯಾ
12	ವ	ಗುರು	ದಾಮೋದರ	ತಾಮ್ರ	ಪೃಥಿವಿ	ಪಶುಹತ್ಯಾ
13	ಸ್ಯ	ಅರ್ಯಮಾ	ಸಂಕರ್ಷಣ	ತಾಮ್ರ	ಜಲ	ತೀರ್ಥಾದಿಗಳಲ್ಲಾದ
14	ಧೀ	ಜಮದಗ್ನಿ	ವಾಸುದೇವ	ಮೇಷ	ತೇಜ	ದಾರಿಯಲ್ಲಾದ
15	ಮ	ಕಾಮ	ಪ್ರದ್ಯುಮ್ನ	ಸ್ವರ್ಣ	ವಾಯು	ಮಿಥ್ಯಾಜ್ಞಾನ ಮಾಡಿಸಿದ
16	ಹಿ	ಧರ್ಮ	ಅನಿರುದ್ಧ	ತಾಮ್ರ	ಆಕಾಶ	ಅಧಮಸ್ತ್ರೀಗಮನ
17	ಧೀ	ಮನು	ಪುರುಷೋತ್ತಮ	ಗೌರ	ಗಂಧ	ಸಜ್ಜನ ನಿಂದಾ
18	ಯೋ	ಪಿತೃದೇವತೆ	ಅಧೋಕ್ಷಜ	ತಿಲ	ರಸ	ಸತ್ಕರ್ಮಲೋಪ
19	ಯೋ	ವಾಯು	ನಾರಸಿಂಹ	ಧೂಮ್ರ	ರೂಪ	ಮಾನಸ
20	ನಃ	ಈಶಾನ್ಯ	ಅಚ್ಯುತ	ರಕ್ತ	ಸ್ಪರ್ಶ	ಜಲಪಾನ (ನಿಶಿದ್ಧ)
21	ಪ್ರ	ಮನ್ಮಥ	ಜನಾರ್ದನ		ಶಬ್ದ	ಮದ್ಯಪಾನ
22	ಚೋ	ಲಕ್ಷ್ಮಣ	ಉಪೇಂದ್ರ	ಶ್ವೇತ	ಅಹಂಕಾರ	ಉತ್ಥಾನ ಕೃತ
23	ದ	ವ್ಯಾನ	ಹರಿ	ಶಂಖ	ಮಹತ್	ನಾನಾ ಯೋನಿಕೃತ
24	ಯಾತ್	ಅನಿರುದ್ಧ	ಶ್ರೀಕೃಷ್ಣ	ರಕ್ತ	ಅವ್ಯಕ್ತ	ಸರ್ವಪಾಪ

ಗಾಯತ್ರಿಯ ಈರೆರಡಂಘ್ರಿಯ ವಿವರವನ್ನು ಸಂಕ್ಷೇಪವಾಗಿ ತಿಳಿದ ತರುವಾಯದಿ ಷಡ್-ವಿಧ ರೂಪವನ್ನು ತಿಳಿಯಬೇಕು.

ಆಚಾರ್ಯರು ಛಾಂದೋಗ್ಯ ಭಾಷ್ಯದಲ್ಲಿ ತಿಳಿಸುತ್ತಾರೆ.

ಗಾಯತ್ರ್ಯಾ ಸಂಸ್ಥಿತೋ ವಿಷ್ಣುಃ ಸ್ತ್ರೀರೂಪಃ ಸೂರ್ಯಸಪ್ರಭಃ
ದ್ವಿತೀಯಶ್ಚೈವ ಮತ್ಸ್ಯಾದಿ ಭೂತಾನಾಮವತಾರಗಃ
ತೃತೀಯೋ ವಾಚಿಸಂಸ್ಥಶ್ಚ ಸ್ತ್ರೀರೂಪೋಹಯಶೀರ್ಷಕಃ
ಚತುರ್ಥಃ ಪೃಥಿವೀಸಂಸ್ಥಃ ಸ್ತ್ರೀರೂಪಃ ಪೀತವರ್ಣಕಃ
ಜೀವಸ್ಯಾಂತರ್ಗತೋ ವ್ಯಾಪ್ಯ ಶರೀರಮಿತಿ ನಾಮಕಃ
ಪಂಚಮಸ್ತತ್ ಹೃದಿಸ್ಥಶ್ಚ ಷಷ್ಟಃ ಹೃದಯಃ ನಾಮಕಃ
ಗಾಯತ್ರೀನಾಮಕೋ ವಿಷ್ಣುಃ ಏವಂ ಷಡ್ವಿಧಮುಚ್ಯತೇ

1) ಗಾಯತ್ರೀಯಲ್ಲಿರುವ ಸ್ತ್ರೀರೂಪ

2) ಮತ್ಸ್ಯಾದಿ ವಿಶಿಷ್ಟರೂಪ

3) ಸ್ತ್ರೀರೂಪಿಯಾದ ಹಯಗ್ರೀವ ರೂಪ

4) ಪೃಥಿವಿಯಲ್ಲಿರುವ ಪೀತ ವರ್ಣದ ರೂಪ

5) ಜೀವಾಂತರ್ಗತ ಶರೀರನಾಮಕ ರೂಪ

6) ಜೀವನ ಹೃದಯದಲ್ಲಿರುವ ಹೃದಯನಾಮಕ ರೂಪ

ಇದನ್ನೇ ಪರಿಮಳಾಚಾರ್ಯರು ತಮ್ಮ ಪ್ರಾತಃ ಸಂಕಲ್ಪಗದ್ಯದಲ್ಲಿ ತಿಳಿಸುವಾಗ ಗಾಯತ್ರೀ ಭೂತವಾಕ್‌ಪೃಥಿವಿ ಶರೀರಹೃದಯಭೇಧಾತ್ ಎನ್ನುವರು.

ಮೂರು ಪಾದ ಗಾಯತ್ರೀಯನ್ನು ಆರು ಭಾಗ ಮಾಡಿ ಅದರಲ್ಲಿ 6 ರೂಪಗಳನ್ನು ಅನುಸಂಧಾನಿಸಬೇಕು. ಗಾಯತ್ರಿಯಲ್ಲಿಯ ಆರು ಭಾಗಗಳು.

(1) ತತ್ಸವಿತುಃ (2) ವರೇಣಿಯಂ (3) ಭರ್ಗೋದೇವಸ್ಯ (4) ಧೀಮಹಿ (5) ಧಿಯೋಯೋನಃ (6) ಪ್ರಚೋದಯಾತ್ ಎಂದು ತಿಳಿಯಬೇಕು.

ಕೆಲವರು ಹೀಗೂ ಹೇಳುವರು.

(1) ಪ್ರಣವ (2) ವ್ಯಾಹೃತಿ (3) ತತ್ಸವಿತುರ್ವರೇಣ್ಯಂ (4) ಭರ್ಗೋದೇವಸ್ಯ ಧಿ

ೀಮಹಿ (5) ಧಿಯೋ ಯೋನಃ ಪ್ರಚೋದಯಾತ್ (6) ಕೊನೆಯ ಓಂಕಾರ.

ಈ ಆರು ರೂಪಗಳನ್ನು ಕಣ್ಣು, ಮೂಗು, ನಾಲಿಗೆ, ಕಿವಿ, ಚರ್ಮ ಎಂಬ ಪಂಚ ಜ್ಞಾನೇಂದ್ರಿಯಗಳು ಹಾಗೂ ಮನಸ್ಸೆಂಬ ಪ್ರತೀಕಗಳಲ್ಲಿ ಚಿಂತಿಸಬೇಕು.

ಈ ಚಿಂತನೆಯು ಯಾರದೋ ಒತ್ತಾಯಕ್ಕೆ ಅಥವಾ ಪ್ರತಿಷ್ಠೆಗೆ, ಇಲ್ಲವೇ ಅನಿವಾರ್ಯ ಕರ್ಮವೆಂದು ನಿಂದಿಸುತ್ತಾ ಮಾಡಿದರೆ ನಿರುಪಯುಕ್ತ.

ದಾಸರೆಂದರು ''ಸಾದರದಲಿ'' ಧ್ಯಾನಿಸಬೇಕು. ಅತ್ಯಂತ ಆದರದಿಂದ, ಗೌರವದಿಂದ ಇದರಿಂದ ನಿನ್ನ ಉದ್ಧಾರವೆಂದು ಚಿಂತಿಸುತ್ತಾ ಧ್ಯಾನಿಸಬೇಕು. ಇದನ್ನೋದಿದ ಒಂದು ದಿನ ಚಿಂತಿಸಿದರೆ ಫಲ ಸಿಗದು ''ಅನುದಿನ'' ಧ್ಯಾನಿಸಬೇಕು.

ನಮ್ಮ ಈ ವೇಗದ ಭೋಗದ ಬದುಕಿನಲ್ಲಿ ಕಲಿಯ ಕಾಲಾನಲದಿಂದ ಈ ಚಿಂತನೆ ಒಂದು ದಿನವೂ ಆಗುತ್ತಿಲ್ಲ. ದಾಸರ ಪ್ರಾರ್ಥನೆಯ ಮನ್ನಿಸಿ ಗಾಯತ್ರಿಯಲ್ಲಿಯ ಅಭಿಮಾನಿ ದೇವತೆಗಳೂ ಹರಿಯ ರೂಪಗಳು ಒಂದು ದಿನವಾದರೂ ಚಿಂತನೆಯತ್ತ ಬದುಕಿಗೆ ಫಲ ನೀಡಲಿ ಎನ್ನುವುದೇ ಹೆಬ್ಬಯಕೆ.

ಬಿಗಿದ ಕಂಠದಿಂ ದೃಗ್ಬಾಷ್ಪಗಳಿಂ
ನಗೆಮೊಗದಿಂ ರೋಮಗಳೊಗೆದು
ಮಿಗೆ ಸಂತೋಷದಿ ನೆಗೆದಾಡುತ ನಾ
ಲ್ಮೊಗನೈಯ್ಯನ ಗುಣ ಪೊಗಳಿ ಹಿಗ್ಗುವದೆ ॥ 11 ॥

ಭಾಗವತ ಭಾಗವತರ ಲಕ್ಷಣಗಳನ್ನು ತಿಳಿಸಿದ ವಿಷಯವನ್ನು ದಾಸರು ಈ ನುಡಿಯಲ್ಲಿ ತಿಳಿಸುತ್ತಿದ್ದಾರೆ.

ಪರಮಾತ್ಮನ ಗುಣಗಳನ್ನು ಪಾಡುವಾಗ ನಿಜವಾದ ಭಕ್ತಿಯಿಂದ ಪಾಡಬೇಕು. ನನ್ನಲ್ಲಿ ಭಕ್ತಿಯಿದೆ ಎಂದು ನಾ ಹೇಳಿಕೊಂಡು ನನ್ನ ಭಕ್ತಿಯ ಪರಿಚಯ ಮಾಡುವಂತಾಗಬಾರದು. ಪ್ರಾಮಾಣಿಕ ಭಕ್ತಿಯಿಂದ ಪಾಡಿದರೆ ಇವೆಲ್ಲವೂ ಆಗುವವು. ಕಂಠಬಿಗಿದು ಮಾತುಗಳೇ ಬರದಂತಾಗುವದು. ಅಚಿಂತ್ಯನ ಅಚಿಂತ್ಯ ಮಹಿಮೆಗಳನ್ನು ನೆನೆದು ನೆನೆದು ಕಣ್ಣಲ್ಲಿ ಆನಂದ ಬಾಷ್ಪಗಳು ಬರಬೇಕು. ಮೊಗದಲ್ಲಿ ಸಂತಸದ ಸೆಲೆ ಚಿಮ್ಮಬೇಕು. ರೋಮಾಂಚನವಾಗಿ ಮೈ ಕೂದಲುಗಳೆಲ್ಲ ಎದ್ದು ನಿಲ್ಲಬೇಕು. ಆ ಸಂತೋಷ ಹೆಚ್ಚಾಗಿ ಮೈಮರೆತು ಕುಣಿಯಬೇಕು. ಇದನ್ನೇ ದಾಸರು ಮತ್ತೊಂದೆಡೆ

"ನಗುವರೋ ರೋಧಿಸುವರು ನಾಟ್ಯವಾಡುವರೊ" ಎಂದು ತಿಳಿಸುವರು.

ಇದು ಭಕ್ತಿಯ ಪರಾಕಾಷ್ಟತೆ. ಒಂದೇ ದಿನಕ್ಕೆ ಎಲ್ಲವೂ ಸಿದ್ಧಿಸಲಾರದು. ಕ್ರಮವಾಗಿ ಎಲ್ಲವನ್ನು ಸಂಪಾದಿಸಬೇಕು. ಆ ಸಂದರ್ಭದಲ್ಲಿ ಸ್ವಲ್ಪವಾದರೂ ಮನೋವಿಕಾರವಾದರೆ ಆ ಕ್ಷಣ ಲೌಕಿಕ ವಿಚಾರ ಮರೆತರೆ ಆ ದಾರಿಯಲ್ಲಿದ್ದಂತೆ. ನಾರದ, ಪ್ರಹ್ಲಾದಾದಿಗಳು ಆ ದಾರಿಯಲ್ಲಿ ಗುರಿ ಮುಟ್ಟಿದವರು.

ಇದೊಂದೇ ಭಕ್ತರ ಲಕ್ಷಣವಲ್ಲ, ಇದೂ ಒಂದು ಭಕ್ತರ ಲಕ್ಷಣ ಎನ್ನುವರು ಶ್ರೀಮದಾಚಾರ್ಯರು. ಕೆಲವರದು ಈ ತರಹವಿದ್ದರೆ, ಹಲವರು ಅಂತರಂಗದಲ್ಲೇ ಭಕ್ತಿಯನ್ನು ತುಂಬಿಕೊಂಡು ಬಾಹ್ಯದಲ್ಲಿ ಏನೂ ತೋರಿಸದೇ ಗಂಭೀರವಾಗಿರುವರು.

ಇಲ್ಲಿ ನಾರಾಯಣನನ್ನು "ನಾಲ್ಮೊಗನಯ್ಯಾ" ಶಬ್ದದಿಂದ ಕರೆದಿದ್ದಾರೆ. ಚತುರ್ಮುಖ ಬ್ರಹ್ಮ ಹೇಗೆ ನಿರಂತರವಾಗಿ ನಾಲ್ಕು ಮುಖದಿಂದ ಭಗವಂತನನ್ನು ಸ್ತುತಿಸುತ್ತಾನೆ ಹಾಗೇ ನಮ್ಮ ಶಕ್ತ್ಯಾನುಸಾರ ನಿರಂತರ ಎಲ್ಲ ಬಗೆಯಿಂದ ಪೊಗಳಿ ಹಿಗ್ಗುವದೇ ಫಲವಿದು ಬಾಳ್ದುದಕೆ.

ಗೃಹಕರ್ಮವ ಬ್ಯಾಸರದಲೇ ಪರಮೋ
ತ್ಸಹದಿ ಮಾಡುತ ಮೂರ್ಜಗದ
ಮಹಿತನ ಸೇವೆ ಇದೇ ಎನುತಲಿ ಮೋದದಿ
ಅಹರಹಮನದಿ ಸಮರ್ಪಿಸುತ್ತಿಪ್ಪುದೇ. || 12 ||

ಸಾಧನೆ ಮಾಡಬೇಕೆನ್ನುವ ಮನುಜಗೆ ಮನೆ ಬಿಟ್ಟು ವನಕ್ಕೆ ಹೋಗಲೇಬೇಕೆನ್ನುವ ಕಡ್ಡಾಯವಿಲ್ಲ. ವನಕ್ಕೆ ಹೋದರೂ ಮನೆಯ, ಮಡದಿಯ, ಮಕ್ಕಳ ಮೋಹ ಮನದಿಂದ ಮಾಚದಿದ್ದರೆ ... ಹೋಗಿ ಏನೂ ಉಪಯೋಗವಿಲ್ಲ. ಮನೆಯಲ್ಲಿ ಮೋಹದ ವಾತಾವರಣವು ಹೆಚ್ಚು, ಏಕಾಂತದ ಶಾಂತ ಮನಸ್ಸಿನ ವಾತಾವರಣ ಕಡಿಮೆ ಎನ್ನುವುದಕ್ಕಾಗಿ ವನಕ್ಕೆ ಹೋಗುವುದನ್ನು ಶಾಸ್ತ್ರ, ಪುರಾಣಗಳು ಸಾರಿವೆ. ಮನೆಯಲ್ಲಿದ್ದರೂ ಸಾಧನೆಯನ್ನು ಹೇಗೆ ಮಾಡಬೇಕೆಂಬುದನ್ನು ಪುರಾಣಾದಿಗಳಲ್ಲಿ ಹೇಳಿದ್ದನ್ನು ಸಂಗ್ರಹಿಸಿ ತಿಳಿಸುವರು ದಾಸಾರ್ಯರು ಈ ನುಡಿಯಲ್ಲಿ.

ಗೃಹಕರ್ಮವನ್ನು ಅಂದರೆ ಮನೆಗೆಲಸವನ್ನೇ ಮಾಡುತ್ತಿರು. ಅದರಲ್ಲಿ ಎಂದಿಗೂ ನಿರುತ್ಸಾಹ ಬೇಡ. ಸ್ವಾರ್ಥದ ಅಡಿಗೆಯಿದ್ದರೆ, ಗಂಡ ತನಗೆ ಬೇಕಾದ್ದನ್ನು ತಂದಿದ್ದರೆ, ಅತ್ತೆ ಅತ್ತ ಹೋಗಿದ್ದರೆ, ತವರು ಮನೆಯವರು ಬಂದಿದ್ದರೆ, ಏನು ಉತ್ಸಾಹ ಇರುವುದೋ ಅದೇ

ಉತ್ಸಾಹ ತನಗೆ ಬೇಡಾಗಿದ್ದರೂ ಪತಿಗೆ ಬೇಕಾದಾಗ, ಪತಿ ತನಗೆ ಇಷ್ಟವಾದದ್ದನ್ನು ತರದಿದ್ದಾಗ, ಪತಿಯ ಸಂಬಂಧಿಕರು ಬಹಳ ದಿನವಾದರೂ ಹೊರಡದಿದ್ದಾಗ ಆ ಪ್ರೀತಿ ಇದ್ದರೆ ಅದೇ ದೊಡ್ಡ ಸಾಧನೆ. ಆಗ ಬ್ಯಾಸರಿಸಿದರೆ ಅದೇ ಪಾಪದ ದಾರಿ. ಯಾವಾಗಲೂ ನಗುನಗುತಾ ಉತ್ಸಾಹದಿಂದಿದ್ದು ಎಲ್ಲವನ್ನು ನುಂಗಿ ಸಂತಸದಿಂದಿದ್ದು ಸುಖ ನೀಡುವುದೇ ಬದುಕಿನ ಸಫಲತೆಯನ್ನು ಪಡೆದಂತೆ. ಇದಕ್ಕೆ ವಿರುದ್ಧವಾಗಿ ಸಣ್ಣ ಕಾರಣಕ್ಕಾಗಿ ಗಂಟುಮೋರೆ ಹಾಕಿ, ಸಿಟ್ಟು ಮಾಡುತ್ತಾ ಮಾತು ಬಿಡುವದು ಅಥವಾ ಒದರಾಡುವದೇ ಬದುಕಿನಲ್ಲಿ ವಿಫಲತೆ ಸಾಧಿಸಿದಂತೆ.

ಗೃಹ ಕರ್ಮವನ್ನು ಮಾಡುವದೇ ಕೆಲವರಿಗೆ ಬೇಸರ. ಶೂದ್ರಾನ್ನ (ಹೋಟೆಲ-ಅನ್ನ)ವೇ ಅವರಿಗೆ ರುಚಿ. ಅಂಥವರಿಗೆ ಮೊದಲು ಮನೆಗೆಲಸ ಮಾಡುವುದನ್ನು ಕಲಿಸುವರು ದಾಸರು. ಹಲವರು ತಮ್ಮವರು ಬಂದಾಗ ತನಗೆ ಮನಸ್ಥಿತಿ ಬಂದಾಗ ಮಾತ್ರ ಉತ್ಸಾಹದಿಂದ ಮಾಡುವರು. ಅವರಿಗೆ ಸಮಾನರಾಗಿರಲು ತಿಳಿಸುವರು.

ಸಮಾನ ಉತ್ಸಾಹಿಗಳಿಗೆ ಪರಮೋತ್ಸಾಹವನ್ನು ತುಂಬಲು ತಿಳಿಸುವರು ದಾಸರು. ಕೇವಲ ಗಂಡ, ಅತ್ತೆ, ಮಾವ, ಭಾವ, ಮೈದುನ, ಮಗ, ಮಗಳು, ಅಣ್ಣ, ತಮ್ಮ ಎಂದಾಗ ಉತ್ಸಾಹ ಬರಬಹುದು. ಅದೇ ಅವರೆಲ್ಲರೂ ಭಗವಂತನ ಪ್ರತಿಮೆಗಳು. ಅನಂತಗುಣ-ಪೂರ್ಣನಾದ ಬ್ರಹ್ಮಾಂಡಾಧಿಪತಿ. ಹರಿ ತನ್ನ ಕೈಯಿಂದ ಇವರಲ್ಲಿದ್ದು ಉಣ್ಣುವ ಅವನಿಗೆ, ನಾ ಸ್ನಾನ ಮಾಡಿಸುತ್ತಿರುವೆ. ಅಲಂಕರಿಸುವೆ ಇತ್ಯಾದಿಯಾಗಿ ಹರಿಕಥಾಮೃತಸಾರೋಕ್ತ ಹಾಗೂ ವಿಜಯದಾಸರ ಗೋಪಾಲದಾಸರಾದಿಗಳ ಮಾತಿನಂತೆ ಅನುಸಂಧಾನದಿಂದ ಗೃಹಕರ್ಮ ಮಾಡಿದಲ್ಲಿ ಪರಮೋತ್ಸಾಹ ಬರುವದು.

ಅಥವಾ ಗೃಹಕರ್ಮವೆಂದರೆ ಗೃಹಸ್ಥ ಕರ್ಮ ಎಂದರ್ಥ. ಗ್ರಹಸ್ಥನ ಪ್ರಧಾನ ಧರ್ಮ. ಅತಿಥಿ ಸತ್ಕಾರ. ನಿತ್ಯದಲ್ಲಿ ಅಚೇತನವಾದ ಪ್ರತಿಮೆ - ಸಾಲಿಗ್ರಾಮಗಳ ಪೂಜೆ ಮಾಡುವಂತೆ ಅತಿಥಿ ಸತ್ಕಾರವನ್ನು ಅವಶ್ಯವಾಗಿ ಮಾಡಲೇಬೇಕು.

ಮೊದಲೇ ತಿಳಿಸಿ, ಏನನ್ನೂ ಅಪೇಕ್ಷಿಸದೆ ಸರಿಯಾದ ಸಮಯಕ್ಕೆ ಬಂದವರಿಗೆ ಸತ್ಕರಿಸುವ ಸ್ವಭಾವವೇ ಇಂದು ಕ್ಷೀಣಿಸುತ್ತಿರುವಾಗ, ಮೊದಲೇ ತಿಳಿಸದೇ ಅಕಾಲಕ್ಕೆ ಬಂದು ಅಪೇಕ್ಷಿಸುವ ಅತಿಥಿಗೆ ಇಂದು ಸತ್ಕಾರ ಸಿಗುವುದು ಅತೀ ಕಷ್ಟಸಾಧ್ಯ. ಅಂಥವರಲ್ಲಿ ಸಹಜವಾಗಿ ಬೇಸರ ಬರುವದು. ಅದಕ್ಕಾಗಿ ಉಪನಿಷತ್ತು "ಅತಿಥಿ ದೇವೋಭವ" ಎಂದು ಅತಿಥಿಯನ್ನು ದೇವತೆ ಎಂದು ತಿಳಿ ಎಂದಿತು. ದಾಸರು ಅಂಥಹ ಅತಿಥಿ-ಸತ್ಕಾರರೂಪ ಗೃಹಸ್ಥ ಕರ್ಮವನ್ನು ಬ್ಯಾಸರದಲಿ ಪರಮೋತ್ಸಾಹದಿ ಮಾಡೆಂದರು.

ಮತ್ತೊಂದರ್ಥ ಗೃಹ ಎಂದರೆ ದೇಹ. ದೈಹಿಕ ಕರ್ಮವನ್ನು ಬೇಸರಿಸದೆ ಮಾಡು ಎನ್ನುವರು ದಾಸರು. ಕೆಲವರು ಸರಿಯಾಗಿ ಹಲ್ಲುಜ್ಜುವುದಿಲ್ಲ, ಶುದ್ಧ ಸ್ನಾನವಿಲ್ಲ, ಸ್ವಚ್ಛ ಬಟ್ಟೆಗಳಿಲ್ಲ, ಶುದ್ಧವಾದ, ಶಿಸ್ತಾದ ಭೋಜನವಿಲ್ಲ, ಎಲ್ಲದರಲ್ಲೂ ಆಲಸ್ಯ, ಬೇಸರಿಕೆ. ಅದನ್ನು ಉತ್ಸಾಹದಿಂದ ಮಾಡಬೇಕು. ಈ ದೇಹ ಭಗವಂತನ ಮಂದಿರ. ಇಲ್ಲಿ ಸ್ವಚ್ಛವಿದ್ದಾಗ ಹರಿ ನೆಲೆಸುವ. ಜ್ಞಾನಿಗಳು ತಮ್ಮೊಡನೆ ಸೇರಿಸಿಕೊಳ್ಳುವರು. ಇವನ ಬದುಕು ಸಾರ್ಥಕವಾಗುವ ಮನುಜನಾಗುವ.

ಇದಕ್ಕಿಂತ ಮುಖ್ಯವಾದ ಅರ್ಥವುಂಟು. ದೈಹಿಕ ಕರ್ಮ ಎಂದರೆ ದೇಹ ಶುದ್ಧವಿಡುವುದು ಎಂದಾದರೆ ದೇಹದಿಂದಾಗುವ ಸೇವೆಗಳು. ಇಂದು ಜನ ದುಡ್ಡಿಗೆ (ಧನಕ್ಕೆ) ಸಿದ್ಧ. ದುಡಿಮೆಗೆ ಸಿದ್ಧರಿಲ್ಲ. ಧಾರ್ಮಿಕ ಕಾರ್ಯದಲ್ಲಿ ಇಂದು ದುಡಿಯುವ ಇಚ್ಛೆಯಿಲ್ಲ. ಅದರಲ್ಲೂ ಸಾಮೂಹಿಕ ಎಂದಾದರೆ ಇನ್ನೂ ದೂರ. ದುಡಿದು ಕೆಲಸ ಮಾಡುವ ಸ್ವಭಾವ ಬೆಳೆಯಬೇಕು.

ಸತ್ಯಸಂದತೀರ್ಥರು ಭಗವಂತನನ್ನು ಸ್ತುತಿಸಿದ್ದು ''ಶ್ರಮಸ್ತೋಮಪ್ರೇಮನ್'' ''ಶ್ರಮದಿಂದ ಮಾಡುವ ಸ್ತೋತ್ರಕ್ಕೆ ಪ್ರಿಯನಾಗುವನೇ ಎಂದರು. ಪ್ರಸನ್ನವೆಂಕಟದಾಸರೂ ಅದನ್ನೇ ಬೇಡುತ್ತಾ ''ಎನ್ನ ದುಡಿಸಿಕೊಳ್ಳಲೋ ಶ್ರೀನಿವಾಸ'' ಎಂದಿದ್ದಾರೆ. ಹೀಗೆ ದೇಹದಿಂದಾಗುವ ಪ್ರದಕ್ಷಿಣೆ ನಮಸ್ಕಾರಾದಿಗಳಲ್ಲಿ ಬ್ಯಾಸರಿಸದೆ ಉತ್ಸಾಹ ತೋರುವದು ಬದುಕಿಗೆ ಫಲ.

ಇಷ್ಟೆಲ್ಲ ರೀತಿಯ ಗೃಹಕರ್ಮಗಳನ್ನು ಬ್ಯಾಸರದಲೇ ಪರಮೋತ್ಸಾಹದಿ ಮಾಡುತ ಮೂಜಗದ ಮಹಿತನ ಸೇವೆ ಎನಬೇಕು. ನಮ್ಮ ಸ್ವಾರ್ಥಕ್ಕಾಗಿ ದೇಹದ ಪೋಷಣೆಗಾಗಿ ಮಾಡುವ ಸಣ್ಣ ಕೆಲಸವು ಸರಿಯಾದ ಅನುಸಂಧಾನದಿಂದ ಮಾಡಿದರೆ ಮೂರು ಲೋಕದ ಒಡೆಯನ ಸೇವೆಯಾಗುವದು.

ಗೃಹಸ್ಥಧರ್ಮದ ಪರಿಪಾಲನೆಯಾದರೆ ಮಾ + ಪಿತನಿಗೆ ಲಕ್ಷ್ಮೀಗೂ ಹಿತಮಾಡುವ ಹರಿಗೆ ಪ್ರಿಯವಾಗುವದು. ಅವನಿಗೆ ಪ್ರಿಯವಾದರೆ ನನಗೂ ಹಿತ. ನನ್ನ ತಾಯಿ ತಂದೆಗೂ ಹಿತ. ಎಷ್ಟೇ ಎತ್ತರದ ವ್ಯಕ್ತಿಯಾದರೂ ವರ್ಣಾಶ್ರಮ ಧರ್ಮಗಳನ್ನು ಬಿಡಬಾರದೆಂಬ ಪಾಠ ಕಲಿಸಲು, ಕರ್ಮಸಂಕೋಲೆಯಲ್ಲಿ ಎಂದೂ ಸಿಲುಕದ ಶ್ರೀಕೃಷ್ಣ ತಾನು ನಾರದರ ಮೂಲಕ ಜಗತ್ತಿಗೆ ಗೃಹಸ್ಥಧರ್ಮಗಳನ್ನು ಮಾಡಿ ತೋರಿಸಿದ. ವ್ಯಾಸರೂಪದಿಂದ ಸೂತ್ರ ರಚಿಸಿದ.
''ವಿಹಿತತ್ವಾಶ್ಚಾಶ್ರಮಕರ್ಮಾಪಿ''

ಹರಿವಂಶ ಸ್ಪಷ್ಟಪಡಿಸುವದು.

ಏತಾದೃಶೋಪಿನಾಚಾರಂ ಶ್ರೌತಸ್ಮಾರ್ತಂ ಪರಿತ್ಯಜೇತ

ಈ ಕರ್ಮಗಳನ್ನು ಕೇವಲ ಮಾಡಿದರೆ ಸಾಲದು. ಹರುಷದಿಂದ ನಿತ್ಯ ಮನದಲ್ಲಿ ಸಮರ್ಪಿಸಬೇಕು. ಸಮರ್ಪಿಸುವ ವಿಧಾನವನ್ನು ಭಾಗವತ ಏಕಾದಶ ಸ್ಕಂದದಲ್ಲಿ ಜಾಯಂತೀಯರು ತಿಳಿಸುವರು.

"ಕಾಯೇನ ವಾಚಾ ಮನಸೇಂದ್ರಿಯೈರ್ವಾ.........."

ದೇಹ, ಮಾತು, ಮನಸ್ಸು, ಇಂದ್ರಿಯ, ಬುದ್ಧಿ, ಸ್ವಭಾವ ಮುಂತಾದವುಗಳಿಂದ ಮಾಡಿದ ಪ್ರತೀ ವರ್ಣವೂ ಭಗವಂತನಿಗೆ ಅರ್ಪಿತವಾಗಬೇಕು. ಆಚಾರ್ಯರು ಇನ್ನು ಒಂದು ಹೆಜ್ಜೆ ಮುಂದಿಡುತ್ತಾ ಸದಾಚಾರ ಸ್ಮೃತಿಯಲ್ಲಿ ತಿಳಿಸುವರು.

ದಾರಾತ್ ಸುತಾನ್ ಪ್ರಿಯಾನ್ ಬಂಧೂನ್ ಪರಸ್ಮೈ ಸನ್ನಿವೇದಯೇತ್

ಕೇವಲ ಕರ್ಮವಲ್ಲ, ಹೆಂಡತಿ, ಮಕ್ಕಳ, ಸ್ನೇಹಿತರು, ಬಂಧುಗಳು ಎಲ್ಲರನ್ನು ಭಗವಂತನಿಗೆ ಅರ್ಪಿಸುತ್ತಾ "ಹೆಂಡರು ಮಕ್ಕಳು ನಿನ್ನ ತೊಂಡರೆಂಬುವರು" ಎನ್ನಬೇಕು.

ಈ ಸಮಗ್ರ ನುಡಿಗೆ ಮೂಲ ಕೂರ್ಮ ಪುರಾಣದ ಈ ಪ್ರಮಾಣ.

ಗೃಹಕರ್ಮೋತ್ಸವೇ ಚೈವ ಕೃತ್ವಾ ಸರ್ವಂ ದಿನೇದಿನೇ
ಹರಿಸೇವೇತಿಮತ್ವಾತು ಸಂತೋಷೇಣ ಸಮರ್ಪಯೇತ

ಹೀಗೆ ನಿತ್ಯ ಮನೆಯ, ದೇಹದ, ಗೃಹಸ್ಥಧರ್ಮದ ಕರ್ಮಗಳನ್ನು ವಿಹಿತ ರೀತಿಯಲ್ಲಿ ಮಾಡುತ್ತಾ ಭಗವಂತನ ಸೇವೆಯೆಂದು ನಮಿಸುವುದೇ ಬಾಳಿದ್ದಕ್ಕೆ ಫಲ. ಬದುಕು ಸಾರ್ಥಕ.

ಕ್ಲೇಶಾನಂದಗಳೀಶಾಧೀನ ಸಮಾ
ಸಮ ಬ್ರಹ್ಮಸದಾಶಿವರು
ಈಶಿತವ್ಯರು ಪರೇಶನಿಲ್ಲದೇ
ಶ್ವಾಸಬಿಡುವ ಶಕ್ತಿ ಲೇಶಿಲ್ಲೆಂಬುದೆ **॥ 13 ॥**

ಕೆಲವರಿಗೆ ಸುಖವೆಲ್ಲ ನನ್ನಿಂದ ದುಃಖವೆಲ್ಲ ಪರರಿಂದ ಎಂಬ ಭಾವನೆ. ಹಲವರಿಗೆ ಸುಖ ಜಡವಾದ ಧನ, ಮನೆ, ಕನಕ ಅಧಿಕಾರಿಗಳಿಂದ ಅಥವಾ ಹೆಂಡತಿ ಮಕ್ಕಳಿಂದ ಎಂಬ ಭಾವನೆಯುಂಟು. ಅದಕ್ಕಾಗಿ ಸುಖ ಬಂದಾಗ ಅತಿಯಾಗಿ ಹಿಗ್ಗಿ ಉಬ್ಬಿದಂತಾಗುವರು. ದುಃಖ ಬಂದಾಗ ದ್ವೇಷಿಸಿ ಅತಿಯಾಗಿ ಕುಗ್ಗುವರು. ಅದಕ್ಕಾಗಿ ಗೀತೆ ಹೇಳಿತು.

ಸುಖದುಃಖ ಸಮಂ ಧೀರಃ ಸೋಮೃತತ್ವಾಯ ಕಲ್ಪ್ಯತೇ

ಯಾವನು ಸುಖ-ದುಃಖಗಳನ್ನು ಸಮನಾಗಿ ಕಾಣುವನೋ ಅವನೇ ಮುಕ್ತನಾಗುವ. ಸಮನಾಗಿ ಕಾಣುವ ವಿಧಾನವನ್ನು ದಾಸರು ಈ ನುಡಿಯಲ್ಲೂ ತಿಳಿಸುವರು.

ಕ್ಲೇಶವಿರಲಿ ಆನಂದವಿರಲಿ ಎಲ್ಲವೂ ಈಶಾಧೀನ. ಜಡದಿಂದಲೂ ಅಲ್ಲ ಈಶನಲ್ಲದ ಯಾರಿಂದಲೂ ಅಲ್ಲ. ಆದಕ್ಕಾಗಿ ಮತ್ತೊಂದೆಡೆ ಪ್ರಾರ್ಥಿಸಿದರು.

''ಸುಖವಾಗಲಿ ಬಹು ದುಃಖವಾಗಲಿ ಸಖ ನೀನಾಗಿರು ಪಾಂಡುರಂಗ'' ಎಂದು.

ಕೇವಲ ನನ್ನ ಸುಖ ದುಃಖಗಳಲ್ಲ, ಪ್ರತಿ ಜೀವಿಯ ಸುಖದುಃಖಗಳೆಲ್ಲ ಈಶಾಧೀನ. ಏಕೆಂದರೆ ಸಮಾಸಮ ಬ್ರಹ್ಮ ಸದಾಶಿವರೆಲ್ಲರೂ ಈ ಈಶನ ಅಧೀನರಾದಾಗ ಯಾರೇನು ಮಾಡಬಲ್ಲರು.

ಸಮಾ ಸಮಾ ಶಬ್ದಾರ್ಥವನ್ನು ಆಚಾರ್ಯರು ಭಾಷ್ಯದಲ್ಲಿ ತಿಳಿಸುವರು.

ಬ್ರಹ್ಮಾದ್ಯಾಸ್ತು ಅಸಮಾಪ್ರೋಕ್ತಾ ಪ್ರಕೃತಿಶ್ಚ ಸಮಾಸಮಾ

ಬ್ರಹ್ಮಾದಿಗಳೆಲ್ಲರು ಅಸಮರೆಂದೆನಿಸುವರು. ಲಕ್ಷ್ಮೀಯು ಸಮಾಸಮಾ ಎನಿಸುವಳು.

ಇದಕ್ಕೆ ಒಂದು ಕಾರಣವನ್ನು ವರಾಹ ಪುರಾಣದಲ್ಲಿ ತಿಳಿಸುವರು. ಅದನ್ನೇ ಆಚಾರ್ಯರು ಭಾಷ್ಯದಲ್ಲಿ ಉದಾಹರಿಸಿದ್ದಾರೆ.

ಪರಮಾತ್ಮನ ಸಮಾನವಾದ ಕೃಷ್ಣಾದಿ ರೂಪಗಳು ಸಮವೆಂದು ಪರಮಾತ್ಮನಿಂದ ಭಿನ್ನರಾದ ಪ್ರಕೃತಿಬದ್ಧರಾದ ಎಲ್ಲದರಲ್ಲೂ ಅಲ್ಪರಾದ ಬ್ರಹ್ಮಾದಿಗಳೂ ಅಸಮರೆಂದೆನಿಸು ವರು. ಲಕ್ಷ್ಮೀ ಹರಿಯಂತೆ ಪೂರ್ಣಳಲ್ಲ, ಆದ್ದರಿಂದ ಸಮಳಲ್ಲ, ಬ್ರಹ್ಮಾದಿಗಳಂತೆ ಬದ್ಧಳಲ್ಲ, ಆದ್ದರಿಂದ ಅಸಮಳಲ್ಲ. ಹೀಗಾಗಿ ಸಮಾ ಸಮಾ ಎನಿಸುವಳು.

ಮತ್ತೊಂದು ಕಾರಣ. ಭಗವಂತನಿಗೆ ಸಮಳೂ ಹೌದು. ಅಸಮಳೂ ಹೌದು. ಹರಿ ಇದ್ದ ಎಲ್ಲ ದೇಶದಲ್ಲಿ, ಕಾಲದಲ್ಲಿ ಇರುವಳು. ಆದರೆ ಹರಿಯ ಗುಣದಿಂದ ಮಾತ್ರ ಸಾಮ್ಯಳಲ್ಲ, ಆದ್ದರಿಂದ ಸಮಾಸಮಾ ಎನಿಸುವಳು.

ಸತ್ತತ್ವರತ್ನಮಾಲಾಕಾರರು ಗುಣತಃ ಅಸಮಳಲ್ಲ ಎಂಬುದನ್ನು ''ಅನಂತಾನಂತಗುಣತಃ ಹರಿರಾಮಾಃ'' ಎಂದು ತಿಳಿಸುವರು. ದೇಶತಃ ಕಾಲತಃ ಸಮಳು ಗುಣತಃ ಅಸಮಳು. ಒಟ್ಟಾರೆ ಸಮಾಸಮಳು ಲಕ್ಷ್ಮೀ ಎಂದು ತಿಳಿಯಬೇಕು. ಕಮಲಾ, ಕಮಲಭವ, ಭವ ಎಲ್ಲರೂ ಈಶಿತವ್ಯರು. ಅಂದರೆ ಅಧೀನರು ಎಂದರ್ಥ.

ಈ ಅಧೀನತೆಯಲ್ಲಿ ತಾರತಮ್ಯೋಕ್ತವಾಗಿ ತಿಳಿಯಬೇಕು. ಲಕ್ಷ್ಮೀ ಹರಿಗೆ ಮಾತ್ರ ಅಧೀನಳು. ಬ್ರಹ್ಮ ಇವರೀರ್ವರಿಗೆ ಅಧೀನ. ಇವರಿಗೆ ಅಧೀನ ಶಿವ. ಲಕುಮಿಗೆ ಆನಂದ, ಜ್ಞಾನ, ಭಕ್ತಿ ಹರಿಯಿಂದ. ಬ್ರಹ್ಮನೂ ಸುಖವಾಗಿರಬೇಕಾದರೆ ರಾಮ-ರಮೆಯರ ಕುಡಿನೋಟದಿಂದ. ಕೇವಲ ಆನಂದ ಆಶ್ರಯಾದಿಗಳಲ್ಲ, ಉಸಿರಾಟವೂ ಅವನ ಕರುಣೆಯಿಲ್ಲದೆ ನಡೆಸಲು ಸಾಧ್ಯವಿಲ್ಲ.

ರಮಾ ಬ್ರಹ್ಮಾದಯಃ ಸರ್ವೆ ವಿನಾ ವಿಷ್ಣೋಃ ಪ್ರಸಾದತಃ
ನಶ್ವಸಂತಿ ....

ನಮ್ಮೆಲ್ಲರಿಗೂ ಶ್ವಾಸೋಚ್ಛ್ವಾಸ ಮೂಲಕ ಪ್ರಾಣ ನೀಡುವ ಪ್ರಾಣನಿಗೂ ಪ್ರಾಣ ಈ ರಮಾರಮಣ ಎಂದೆನುವದು ಐತರೇಯೋಪನಿಷತ್. ಅದಕ್ಕಾಗಿ ಆಚಾರ್ಯರು ''ಪ್ರಾಣಸ್ಯ ಸರ್ವ ಚಿದಚಿತ್ ಪರಮೇಶ್ವರಸ್ಯ'' ಎಂದು ಮಂಗಳ ಶ್ಲೋಕದಲ್ಲಿ ಸ್ತುತಿಸಿದರು.

ಶಿವಾದಿಗಳೂ ಈಶರಾದರೆ ಹರಿ ಪರೇಶ. ಈ ಪರೇಶನಿಂದಲೇ ಸುಖದುಃಖಾದಿಗಳು. ವಿಶ್ವದ ಉಸಿರಾಟ ಎಂದು ತಿಳಿವದೇ ಬಾಳಿಗೆ ಫಲವು.

ಆ ಪರಮಾತ್ಮಗೆ ರೂಪದ್ವಯವು
ಪರಾಪರ ತತ್ವಗಳದರೊಳಗೆ
ಸ್ತ್ರೀ, ಪುಂ ಭೇದದಿ ಈ ಬ್ರಹ್ಮಾಂಡದಿ
ವ್ಯಾಪಿಸು ಇಹನೆಂದೀಪರಿ ತಿಳಿವುದೇ ॥ 14 ॥

ಜಗತ್ತಿನಲ್ಲಿ ಪ್ರಧಾನವಾದ ಎರಡು ತತ್ವಗಳುಂಟು. ಒಂದು ಪರತತ್ವ. ಇನ್ನೊಂದು ಅಪರ ತತ್ವ. ಈ ಎರಡೂ ತತ್ವಗಳಲ್ಲಿ ಪರಮಾತ್ಮನ ಒಂದೊಂದು ರೂಪವುಂಟು. ಈ ರೂಪಗಳೇ ರೂಪದ್ವಯವೆಂದು ಹೇಳಿದರು ದಾಸರು.

ಮತ್ತೊಂದು ಬಗೆಯಾದ ರೂಪದ್ವಯವನ್ನು ತಿಳಿಸುವರು. ಶ್ರೀವಿಷ್ಣುತೀರ್ಥರು ತಮ್ಮ ಷೋಡಶಿ ಗ್ರಂಥದಲ್ಲಿ ತಿಳಿಸುವರು. ಬ್ರಹ್ಮಾದಿ ಸರ್ವಜೀವಗತವಾದ ಒಂದು ರೂಪ. ಬ್ರಹ್ಮಾಂಡದಲ್ಲಿಯ ಕಾಲವೆಂಬ ರೂಪ ಮತ್ತೊಂದು ಹೀಗೆ ರೂಪದ್ವಯ.

ಪ್ರಧಾನವಾಗಿ ದಾಸರು ಇಲ್ಲಿ ತಿಳಿಸುತ್ತಿರುವ ರೂಪದ್ವಯ. ಒಂದು ಸ್ತ್ರೀರೂಪ. ಮತ್ತೊಂದು ಪುರುಷರೂಪ. ಜಗದ ಜೀವರಲ್ಲಿಯ ಭೇದಗಳೇ ಈ ಎರಡು. ಹರಿಯು ಸ್ವರೂಪತಃ ಪುರುಷ ದೇಹದಲ್ಲಿ ಪುರುಷ ರೂಪದಿಂದ ಸ್ವರೂಪತಃ ಸ್ತ್ರೀಯಾಗಿರುವವರ ದೇಹದಲ್ಲಿ ಸ್ತ್ರೀರೂಪದಿಂದ ಬಿಂಬನಾಗಿರುತ್ತಾನೆ. ಇಷ್ಟು ಮಾತ್ರವಲ್ಲ, ಪ್ರತೀ ದೇಹದಲ್ಲಿಯ

72 ಸಾವಿರ ನಾಡಿಗಳಲ್ಲಿ 36 ಸಾವಿರ ಪುರುಷ ರೂಪದಿಂದ ಬಲಭಾಗದಲ್ಲಿ 36 ಸಾವಿರ ಸ್ತ್ರೀರೂಪದಿಂದ ಎಡಭಾಗದಲ್ಲಿ ಇರುತ್ತಾನೆ.

ನಪುಂಸಕ ಜೀವ ಎನ್ನುವ ವಿಭಾಗವೇ ಇಲ್ಲ. ಸ್ತ್ರೀ ಅಥವಾ ಪುರುಷ ಜೀವಿಗೆ ಪಾಪಕರ್ಮವಶಾತ್ ನಪುಂಸಕದೇಹ ಬರುವದು. ಹೀಗಾಗಿ ದೋಷಪೂರಿತವಾದ ಈ ನಪುಂಸಕದೇಹ ಭಗವಂತನಿಗಿರುವುದಿಲ್ಲ. ಇದನ್ನೇ ಆಚಾರ್ಯರು ಭಾಗವತ ತಾತ್ಪರ್ಯದಲ್ಲಿ ತಿಳಿಸುತ್ತಾರೆ.

ಏವಂ ದ್ವಿಷ್ಠೋ ಭಗವಾನ್ ಹರಿರೇಕೋ ಜನಾರ್ದನಃ

ಹೀಗೆ ಎರಡು ರೂಪದಿಂದ ಸಮಸ್ತ ಬ್ರಹ್ಮಾಂಡದಲ್ಲಿ ವ್ಯಾಪಿಸಿಕೊಂಡು ಇದ್ದಾನೆ. ಆದರೆ ಎರಡು ರೂಪಗಳಿಗೆ ಪರಸ್ಪರ ಭೇದವಿರುವುದಿಲ್ಲ. ಪರಮಾತ್ಮನ ಅನಂತ ರೂಪಗಳಲ್ಲಿ ಪ್ರತಿಯೊಂದು ರೂಪಗಳು ಅನಂತ ರೂಪಗಳಿಂದ ಅಭಿನ್ನ. ಸರ್ವವ್ಯಾಪ್ತ ಎಂದು ತಿಳಿವುದೇ ಬದುಕಿನ ಫಲ.

ಏಕೋತ್ತರ ಪಂಚಾಷತ್ ವರ್ಣಗ
ಳೇಕಾತ್ಮನ ನಾಮಂಗಳಿವು
ಮಾ ಕಮಲಾಸನ ಮೊದಲಾದಮರರು
ಸಾಕಲ್ಯದಿ ಇವನರಿಯರೆಂತೆಂಬುದೆ ॥ 15 ॥

ಶಬ್ದಪ್ರಪಂಚದ ಕೊನೆಯಾದ, ಕೊನೆಯಿಲ್ಲದ ವೇದ ಭಗವಂತನ ಅಧಿಷ್ಠಾನ. ಭಗವತ್ ಪ್ರತಿಪಾದಕ ಎಂದು ಹೇಳಿದ ದಾಸರು ಈಗ ಶಬ್ದ ಪ್ರಪಂಚದ ಆದಿಯೂ ಅನಾದಿಯಾದ ಹರಿಯನ್ನು ಬಣ್ಣಿಸುತ್ತಾ ಅವನಿಗೆ ಅಧಿಷ್ಠಾನವೆಂದು ತಿಳಿಸುತ್ತಾರೆ.

ಪಂಚಾಷತ್ ಎಂದರೆ ಐವತ್ತು. ಏಕೋತ್ತರ ಪಂಚಾಷತ್ ಎಂದರೆ ಒಂದು ಹೆಚ್ಚಾದ ಐವತ್ತು 51 ಎಂದರ್ಥ. ಎಲ್ಲ ವರ್ಣಗಳೂ ಹರಿಯ ನಾಮಗಳೆಂದು ಚಿಂತಿಸಬೇಕು. ಒಂದೊಂದು ವರ್ಣಗಳೂ ಹೇಗೆ ಹರಿಯ ನಾಮಗಳಾಗಿವೆ ಎಂಬುದನ್ನು ತಂತ್ರಸಾರದಲ್ಲಿ ಶ್ರೀಮದಾನಂದತೀರ್ಥ ಭಗವತ್ಪಾದರು ಸುಂದರವಾಗಿ ತಿಳಿಸುತ್ತಾರೆ.

ಅ ಎನ್ನುವ ಮೊದಲ ಸ್ವರದಿಂದ ಪ್ರತಿಪಾದ್ಯರೂಪ ಅಜ

ಹಾಗೇ ಆ – ಆನಂದ, ಇ – ಇಂದ್ರ, ಈ – ಈಶಾನ,

ಉ – ಉಗ್ರ, ಊ – ಊರ್ಜ, ಋ – ಋತಂಬರ,

ೠ – ೠಘ, ಌ – ಌಶ, ೡ ಜ

ಎ – ಏಕಾತ್ಮ, ಐ – ಐರ, ಓ – ಓಜೋಭೃತ್,

ಔ – ಔರಸ, ಅಂ – ಅಂತ, ಅಃ – ಅರ್ಧಗರ್ಭಃ

ಹೀಗೆ ಪ್ರತಿಯೊಂದು ಸ್ವರಗಳು ಪರಮಾತ್ಮನ ಒಂದೊಂದು ನಾಮಗಳು. ಯಾವುದೇ ಶಬ್ದದ ಉಚ್ಚಾರವಾಗಬೇಕಾದರೆ ಯಾವುದಾದರೊಂದು ಸ್ವರದ ಪ್ರವೇಶವಿದ್ದೇ ಇರುತ್ತದೆ. ಪ್ರತೀ ಶಬ್ದ ಸ್ವರ ಸೇರಿದಾಗ ಪೂರ್ಣತೆ ಪಡೆವಂತೆ ಪ್ರತೀ ಕ್ಷಣವೂ ಸ್ವರ ಪ್ರತಿಪಾದ್ಯನಾದ ಹರಿಯಿಂದಲೇ ಪೂರ್ಣಗೊಳ್ಳುವದು.

ಸ್ವರಗಳೂ, ಸ್ವರಪ್ರತಿಪಾದ್ಯ ರೂಪಗಳನ್ನು ತಿಳಿದ ನಂತರ ಯಾವ ಯಾವ ವ್ಯಂಜನಗಳು ಹರಿಯ ಯಾವ ಯಾವ ರೂಪಗಳಿಗೆ ವಾಚಕ ಎಂಬುದನ್ನು ತಿಳಿಯೋಣ.

ಕ – ಕಪಿಲ	ಖ – ಖಪತಿ	ಗ – ಗರುಡಾಸನ	ಘ – ಘರ್ಮ
ಙ – ಙಸಾರ	ಚ – ಚಾರ್ವಾಂಗ	ಛ – ಛಂದೋಗಮ್ಯ	ಜ – ಜನಾರ್ದನ
ಝ – ಝಟಿತಾರಿ	ಞ – ಞಮ	ಟ – ಟಂಕೀ	ಠ – ಠಲಕ
ಡ – ಡರಕ	ಢ – ಢರಿ	ಣ – ಣಾತ್ಮ	ತ – ತಾರಃ
ಥ – ಥಭಃ	ದ – ದಂಡೀ	ಧ – ಧನ್ವೀ	ನ – ನಮ್ಯಃ
ಪ – ಪರಃ	ಫ – ಫಲೀ	ಬ – ಬಲಿ	ಭ – ಭಗ
ಮ – ಮನು	ಯ – ಯಜ್ಞ	ರ – ರಾಮ	ಲ – ಲಕ್ಷ್ಮೀಪತಿ
ವ – ವರ	ಶ – ಶಾಂತಸಂವಿತ್	ಷ – ಷಡ್ಗುಣಿ	ಸ – ಸಾರಾತ್ಮ
ಹ – ಹಂಸ	ಳ – ಳಾಳುತ.		

ಈ ಐವತ್ತು ವರ್ಣಗಳು ಪರಮಾತ್ಮನ ನಾಮಗಳೆಂದು ತಂತ್ರಸಾರದ ಪ್ರಥಮಾಧ್ಯಾಯದಲ್ಲಿ ತಿಳಿಸಿದ ಆಚಾರ್ಯರು ದ್ವಿತೀಯಾಧ್ಯಾಯದಲ್ಲಿ ಸಂಯುಕ್ತಾಕ್ಷರವಾದ ಕ್ಷ ವನ್ನು 51ನೇ ಅಕ್ಷರವೆಂದು ಹೇಳಿ ''ನೃಸಿಂಹೋಕ್ಷಸ್ಯ ದೇವತಾ'' ಎನ್ನುವರು. ಕ್ಷ ವರ್ಣದಿಂದ ಪ್ರತಿಪಾದ್ಯವಾದ ರೂಪ ಲಕ್ಷ್ಮೀನರಸಿಂಹ.

ಪ್ರಕಾಶ ಸಂಹಿತಾದಲ್ಲಿ ಇದನ್ನೇ ತಿಳಿಸುವರು.

''ಅಕಾರಾದ್ಯೈಃ ಸರ್ವವರ್ಣೈಃ ವಾಚ್ಯಾ ಏತೇ ಪ್ರಕೀರ್ತಿತಾಃ
ಕ್ಷವಾಚ್ಯೋ ನರಸಿಂಹಸ್ತು ಸರ್ವ ಜೀವ ನಿಯಾಮಕಃ''

'ಕ್ಷ' ಇದು ಕ + ಶ ಎಂಬ ಎರಡು ವರ್ಣಗಳ ಸಂಯೋಗದಿಂದಾದ ಒಂದು

ವರ್ಣ. ಇದರಿಂದ ಪ್ರತಿಪಾದ್ಯ ರೂಪವೂ ಸಿಂಹ - ನರ ಎಂಬ ಎರಡು ರೂಪಗಳಿಂದ ಕೂಡಿದ ಒಂದೇ ರೂಪವೆಂದು ಚಿಂತಿಸಬೇಕು.

ಈ ಎಲ್ಲ ವರ್ಣಗಳು ಏಕಾತ್ಮನ ನಾಮಗಳೆಂದರು ದಾಸರು.

ಇಲ್ಲಿ ಏಕಾತ್ಮ ಪದವನ್ನು ಬಿಡಿಸಿ ಏಕ + ಆತ್ಮ ಎಂದು ವಿಭಾಗಿಸಿದರೆ ಒಂದೊಂದು ಶಬ್ದವೂ (ಹರಿ, ನಾರಾಯಣ, ಶ್ರೀನಿವಾಸ, ಕೃಷ್ಣ ಇತ್ಯಾದಿ) ಹೇಗೆ ಪರಮಾತ್ಮನನ್ನು ತಿಳಿಸುವವೋ ಹಾಗೆ ಏಕ - ಒಂದೊಂದು ವರ್ಣವೂ ಆತ್ಮಾ ಸ್ವಾಮಿಯಾದ ಪರಮಾತ್ಮನ ನಾಮವೆಂದು ತಿಳಿಯುವದು.

ಇದನ್ನೇ ಪ್ರಮಾಣವಾಕ್ಯ ತಿಳಿಸುವುದು. **''ಏಕಾತ್ಮಾ ಹರಿರುದ್ದಿಷ್ಟಃ''**

ಏಕಾತ್ಮ ಎಂದರೆ ಹರಿ. ಏಕ = ಮುಖ್ಯ ಆತ್ಮ = ಪರಮಾತ್ಮ. ಏಕಾತ್ಮನ ನಾಮಗಳೆಂದರೆ ಹರಿಯ ನಾಮಗಳೆಂದರ್ಥ. ಯಾವನೊ ಒಬ್ಬ ಆತ್ಮನ ಜೀವನ ನಾಮಗಳೆಂದಲ್ಲ. ''ಏ'' ಎನ್ನುವ ಸ್ವರದಿಂದ ಪ್ರತಿಪಾದ್ಯರೂಪ ಏಕಾತ್ಮ ಇವನು. ಇವನ ನಾಮಗಳೇ ಎಲ್ಲವೂ ಎನ್ನುವುದರಿಂದ ಪರಮಾತ್ಮನ ಪ್ರತೀ ರೂಪಗಳಿಗೆ ಅಭೇದವನ್ನು ತಿಳಿಸುವರು. ಇದನ್ನೇ ಸತ್ತತ್ವರತ್ನಮಲಾಕಾರರು

ಪರಸ್ಪರಮಭಿನ್ನಾಶ್ಚ ಧರ್ಮಾಃ ಸರ್ವೇಽಪಿ.... ಅಭಿನ್ನವಾದ ಎಲ್ಲ ಧರ್ಮಗಳು, ಗುಣಗಳು, ರೂಪಗಳು, ನಾಮಗಳು ಹರಿಯಲ್ಲುಂಟು.

ಈ ವರ್ಣಗಳನ್ನೆಲ್ಲ ಮಾತೃಕಾಗಳೆನ್ನುವರು. ನಿತ್ಯದಲ್ಲಿ ಇವುಗಳ ಚಿಂತನೆ ಪುನಃ ಪುನಃ ನಡೆಯುತ್ತಿರಬೇಕು ಎಂದು ನಮ್ಮ ಹಿರಿಯರು ಮಾತೃಕಾನ್ಯಾಸ ಮುಖಾಂತರ ನಮಗೆ ಆದೇಶಿಸಿರುವರು. ನಿತ್ಯವೂ ಜಪದ ಪೂರ್ವದಲ್ಲಿ ಪೂಜೆಯ ಮೊದಲು, ಕಲಶ ಪೂಜಾದಿ ಸಂದರ್ಭದಲ್ಲಿ ಇದರ ಚಿಂತನೆ, ಉಪಾಸನೆ ಸ್ಮರಣೆಯ ಸಂಪ್ರದಾಯವುಂಟು. ನಿತ್ಯ ನಡೆವ ಈ ಕ್ರಿಯೆ ಕೇವಲ ಯಾಂತ್ರಿಕವಾಗಿರದೆ ಅವುಗಳನ್ನು ತಿಳಿದು ಅನುಸಂಧಾನಿಸಬೇಕು.

ಮಾತೃಕಾನ್ಯಾಸದಿಂದಾಗುವ ದೊಡ್ಡ ಲಾಭವೆಂದರೆ ಹರಿನಾಮ ಸ್ಮರಣೆಯಿಂದ ಹರಿಯ ಪ್ರೀತಿ, ಅನುಗ್ರಹದ ಜೊತೆ ಪುಣ್ಯ ಬರುವದು. ಐಹಿಕವಾದ ದೊಡ್ಡ ಲಾಭ ನಮ್ಮ ಸಿಟ್ಟು ಕಡಿಮೆಯಾಗುವದು.

ಯಾರೇ ಏನೇ ಬೈದರೂ, ನಿಂದಿಸಿದರೂ ಈ 51 ಅಕ್ಷರಗಳನ್ನು ಬಿಟ್ಟು ಮಾತಾಡಲು ಸಾಧ್ಯವಿಲ್ಲ. ಇವುಗಳಲ್ಲಿ ಯಾವುದೇ ವರ್ಣ ಬಳಸಿದಾಗಲೂ ಅದು ಪರಮಾತ್ಮನ ನಾಮ ಎಂಬ ಅನುಸಂಧಾನ ಬಂದರೆ ಎಲ್ಲ ನಿಂದನೆಗಳು ದೇವನ ನಾಮಸ್ಮರಣೆಗಾಗಿ ಮನಸ್ಸಿಗೆ ತೋರುವವು. ಆದರಲ್ಲಿ ನಿಂದನೀಯಾಂಶ ತೋರಲಾರದು.

ಸಿಟ್ಟು ಬಾರದು. ಪ್ರತಿಯಾಗಿ ನಾಮಸ್ಮರಣೆ ಮಾಡಿಸಿದ್ದಕ್ಕೆ ಅವನ ಮೇಲೆ ಪ್ರೀತಿಯೇ ಬರುವದು.

ಆದರೆ ಆ ಸಂದರ್ಭದಲ್ಲಿ ಈ ವರ್ಣಗಳೆಲ್ಲ ಭಗವಂತನ ನಾಮಗಳು. ಗುಣಗಳನ್ನು, ಮಹಿಮೆಗಳನ್ನು ತಿಳಿಸುವವು ಎಂಬ ಅನುಸಂಧಾನ ಬರುವದು ಸಾಮಾನ್ಯರಿಗೆ ಕಷ್ಟಸಾಧ್ಯ. ಅಖಂಡ ಪ್ರಯತ್ನದಿಂದ ಕ್ರಮೇಣ ಸಾಧ್ಯವಾಗುವುದು. ಇಷ್ಟೆಲ್ಲ ತಿಳಿದರೂ ಹರಿಯನ್ನು ಪೂರ್ಣ ತಿಳಿದಂತಾಗದು. ಪೂರ್ಣ ತಿಳಿಯಲು ಯಾರಿಗೂ ಸಾಧ್ಯವಿಲ್ಲ ಎನ್ನುವರು ದಾಸರು.

''ಮಾಕಮಲಾಸನ ಮೊದಲಾದಮರರು ಇವನರಿಯರು''

ಭಾಗವತ ತಿಳಿಸುವದು.

ಸ್ವತಂತ್ರಸ್ಯ ಹರೇಸ್ತಸ್ಯ ಸಾಕಲ್ಯೇನ ಮಹಾತ್ಮನಃ
ಸ್ವರೂಪಂ ನೈವ ಜಾನಂತಿ ರಮಾಬ್ರಹ್ಮಾದಯೋಪಿತು

ಸ್ವತಂತ್ರನಾದ ಹರಿಯ ಸ್ವರೂಪವನ್ನು ರಮಾ ಬ್ರಹ್ಮಾದಿಗಳು ಸಾಕಲ್ಯೇನ ತಿಳಿಯಲಾರರು. ನಾವೆಲ್ಲ ಭಗವಂತನ ದಾಸ ಪರಂಪರೆಯಲ್ಲಿ ಅತೀ ಕೊನೆಯ ಸಾಲಿನವರು. ಅತೀ ಹತ್ತಿರವಿದ್ದ, ಅವನ ಮೇಲೆ ಅತಿ ಪ್ರೀತಿ ಗೌರವವಿದ್ದ, ವೇದಾಭಿಮಾನಿಯಾದ ಲಕ್ಷ್ಮಿಗೆ, ಮಗನಾದ ಚತುರ್ಮುಖನಾದ ಬ್ರಹ್ಮನಿಗೆ ತಿಳಿಯಲಾಗದಿದ್ದಾಗ ಉಳಿದವರ ಪಾಡೇನು. ಲಕ್ಷ್ಮೀ ಬ್ರಹ್ಮಾದಿಗಳು ನಮ್ಮ ಹಾಗೇ ಎಂದೋ ಒಂದು ದಿನ, ಒಂದು ಗಂಟೆ, ಸಂಕಟ ಬಂದಾಗ ವೆಂಕಟರಮಣನನ್ನು ನೆನೆಯುವರಲ್ಲ.

ಸರ್ವೇ ಹರೌ ನಿಯತೆ ಬುದ್ಧಿಯುತಾಹಿ ನಿತ್ಯಮ್

ಯಾವಾಗಲೂ ಚಿಂತಿಸಿದರೂ ಮುಗಿಯದಾಗಿದೆ. ಪ್ರತ್ಯೇಕವಾಗಿ ಭಾಗಗಳನ್ನು ಹಂಚಿಕೊಂಡು ಗಣಿಸಿದರೂ ಅಗಣೇಯವಾಗಿದೆ.

ಲಕ್ಷ್ಮೀ, ಬ್ರಹ್ಮಾದಿಗಳು ಅಜ್ಞಾನಿಗಳು, ಮಂದರು ನಿಧಾನವಾಗಿ ಒಂದೊಂದೇ ಎಣಿಸುವ ಆಲಸಿಗಳಲ್ಲ. ಲಕ್ಷ್ಮೀ ಸಮಸ್ತ ವೇದಾಭಿಮಾನಿ, ವಿದ್ಯಾಭಿಮಾನಿ ಅವಳಿಂದಲೇ ಪ್ರತಿಯೊಬ್ಬರಿಗೂ ವಿದ್ಯೆ ಬರುವುದು. ಬ್ರಹ್ಮನಾದರೂ ನಾಲ್ಕು ಮುಖಗಳನ್ನು ಪಡೆದು ನಿರಂತರ ವೇದೋಚ್ಚಾರ ಮಾಡಿದರು ಮುಗಿದಿಲ್ಲ. ಹಾಗಾದರೆ ಏನೂ ತಿಳಿದಿಲ್ಲ ಎನ್ನಬೇಡಿ. ನಮಗಿಂತ ಅನಂತ ಪಟ್ಟು ಅಧಿಕವಾಗಿ ತಿಳಿದವರು ಅಂದರೆ ''ಸಾಕಲ್ಯೇನ'' ಪೂರ್ಣವಾಗಿ ತಿಳಿಯಲಾರರು. ಅವರವರ ಯೋಗ್ಯತಾನುಸಾರ ತಿಳಿದಿದ್ದಾರೆ ಎಂದು ನಾವು ತಿಳಿದರೆ ನಮ್ಮ

ಯೋಗ್ಯತಾನುಸಾರ ತಿಳಿಯಲು ಸಾಧ್ಯವಾದೀತು. ನಾವು ಶ್ರಮಪಟ್ಟು ಭಕ್ತಿ, ವಿಶ್ವಾಸದಿಂದ ತಿಳಿದರೆ, ತಿಳಿದು ಚಿಂತಿಸಿದರೆ ಬದುಕಿದ್ದು ಫಲ, ಬಾಳಿದ್ದು ಸಾರ್ಥಕ.

ಒಂದು ರೂಪದೊಳನಂತ ರೂಪವು
ಪೊಂದಿಪ್ಪವು ಗುಣಗಣ ಸಹಿತ
ಹಿಂದೆ-ಮುಂದೆ ಎಂದೆಂದಿಗೂ ಶ್ರೀ ಗೋ-
ವಿಂದಗೆ ಸರಿ ಮಿಗಿಲಿಲ್ಲೆಂತೆಂಬುದೆ **॥ 16 ॥**

ಪರಮಾತ್ಮನ ಪ್ರತಿಯೊಂದು ಗುಣಗಳು, ರೂಪಗಳು ಎಲ್ಲವೂ ಅನಂತ ಮಾತ್ರವಲ್ಲ. ಈ ಅನಂತರೂಪಗಳಲ್ಲಿ ಮತ್ತೇ ಅನಂತರೂಪಗಳಿವೆ. ದೃಷ್ಟಾಂತಕ್ಕಾಗಿ ತಿಳಿಯುವದಾದರೆ. ಸಂಪೂರ್ಣ ಬ್ರಹ್ಮಾಂಡವನ್ನೇ ವ್ಯಾಪಿಸಿದ ರೂಪ ಒಂದುಂಟು. ಹಿಂದೆ ಕಳೆದ ಬ್ರಹ್ಮಾಂಡಗಳು ಅನಂತ. ಮುಂಬರುವ ಬ್ರಹ್ಮಾಂಡಗಳು ಅನಂತ. ಈ ಅನಂತ ಬ್ರಹ್ಮಾಂಡಗಳು ಮೂಲರೂಪಿ ಭಗವಂತನ ರೋಮಕೂಪದಲ್ಲಿವೆ. ಹೀಗಾಗಿ ಒಂದು ರೂಪದಲ್ಲಿ ಅನಂತ ಬ್ರಹ್ಮಾಂಡ ವ್ಯಾಪಿಸಿದ ರೂಪಗಳು.

ಒಂದೊಂದು ಬ್ರಹ್ಮಾಂಡದಲ್ಲೂ ಅನಂತ ಪದಾರ್ಥಗಳು ಹಾಗೂ ಅನಂತ ಜೀವರಾಶಿಗಳುಂಟು. ಅವುಗಳಲ್ಲೂ ಭಗವಂತನ ರೂಪಗಳಿವೆ. ಅನಂತ ಬ್ರಹ್ಮಾಂಡದಲ್ಲಿ ಅನಂತರೂಪಗಳಾದವು. ಜೀವನನ್ನು ವ್ಯಾಪಿಸಿದ ಒಂದು ರೂಪವಾದರೆ, ಆ ಜೀವನ ಅಂಗಾಂಗಗಳಲ್ಲಿ ನರ-ನಾಡಿಗಳಲ್ಲಿ ರಕ್ತಗಳಲ್ಲಿ, ಮತ್ತೇ ರೂಪಗಳುಂಟು. ಅನಂತ ಬ್ರಹ್ಮಾಂಡದಲ್ಲಿಯ ಅನಂತ ಜೀವರಲ್ಲಿಯ ಅನಂತ ರೂಪಗಳಿವು. ಆದರೆ ಒಂದು ಆಶ್ಚರ್ಯದ ಸಂಗತಿಯಂತೆ ಎಲ್ಲ ರೂಪಗಳೂ ಪರಸ್ಪರ ಅಭಿನ್ನ ಮತ್ತು ಪೂರ್ಣಗುಣಗಣ ಸಹಿತಗಳೇ. ಅಪರಿಚ್ಛಿನ್ನವೇ. ಗರುಡ ಪುರಾಣವು ಹೇಳುವದು

ಅನೇಕೋಽಪ್ಯೇಕತಾಂ ಪ್ರಾಪ್ಯ....

ಭಾಗವತದಲ್ಲಿ ಇದೇ ಭಾವವುಂಟು.

ಏಕತ್ವೋಽಪಿ ಭಗವಾನ್ ....

ಸತತ್ವರತ್ನಮಾಲಾದ ಗುಣಗಳ, ರೂಪಗಳ ವರ್ಣನೆ ವಿಭಜನೆ, ಪ್ರತಿಪಾದನೆ ಬಹು ಸುಂದರವುಂಟು. ಸನ್ಯಾಯರತ್ನಮಾಲಾಕಾರರು ಸ್ಪಷ್ಟೀಕರಿಸುವರು.

ಪರಸ್ಪರಮಭಿನ್ನಾನಿ ಸ್ವತಂತ್ರಾಣಿ ಸಮಾನಿ ಚ

ಪೃಥಕ್ ಪೃಥಕ್ ಅನಂತಾನಿ ಪೃಥಕ್ ಪೂರ್ಣತಮಾನಿ ಚ
ಪರಸ್ಪರಮಭಿನ್ನಾಶ್ಚ ಧರ್ಮಾಃ ಸರ್ವೇಽಪಿ ತದ್ಗತಾಃ
ತದಭಿನ್ನಾ ಗುಣಾಃ ನಿತ್ಯಾಃ........

ಈ ಬಗೆಯಾದ ವೈಭವ, ಐಶ್ವರ್ಯ, ಸಾಮರ್ಥ್ಯ, ಭಗವಂತನನ್ನು ಬಿಟ್ಟರೆ ಇನ್ನಾರಿಗೂ ಶಕ್ತವಿಲ್ಲ. ಇಂದಲ್ಲದಿದ್ದರೂ ಮುಂದೆ ಯಾರಿಗಾದರೂ ಶಕ್ತಿಯು ಬರಬಹುದೇ? ಎಂದರು ದಾಸರೆನ್ನುವರು. ''ಹಿಂದೆ-ಮುಂದೆ-ಎಂದೆಂದಿಗೂ ಶ್ರೀ ಗೋವಿಂದಗೆ ಸರಿ-ಮಿಗಿಲಿಲ್ಲೆಂತೆಂಬುದೆ''.

ಹಿಂದೆಯೂ ಯಾರಿಲ್ಲ, ಮುಂದೆಯೂ ಬರಲ್ಲ, ಇಂದೂ ಇಲ್ಲ, ಆದ್ದರಿಂದ ಎಂದೆಂದಿಗೂ ಇಲ್ಲ. ಸಮರೇ ಇಲ್ಲ ಎನ್ನುವಾಗ ಅಧಿಕವೆಲ್ಲಿ ಸಾಧ್ಯ. ಇದನ್ನೇ ಶ್ರುತಿಯಲ್ಲಿ

ನ ಸಮೋವಾಧಿಕೋವಾಪಿವಿಧತೇ ತಸ್ಯ ಕಾಚನ
ನಾಸೀತ್ರಯ ಭವಿಷ್ಯೋ ವಾ ಪರತಃ ಸ್ವತಃ ಏವ ಚ

ಆಚಾರ್ಯರು ಕೂಡ ಮಾಯಾವಾದಖಂಡನದಲ್ಲಿ

ನಾಸ್ತಿನಾರಾಯಣಸಮಂ ನ ಭೂತೋ ನ ಭವಿಷ್ಯತಿ

ಈ ರೀತಿಯಾಗಿ ತಿಳಿಸುವರು. ತತ್ವಸುವಾಲಿಯಲ್ಲೂ ಈ ಬಗೆಯಾದ ಹರಿಯ ಗುಣ-ಕ್ರಿಯೆಗಳನ್ನು ತಿಳಿದವನೇ ಜ್ಞಾನಿ ಎನ್ನುವರು. ಇದನ್ನರಿತು ಬದುಕಿದರೆ ಬಾಳಿದ್ದಕ್ಕೆ ಫಲ.

ಹರಿಕಥೆ ಪರಮಾದರದಲಿ ಕೇಳುತ
ಮರೆದು ತನುವ ಸುಖ ಸುರಿಯುಉತಲಿ
ಉರುಗಾಯನ ಸಂದರುಶನ ಹಾರೈ
ಸಿರುಳು ಹಗಲು ಜರಿ ಜರಿದು ಬಾಳುವುದೇ **|| 17 ||**

ಸಾರ್ಥಕ ಬದುಕಿಗೆ ಮತ್ತೊಂದು ಸೋಪಾನವನ್ನು ತಿಳಿಸುತ್ತಾರೆ. ಹರಿಕಥೆಯನ್ನು ಪರಮಾದರದಲಿ ಕೇಳಬೇಕು. ಹರಿಕಥೆ ಎನ್ನುವುದಕ್ಕೆ ಹರಿಯ ದಶಾವತಾರಾದಿ ಕಥೆಗಳು ಹಾಗೂ ರಾಮಾವತಾರ ಕೃಷ್ಣಾವತಾರಾದಿಗಳು ಮಹಿಮೆಗಳನ್ನು ವಿಸ್ತಾರವಾಗಿ ಹೇಳುವ ರಾಮಾಯಣ, ಭಾಗವತ, ಮಹಾಭಾರತಾದಿಗಳನ್ನು ಪರಮಾದರದಿ ಕೇಳಬೇಕು.

ನನ್ನ ಮಗ, ನನ್ನ ತಂದೆ ನನ್ನವ ಹೇಳುವ ಕಥೆಯಂತಾದರೆ ಅಲ್ಲಿ ಆದರ ಬರುವದು.

ಆದರೆ ಪರಮಾದರ ಬರದು. ಹರಿ ನನ್ನವ ಎಂದಾದರೆ ಆಗ ಯಾರೇ ಹೇಳಿದರೂ ಆಗ ಪರಮಾದರ ತಾನಾಗಿ ಹುಟ್ಟುವದು.

ಹರಿಯ ಕಥೆಗಳು ಎಂದು ಒಂದರ್ಥವಾದರೆ ಹರಿಯಿಂದ ನಡೆಯುವ, ನಮ್ಮಲ್ಲಿ ಹರಿಯದ್ದು ನಡೆಸುವ ಕಥೆಗಳು ಜೀವನ ಗಾಥೆಗಳು ಎಂದು ಮತ್ತೊಂದರ್ಥ. ನಮ್ಮಲ್ಲಿ ನಡೆಯುವ ಪ್ರತಿಯೊಂದು ಘಟನೆಗಳಲ್ಲಿ ಹರಿಯ ಕಾರುಣ್ಯವನ್ನು, ಅಚಿಂತ್ಯ ಶಕ್ತಿಯನ್ನೂ ಸತ್ಯ ಸಂಕಲ್ಪವನ್ನು ಭಾವುಕರಾಗಿ ನೆನೆದರೆ ಅಥವಾ ಯಾರಾದರೂ ಹೇಳುವಾಗ ಪರಮಾದರದಿ ಕೇಳಿದರೆ ಆಗ ನಮ್ಮ ಮನ ಮೈ ಮರೆತು ಸುಖಸಾಗರದಲ್ಲಿ ತೇಲುವದು.

ಹರಿಕಥೆ ಎನ್ನುವುದಕ್ಕೆ ಮೂರನೆ ಅರ್ಥ. ಪರಮಾತ್ಮನಂತೆ ವಾಯುಲೀಲೆಯನ್ನು ತಿಳಿಯಬೇಕು. ಹರಿ ಶಬ್ದಕ್ಕೆ ಕಪಿ ಎಂಬರ್ಥವುಂಟು. ಹನುಮಂತನ ಹಾಗೂ ಅವನ ಮೂಲರೂಪವಾದ ವಾಯುವಿನ ಮುಂದಿನ ಅವತಾರಗಳಾದ ಭೀಮಸೇನ ಮತ್ತು ಶ್ರೀಮದಾಚಾರ್ಯರ ಕಥೆಗಳನ್ನು ಕೇಳುತ್ತಾ ಹರಿಸರ್ವೋತ್ತಮತ್ವದ ಜೊತೆ ವಾಯುಜೀವೋತ್ತಮತ್ವವನ್ನು ತಿಳಿಯಬೇಕು.

ಹರಿ ಎಂಬ ಶಬ್ದಕ್ಕೆ ಇಂದ್ರ ಎನ್ನುವ ಅರ್ಥವೂ ಉಂಟು. ಹರಿ-ವಾಯುವಿನಂತೆ ಇಂದ್ರನ ಹಾಗೂ ಇಂದ್ರನ ಪರಿವಾರವಾದ ಸಕಲ ತತ್ವಾಭಿಮಾನಿಗಳ ಕಥೆಗಳನ್ನು ತಿಳಿಯಬೇಕು. ನಮ್ಮಲ್ಲಿ ನಿಂತು ತಮಗಾವ ಲಾಭವಿಲ್ಲದಿದ್ದರೂ ಹರಿಯಾಜ್ಞೆಯಂತೆ ಕೇವಲ ಕಾರುಣ್ಯದಿಂದ ನಮಗೆ ಉಪಕರಿಸಿ ಧರ್ಮದತ್ತ ಪ್ರೇರಿಸುವ ಸಕಲ ತತ್ವಾಭಿಮಾನಿ ದೇವತೆಗಳ ಕಥೆಗಳನ್ನು ಪರಮಾದರದಿ ಕೇಳಬೇಕು.

ದೇವತೆಗಳು ಮೂಲರೂಪದ ಮಹಿಮೆಯನ್ನು ತಿಳಿಯುತ್ತಾ ಅವತಾರರೂಪಗಳಾದ ಜಯತೀರ್ಥಾದಿ ಜ್ಞಾನಿವರೇಣ್ಯರ ಮಹಿಮೆಗಳನ್ನು ಕೇಳಬೇಕು. (ಹರಿ ಶಬ್ದಕ್ಕಿರುವ ಹತ್ತು ಅರ್ಥಗಳನ್ನು ಹೊಂದಿಸಿಕೊಳ್ಳಬೇಕು.)

ಸಾಧನೆಯ ಮೊದಲ ಮೆಟ್ಟಿಲು ಶ್ರವಣ. ಕಥೆಗಳನ್ನು ಕೇಳಬೇಕು. ಅದನ್ನೇ ಮನನ ಮಾಡುತ್ತಾ ಮೈ ಮರೆಯಬೇಕು. ನಿಧಿಧ್ಯಾಸನದಲ್ಲಿ ಮುಳುಗಬೇಕು. ಅದೇ ದಾರಿಯಲ್ಲಿ ಮುಂದುವರೆದರೆ ಉರುಗಾಯನನ ಸಂದರ್ಶನವಾಗುವದು. ''ಉರುಗಾಯನ'' ಇದು ವೈದಿಕ ಶಬ್ದ. ಋಗ್ವೇದದಲ್ಲಿ ''ಉರುಗಾಯೋ ನಮಸ್ಯಃ'' ಮುಂತಾದ ಪ್ರಯೋಗಗಳನ್ನು ಕಾಣುತ್ತೇವೆ. ಉರು - ಅಂದರೆ ಶ್ರೇಷ್ಠರಾದ ಬ್ರಹ್ಮಾದಿ ದೇವತೆಗಳಿಂದ ಗಾಯನ ಮಾಡಲ್ಪಡುವವು ಎಂದರ್ಥ. ಅದನ್ನೇ ಆಚಾರ್ಯರು ತಮ್ಮ ದ್ವಾದಶ ಸ್ತೋತ್ರದಲ್ಲಿ

''ಉನ್ನತಪ್ರಾರ್ಥಿತಾಶೇಷಸಂಸಾಧಕಂ...''

ಎಂದರು. ಗೋಪಾಲದಾಸರು ದೇವರಲ್ಲಿ "ಎನ್ನ ಮಾತಲ್ಲವಿದು ಎನ್ನ ಹಿರಿಯರ ಮಾತು" ಎಂದರು. ಅಂಥಹ ಉರುಗಾಯನನ ಸಂದರ್ಶನ ಎಂದರೆ ಅಪರೋಕ್ಷ ಜ್ಞಾನ. ಅದನ್ನೇ ಹಾರೈಸುತ್ತಾ ಅದಕ್ಕಾಗಿ ಹಗಲಿರುಳು ಜರಿಯುತ್ತಿರುವದೆ ಬದುಕಿನ ಫಲ. ಅಪರೋಕ್ಷ ಜ್ಞಾನದಿಂದಲೇ ಮುಕ್ತಿ. ಆ ಮುಕ್ತಿ ಪಡೆವದು ಬದುಕಿನ ಸಫಲತೆ ಎಂಬುದನ್ನು ಜಗನ್ನಾಥ ದಾಸಾರ್ಯರು ಬಹು ಸುಂದರವಾಗಿ ಈ ನುಡಿಯಲ್ಲಿ ನಿರೂಪಿಸಿದ್ದಾರೆ.

ವಿಷಯೇಂದ್ರಿಯಗಳಲಿ ತದಭಿಮಾನಿಗಳಲಿ
ಸುಮನಸರೊಳು ನಿಂತು ನಿಯಾಮಿಸುವ
ಶ್ವಸನಾಂತರ್ಗತ ವಾಸುದೇವ ತಾ
ವಿಷಯಂಗಳ ಭೋಗಿಸುತಿಹನೆಂಬುದೆ || 18 ||

ಜಗನ್ನಾಥದಾಸರು ಬದುಕಿನ ಸಫಲತೆಯನ್ನು ಸಂಪಾದಿಸುವ ಸೌಧಕ್ಕೆ ಸೋಪಾನಗಳನ್ನು ಒಂದೊಂದಾಗಿ ತಿಳಿಸುತ್ತಿದ್ದಾರೆ.

ಪರಮಾತ್ಮನಿಗೆ ಪರಮ ಭಕ್ತನಾಗಿ ಪರಪದವನ್ನು ಪಡೆಯಲು ಪುರುಷನು ಪ್ರಯತ್ನ ಪೂರ್ವಕವಾಗಿ ಮಾಡಬೇಕಾದ ಸಾಧನೆಗಳೇನು ಎಂಬುದನ್ನು ಬಹಳ ಸುಂದರವಾಗಿ ಸರಳವಾದ ಶಬ್ದಗಳಲ್ಲಿ ಒಂದೊಂದಾಗಿ ತಿಳಿಸುತ್ತಾ ಭಗವಂತನ ಮಹಿಮೆಗಳನ್ನು, ಅವನು ಮಾಡುವ ಅಪಾರ ಕರುಣೆಯನ್ನು ರೂಪಗಳ, ಗುಣಗಳ ವೈಭವೋಪೇತವನ್ನು ಅನಂತತೆಯನ್ನು, ಸಕಲ ಜಗನ್ನಿಯಾಮಕತ್ವವನ್ನು ವಿವರಿಸುತ್ತಾ ತ್ರ್ಯಕ್ಷಾದ್ಯಮರರಿಗೆ ಒಡೆಯ ನಾಗಿದ್ದಾನೆ. ಅಕ್ಷರನಾಮಕ ಲಕುಮಿಗೂ ಪತಿಯಾಗಿದ್ದಾನೆ. ಮೂಜಗದೊಳಗಿರುವ ಭೂ, ಜಲ, ಖೇಚರರಿಗೂ ನಿಯಾಮಕನಾಗಿದ್ದಾನೆ ಎಂದೆಲ್ಲ ಹೇಳಿ ಕೇವಲ ಜೀವಿಗಳಿಗಲ್ಲ, ಇಂದ್ರಿಯ ವಿಷಯಗಳಿಗೂ ಪ್ರೇರಕ. ಅಲ್ಲಿರುವ ಅಭಿಮಾನಿಗಳಿಗೂ ಪ್ರೇರಕ ಎನ್ನುವರು ದಾಸರು.

	ಇಂದ್ರಿಯ	ಅಭಿಮಾನಿ	ಹರಿರೂಪ	ವಿಷಯ
1)	ಶ್ರವಣ	ದಿಗಭಿಮಾನಿ	ಮತ್ಸ್ಯ	ಶಬ್ದ
2)	ನೇತ್ರ	ಸೂರ್ಯ	ಕೂರ್ಮ	ರೂಪ
3)	ಚರ್ಮ	ಅಹಂಕಾರಿಕ ಪ್ರಾಣ	ವರಾಹ	ಸ್ಪರ್ಶ
4)	ರಸನ	ವರುಣ	ನರಸಿಂಹ	ರಸ

5)	ನಾಸಿಕ	ಅಶ್ವಿನಿ ದೇವತೆಗಳು	ವಾಮನ	ಗಂಧ
6)	ವದನ	ಅಗ್ನಿ	ಪರಶುರಾಮ	
7)	ಪಾಣಿ	ದಕ್ಷ	ರಾಮಚಂದ್ರ	
8)	ಪಾದ	ಜಯಂತ	ಕೃಷ್ಣ	
9)	ಪಾಯು	ಯಮ, ಮಿತ್ರನಾಮಕ	ಸೂರ್ಯ	
10)	ಉಪಸ್ಥ	ಮನು	ಕಲ್ಕಿ	

ಹೀಗೆ ಇಂದ್ರಿಯ, ಇಂದ್ರಿಯಾಭಿಮಾನಿ, ವಿಷಯ, ವಿಷಯ ಅಭಿಮಾನಿಗಳಲ್ಲದ ಸುಮನಸರಲಿ ನಿಂದು ಯಾವಾಗಲೂ ನಿಯಾಮಿಸುವ ಭಗವಂತ.

ಆಚಾರ್ಯರು ಛಾಂದೋಗ್ಯ ಭಾಷ್ಯದಲ್ಲಿ ತಿಳಿಸುವರು.

ಅಧಿಷ್ಠಾಯಮನಶ್ಚಾಯಂ ವಿಷಯಾನುಪಸೇವತೇ

ಸಕಲೇಂದ್ರಿಯ ನಿಯಾಮಕನಾದ ಹೃಷೀಕೇಶ ಇಂದ್ರಿಯದಲ್ಲಿದ್ದು ಎಲ್ಲ ಭೋಗಗಳನ್ನು ಶ್ವಸನಾಂತರ್ಗತನಾಗಿ ಭಾರತೀರಮಣಾಂತರ್ಗತನಾಗಿ ಭೋಗಿಸುವ. ನಮ್ಮ ಹಾಗೇ ಎದುರಿಗಿರುವ ಪದಾರ್ಥವನ್ನೇ ತಿನ್ನಲಾರ.

ಶುಭಂಪಿಬತ್ಯಸೌನಿತ್ಯಂ

ಅಲ್ಲಿರುವ ಸ್ವಾಖ್ಯರೂಪವನ್ನು ಭೋಗಿಸುತ್ತಾನೆ. ಶುಭ ಫಲವನ್ನು ಭೋಗಿಸುತ್ತಾನೆ ಎಂದರಿತು ಭೋಗಿಸಿ ಸಮರ್ಪಿಸುವುದೇ ಬಾಳಿಗೆ ಒಲವು.

ಮೂಜಗದೊಳಗಿಹ ಭೂಜಲ ಖೇಚರ
ಈ ಜೀವರೊಳು ಮಹೌಜಸನ
ಸೋಜಿಗ ಬಹುವಿಧ ನೈಜ ವಿಭೂತಿಯ
ಪೂಜಿಸುತನುದಿನ ರಾಜಿಸುತಿಪ್ಪದೆ **॥ 19 ॥**

ಪರಮಾತ್ಮ ತ್ರ್ಯಕ್ಷಾದ್ಯಮರರನ್ನು ಕಾವ ಎಂದೊಡನೆ ನಮ್ಮಂಥ ಸಾಮಾನ್ಯ ನರರಿಗೊಂದು ಪ್ರಶ್ನೆ ಬಂದೀತು. ನಾವಂತೂ ಅಮರರಲ್ಲ, ಅಮರರಾಗುವ ಸಾಧ್ಯತೆಯೂ ಇಲ್ಲ, ಕೇವಲ ದೊಡ್ಡವರೊಡನೆ ಮಾತ್ರ ವ್ಯವಹರಿಸುವ ಇಂದಿನ ದೊಡ್ಡವರಂತಾದನೆ ಜಗದೊಡೆಯ?

ಎಂದರೆ ಅದಕ್ಕೆ ಈ ನುಡಿಯಲ್ಲಿ ಉತ್ತರಿಸುವರು.

ಪರದೇವ ಕೇವಲ ದೇವತಾಪರನಲ್ಲ. ಮೂರು ಲೋಕ ಉಪಲಕ್ಷಣದಿಂದ ಎಲ್ಲ ಲೋಕದಲ್ಲಿರುವ ಭೂಚರರಾದ ಮನುಷ್ಯ ಗವಾದಿಗಳಿಗೆ, ಜಲಚರವಾದ ಮತ್ಸ್ಯಾದಿಗಳಿಗೆ ಖೇಚರಗಳಾದ ಪಕ್ಷ್ಯಾದಿಗಳಿಗೆ ಪ್ರಿಯನಾಗಿರುವ ಎಲ್ಲರೊಳಗಿದ್ದು ಎಲ್ಲರನ್ನು ಪ್ರೇರಿಸುವ.

ಲೋಕತ್ರಯಸ್ಯ ಜೀವೇಷು ಜಲಭೂಮೇ ಪರೇಷು ಚ
ದಿವ್ಯಾಹ್ಯಾತ್ಮವಿಭೂತಿಶ್ಚ ಪೂಜಯಿತ್ವಾ ಪ್ರಕಾಶಯೇತ್

ಇಲ್ಲಿ ಹರಿಯನ್ನು ''ಮಹೌಜಸ'' ಎಂದು ಕರೆದಿದ್ದಾರೆ. ಒಬ್ಬ ವ್ಯಕ್ತಿ ಎಲ್ಲಾದರೊಂದಡೆ ಇರಬಲ್ಲ. ನೀರಿನಲ್ಲಿರುವ ಮೀನು ಭೂಮಿಯಲ್ಲಿರಲಸಾಧ್ಯ. ಆಕಾಶದಲ್ಲಿರುಬೇಕಾದ ಸೂರ್ಯ ಭೂಮಿಯಲ್ಲಿ ಓಡಾಡಿದರೆ ತೊಂದರೆ ಅರಮನೆಯಲ್ಲಿ ಬಡವನಿರಲು ಸಾಧ್ಯವಿಲ್ಲ. ಶ್ರೀಮಂತ ಗುಡಿಸಲಲ್ಲಿರಲು ಅಶಕ್ಯ. ಸಮಸ್ತ ಸಂಪತ್ತಿಗೆ ಅಭಿಮಾನಿಯಾದ ಲಕ್ಷ್ಮೀಪತಿ ಎಲ್ಲೆಡೆಯಿದ್ದರೂ ತೊಂದರೆಪಡದೆ, ತೊಂದರೆ ನೀಡದೆ ಹೇಗಿರಲು ಸಾಧ್ಯ ಎಂಬುದಕ್ಕೆ ದಾಸರು ವಿಷ್ಣುಸಹಸ್ರನಾಮದಲ್ಲಿಯ ಈ ನಾಮವನ್ನು (ಮಹೌಜಸ) ಉಲ್ಲೇಖಿಸಿದರು.

ಕೆಲವರಿಗೆ ಕೆಲವೆಡೆ ಶಕ್ತಿ ಉಳಿದೆಡೆ ಅಶಕ್ತಿ. ಹಲವರಿಗೆ ಹಲವದರ ಭಯ. ಈ ಹರಿಗೆ ಎಲ್ಲದರಲ್ಲೂ ಮಹಾಶಕ್ತಿ ಯಾರಿಂದಲೂ ಭಯವಿಲ್ಲ. ಆದ್ದರಿಂದ ಮಹೌಜಸ. ಇದೊಂದು ಎಲ್ಲೂ ಕಾಣದ ಸೋಜಿಗ. ಇದಕ್ಕೂ ಮಿಗಿಲಾದ ಸೋಜಿಗ ತಾನೇ ಬಹುವಿಧ ವಿಭೂತಿ ರೂಪಗಳನ್ನು ಸ್ವೀಕರಿಸಿ ಏನೂ ಸ್ವಂತ ಲಾಭವಿಲ್ಲದೆ ಪೂಜಿಸುವ. ನಾನು ದೇವನನ್ನು ಪೂಜಿಸುವೆ ಎಂದು ಹೊರಟರೆ ಅಸ್ವತಂತ್ರನಾದ ನಾನೂ ಪೂಜಿಸಲು ಸಾಧ್ಯವಿಲ್ಲ. ಅಹಂಕಾರ ಮಮಕಾರದಿಂದ ಪೂಜಿಸಿದ ನನ್ನ ಪೂಜೆಯನ್ನು ದೇವರು ಸ್ವೀಕರಿಸಲು ಸಾಧ್ಯವಿಲ್ಲ. ದೇವನೇ ನನ್ನಲ್ಲಿದ್ದು ತನ್ನನ್ನು ಪೂಜಿಸಿಕೊಂಬ.

..........ಸ್ವಾತ್ಮಾನಮರ್ಚಯೇತ್ ಹರಿಃ ...

ಒಳಹೊರಗೂ ತಾನೇ ಇದ್ದು ತನ್ನನ್ನು ತಾನೇ ಅರ್ಚಿಸಿಕೊಂಬ. ಒಂದು ದಿವವಲ್ಲ, ಅನುದಿನವೂ ಪೂಜಿಸಿಕೊಂಬ. ಆದರಿಂದ ರಾರಾಜಿಸುವ. ನಾವೂ ಕೂಡ ಈ ಸೋಜಿಗವನ್ನು ಅನುದಿನ .... ಪೂಜಿಸುತ, ರಾರಾಜಿಸುವುದೇ ಬಾಳಿಗೆ ಫಲ.

ಮೇದಿನಿ ಪರಮಾಣ್ವಂಬುಕಣಂಗಳ
ನೈದಬಹುದು ಪರಿಗಣನೆಯನು
ಮಾಧವನಾನಂದಾದಿ ಗುಣಂಗಳ
ನಾದಿ ಕಾಲದಲಿ ಅಗಣಿತವೆಂಬುದೇ **॥ 20 ॥**

ಅನಂತನ ಅನಂತ ಮಹಿಮೆಗಳನ್ನು ಅನಂತ ಕಾಲದಲ್ಲಿ ವಿನಂತಿಸುವ, ಚಿಂತನೆಗೈಸುವ ಅನಂತ ವೇದದಲ್ಲಿ ವಿಷ್ಣುಸೂಕ್ತದ ಒಂದು ಮಂತ್ರ ಹೇಳಿತು.

''ವಿಷ್ಣೋರ್ನುಕಂ ವೀರ್ಯಾಣಿ ಪ್ರವೋಚಂ ಯಃ ಪಾರ್ಥಿವಾನಿ

ವಿಮಮೇ ರಜಾಂಸಿ'' ಎಂದು

ಈ ವೇದಾರ್ಥವನ್ನು ವಿವರಿಸಿತು. ಭಾಗವತದ ದ್ವಿತೀಯ ಸ್ಕಂಧದ ಈ ಶ್ಲೋಕ

''ವಿಷ್ಣೋರ್ನು ವೀರ್ಯಗಣನಾಂ ಕತಮೋರ್ಹತೀಹ
ಯಃ ಪಾರ್ಥಿವಾನ್ಯಪಿ ಕವಿರ್ವಿಮಮೇ ರಜಾಂಸಿ''

ಕಠಿಣವಾದ, ಗೂಢವಾದ ವೇದಾರ್ಥವಾಗಲಿಲ್ಲೆಂದು ವ್ಯಾಸರು ಸರಳ ಭಾಷೆಯಲ್ಲಿ ಸ್ಪಷ್ಟವಾಗಿ ಭಾಗವತದಲ್ಲಿ ಹೇಳಿದರೂ ಅಲ್ಪರಾದ ಪಾಮರರಿಗೆ ಅದೂ ಅರಿಯದಾಯಿತು. ಕರುಣಿಗಳಾದ ಜಗನ್ನಾಥದಾಸರು ನಮಗಾಗಿ ವೇದದ, ಭಾಗವತದ ಈ ಪ್ರಮೇಯವನ್ನು ನಮ್ಮ ಭಾಷೆಯಲ್ಲಿ ಅಂದರೆ ಕನ್ನಡದಲ್ಲಿ ಅತೀ ಸರಳ ಮಾಡಿ ಸ್ಪಷ್ಟವಾಗುವ ಹಾಗೇ ತಿಳಿಸುತ್ತಿದ್ದಾರೆ ಈ ನುಡಿಯಲ್ಲಿ.

ಇವತ್ತು ಪ್ರಯತ್ನಪಟ್ಟರೆ ಕಷ್ಟಸಾಧ್ಯವಾದರೂ, ಬಹುಸಮಯ ಸಾಗಿದರೂ ಭೂಮಿಯಲ್ಲಿರುವ ಪ್ರತಿ ಪರಮಾಣುಗಳನ್ನು ಹೇಗಾದರೂ ಮಾಡಿ ಎಣಿಸಬಹುದು. ಹಾಗೆ, ನೀರಿನ ಕಣಗಳನ್ನು, ಸಮುದ್ರದ ನೀರಾಗಲಿ, ನದಿ, ಸರೋವರ, ಬಾವಿ, ಕೆರೆ, ಯಾವುದೇ ನೀರಿದ್ದರೂ ಅದನ್ನು ಎಣಿಸಬಹುದು. ಅದರ ಕೊನೆ ಸಂಖ್ಯೆಯನ್ನು ಕೊನೆಗಾಲಕ್ಕೆ ಹೇಳಬಹುದು.

ಈ ಭೂ ಪರಮಾಣುಗಳ, ಅಂಬು ಕಣಗಳ ಗಣನೆ ನಮಗಾಗದಿದ್ದರೂ ಅದರ ಅಭಿಮಾನಿಗಳಿಗೆ ಅಸಾಧ್ಯವಲ್ಲ, ಭೂಮಿ ಎಂದರೆ ಭೂದೇವಿಯ ಒಂದು ರೂಪವಿದು. ನೀರು ವರುಣನ ಒಂದು ಪ್ರತಿಮೆ. ವರುಣನಿಗಾಗಲಿ, ಭೂದೇವಿಗಾಗಲಿ ತನ್ನಿಂದ ಅಭಿಮನ್ಯವಾದ ವಸ್ತುಗಳ ಪರಿಚಯ ಇರುತ್ತದೆ. ಇರಬೇಕು. ಆದ್ದರಿಂದ ಎಣಿಸಬಹುದು. ಕೇವಲ ಇವರಿಬ್ಬರಲ್ಲ. ಇವುಗಳಲ್ಲಿ ಅಭಿಮಾನಿಗಳಾದ ಶನೈಶ್ಚರಾದಿ ಉಳಿದ ದೇವತೆಗಳು

ಮತ್ತು ಇವರಿಗಿಂತ ಉತ್ತಮ ದೇವತೆಗಳೆಲ್ಲ ಎಣಿಸಬಹುದು. ನೀರಾಗಲಿ, ಭೂಮಿಯಾಗಲಿ ಎಷ್ಟೇ ದೊಡ್ಡದಾದರೂ ಅದಕ್ಕೊಂದು ಕೊನೆಯಿದೆ. ಹೀಗಾಗಿ ಅದರಲ್ಲಿರುವ ಭಾಗಗಳಿಗೆ ಕೊನೆ ಸಿದ್ಧ.

ಇಷ್ಟೆಲ್ಲ ಮಹಾಸಮರ್ಥರಾದ ನಮ್ಮ ಕಲ್ಪನೆಗೂ ಕಾಣದ ಕೆಲಸವನ್ನು ಕೆಲವೇ ಕ್ಷಣದಲ್ಲಿ ಮಾಡುವ ಎಲ್ಲ ದೇವತೆಗಳೂ ಕೂಡಿ ಎಣಿಸಿದರೂ, ಪ್ರತ್ಯೇಕ ಗಣಿಸಿದರೂ ಹರಿಗುಣಗಳ ಕೊನೆ ಕಾಣದು. ಪರಮಾತ್ಮನೇ ಅಪರಿಚ್ಛಿನ್ನನಾದಾಗ ಅವನಿಂದ ಅಭಿನ್ನವಾದ ಗುಣಗಳೆಲ್ಲ ಅಪರಿಚ್ಛಿನ್ನ. ಅಪರಿಚ್ಛಿನ್ನವಾದ ಗುಣಗಳಿಗೆ ಪರಿಚ್ಛೇದ ಹಾಕುವರು ಯಾರು ಉಂಟು ಜಗದೊಳು.

ಜಗತ್ತಿನ ಎಲ್ಲರ ಬುದ್ಧಿ ಸೇರಿಸಿದರೆ ಎಷ್ಟು ಬುದ್ಧಿಯಾಗುವುದೊ ಅದಕ್ಕೂ ಕೋಟಿ, ಕೋಟಿ ಪಟ್ಟು ಅಧಿಕ ಬುದ್ಧಿಯುಳ್ಳ ಮಹಾಲಕುಮಿ ಇದಕ್ಕಾಗಿ ಒಂದು ರೂಪ ಧರಿಸಿ ನಿರಂತರ ಎಣಿಸುತ್ತ ಕುಳಿತರೂ ಪಾದದ ಬೆರಳಿನ ನಖದ ತುದಿಯ ಧೂಳಿನ ಕಣದ ಗುಣ ಗಣನೆ ಕೊನೆಯಾಗಿಲ್ಲವೆಂದು ಸುಮಧ್ವವಿಜಯ ತಿಳಿಸುವುದು. ಹೀಗೆ ಎಣಿಸಿ ಎಣಿಸಿ ಹುಚ್ಚು ಹಿಡಿದು ಚಂಚಲೆಯಾದಳೆಂದು ಪುರಾಣ ಉತ್ಪ್ರೇಕ್ಷಿಸುತ್ತದೆ.

ಅದ್ಕಾಕ್ಕಾಗಿ ಇಲ್ಲಿ ಮಾಧವ ಎಂಬ ಶಬ್ದದಿಂದ ಭಗವಂತನನ್ನು ತಿಳಿಸಿದರು ಮಾಯೆ ಲಕ್ಷ್ಮೀಗೂ ಮಾಯಾ ಹಾಕುವ ಪತಿಯಿವನು.

ಎಲ್ಲರಿಗೂ ಮಾಯೆ ಹಾಕುವ ಇವನಿಗಾವ ಮಾಯೆ ಇಲ್ಲ. ಜಗದ ಎಲ್ಲ ಮಾಯೆಗಳಿಗೂ ಧವ ಒಡೆಯನಾಗಿರುವ. ಇಂಥಹ ಮಾಧವನ ಆನಂದಾದಿ ಗುಣಗಳನ್ನು ಅನಾದಿಕಾಲದಿಂದಲೂ ಅನಂತಕಾಲದವರೆಗೆ ಲಕ್ಷ್ಮ್ಯಾದಿಗಳೂ ಎಣಿಸಿದರೂ ಅಗಣಿತ ವೆಂಬುದೆ ಫಲವಿದು ಬಾಳ್ದುದಕೆ.

ಗುಣಕಾಲಾಹ್ವಯ ಆಗಮಾರ್ಣವ ಕುಂ-
ಭಿಣಿ ಪರಮಾಣ್ವಂಬುಧಿಗಳಲಿ
ವನಗಿರಿನದಿಮೊದಲಾದದರೊಳಗಿಂ-
ಧನಗತ ಪಾವಕನಂತಿಹನೆಂಬುದೆ **॥ 21 ॥**

ಶ್ರೀಮದಾಚಾರ್ಯರು ಭಾಗವತ ತಾತ್ಪರ್ಯದಲ್ಲಿ ಹೇಳುವರು

"ಸ್ವೇಚ್ಛಯಾ ತು ತೃಣಾನ್ ವಿಷ್ಣುಃ ನಾನಾಸ್ಯಂ ಕರೋತ್ಯಜಃ" ಇದರ

ಅರ್ಥವನ್ನು ವಿವರಿಸುತ್ತಾ ಜಗನ್ನಾಥದಾಸರು ತಮ್ಮ ಹರಿಕಥಾಮೃತಸಾರದ ಪಂಚತನ್ಮಾತ್ರಾಸಂಧಿಯಲ್ಲಿ ತಿಳಿಸುವರು.

ಕಾಲ, ಕರ್ಮ ಗುಣ ಸ್ವಭಾವ
ಗಳಾಲಯನು ತಾನಾಗಿ ಲಕುಮೀಲೋಲ
ತತ್ತದ್ರೂಪನಾಮದಿ ಕರೆಸುತವರೊಳಗಿದ್ದು

ಇದನ್ನೇ ಸಂಕ್ಷೇಪವಾಗಿ ಹೇಳ ಹೊರಟಿದ್ದೇ ಈ ಪದ್ಯ. ಪರಮಾತ್ಮ ಗುಣದೊಳಗೆ ಗುಣನಾಮದಿಂದಿದ್ದಾನೆ. ಇಲ್ಲಿ ಗುಣ ಎನ್ನುವುದಕ್ಕೆ ಅನೇಕ ಬಗೆಯಾಗಿ ಕಾಣಬಹುದು. ಪ್ರಕೃತಿಯಲ್ಲಿರುವ ಸತ್ವ, ರಜ, ತಮ ಈ ಮೂರು ಗುಣದಲ್ಲಿದ್ದಾನೆ. ಜೀವನಲ್ಲಿ ಗೌರವಕ್ಕೆ ಕಾರಣವಾಗಿರುವ ಶಾಂತಿ, ದಯಾ, ದಾನ ಅಭಯ ಮುಂತಾದ ಗುಣಗಳಲ್ಲಿ ಅದೇ ಹೆಸರಿನಿಂದಿದ್ದಾನೆ.

ಅದರರ್ಥ ನಮ್ಮಲ್ಲಿ ಆ ಗುಣಗಳು ಬರಬೇಕಾದರೆ ಆ ಹೆಸರಿನ ಪರಮಾತ್ಮನ ರೂಪಗಳನ್ನು ಚಿಂತಿಸಬೇಕು. ಅಥವಾ ಯಾರಲ್ಲಾದರೂ ಆ ಗುಣಗಳು ಕಂಡಾಗ ಹರಿಯ ರೂಪಗಳೆಂದು ಗೌರವಿಸಬೇಕು.

ಮತ್ತೊಂದು ಬಗೆಯನ್ನು ದಾಸರು ವ್ಯಾಪ್ತಿಸಂಧಿಯಲ್ಲಿ ತಿಳಿಸುತ್ತಾರೆ.

ಗಂಧ ರಸ ರೂಪ ಸ್ಪರ್ಶ
ಶಬ್ದೊಂದುತಾನಲ್ಲದರ ಪೆಸ
ರಿಂದ ಕರೆಸುತ .....

ಗಂಧ, ರಸ, ರೂಪ, ಸ್ಪರ್ಶ, ಶಬ್ದ ಇವುಗಳು ಪಂಚಭೂತಗಳಾದ ಭೂಮಿ, ನೀರು, ಅಗ್ನಿ, ವಾಯು, ಆಕಾಶದ ಗುಣಗಳು. ಈ ಗುಣಗಳಲ್ಲೂ ಹರಿಯಿರುವ, ಆ ಗುಣಗಳ ಹೆಸರಿನಿಂದೇ ಕರೆಸಿಕೊಳ್ಳುವ. ಈ ಹೆಸರಿಗೆ ಕಾರಣವನ್ನು ಆಚಾರ್ಯರು ಗೀತಾ ತಾತ್ಪರ್ಯಾದಿಗಳಲ್ಲಿ ತಿಳಿಸುವರು.

"ಅಪ್ಸುಸ್ಥಿತ್ವಾ ರಸಯತಿ ರಸನಾಮಾ ತತೋ ಹರಿಃ"

ನೀರಿನಲ್ಲಿದ್ದು ರಸವನ್ನು ನೀಡುವ ಹರಿ ರಸ. ಇತ್ಯಾದಿಯಾಗಿ ಪ್ರತಿಯೊಂದನ್ನು ತಿಳಿಸುವರು.

ಹೀಗೆ ಕಾಲದಲ್ಲೂ ಕಾಲನಾಮದಿಂದಿದ್ದಾನೆಂದು ತಿಳಿಯಬೇಕು. ಗರುಡ ಪುರಾಣದ ಮಾತೊಂದು ತಿಳಿಸುವದು.

"ಕಾಲಸ್ಯ ಪ್ರೇರಕೋ ವಿಷ್ಣುಃ ಸರ್ವಸ್ಯ ಪ್ರೇರಕೋ ಯತಃ"

ಸರ್ವಪ್ರೇರಕನಾದ ಸರ್ವೇಶ ಕಾಲದಲ್ಲೂ ಇದ್ದು ಕಾಲಕ್ಕೂ ಪ್ರೇರಕನಾಗಿರುವ. ಕಾಲದ ಹರಿಯ ಸಂಬಂಧವನ್ನು ದಾಸರು ಮತ್ತೊಂದೆಡೆ ತಿಳಿಸುವರು.

"ಕಾಲಾಂತರ್ಗತ ಕಾಲನಿಮಾಮಕ ಕಾಲಾತೀತ ತ್ರಿಕಾಲಜ್ಞ

ಕಾಲಪ್ರವರ್ತಕ ಕಾಲ ನಿವರ್ತಕ ಕಾಲೋತ್ಪಾದಕ ಕಾಲಮೂರ್ತೇ"

ಕಾಲಮೂರ್ತಿಯಾದ ಹರಿಕಾಲದ ಸಂಬಂಧವನ್ನು ಹೇಗೆ ಇಟ್ಟುಕೊಂಡಿದ್ದಾನೆಂದು ತಿಳಿಸುವರು.

ಕಾಲವೆಂದರೆ ಮಹಾಕಾಲ ಮಾತ್ರವಲ್ಲ. ಅವಾಂತರಕಾಲಗಳನ್ನು ಸ್ವೀಕರಿಸಬೇಕು. ಭೂತ, ಭವಿಷ್ಯತ್, ವರ್ತಮಾನ ಕಾಲಗಳಲ್ಲಿದೆ ಮಾತೃಕಾಸಂಧಿಯಲ್ಲಿ ತಿಳಿಸುವಂತೆ ದಿವಸ, ಯಾಮ, ಮುಹೂರ್ತ, ಘಟಿಕಾ, ವತ್ಸರ ಪರಿವತ್ಸರ ಸಂವತ್ಸರ ಇಡಾವತ್ಸರ ಗಳಲ್ಲದೆ ಋತು, ಅಯನ, ಮಾಸ, ಪಕ್ಷ, ವಾರ, ದಿನ ಹೀಗೆ ಎಲ್ಲ ಕಾಲಸೂಚಕ ಶಬ್ದಗಳನ್ನು ಸ್ವೀಕರಿಸಿ ಆ ಎಲ್ಲ ಶಬ್ದ ಮುಖ್ಯ ವಾಚ್ಯನಾದವ ಹರಿ. ಅಮುಖ್ಯ ವಾಚ್ಯವಾದ ವಸ್ತುವಿನಲ್ಲಿರುವ ನಮ್ಮನ್ನು ಸದಾ ರಕ್ಷಿಸಿ ಪೋಷಿಸುವನೆಂದು ಸದಾ ತಿಳಿಯಬೇಕು. ತಿಳಿವಿಗಾಗಿ ಅವನನ್ನೇ ಕೇಳಬೇಕು.

ಗುಣ ಕಾಲದಂತೆ ಆಗಸದಲ್ಲೂ ಇದ್ದಾನೆ. ಆಗಮ ಎಂದರೆ ವೇದ. ವೇದದ ಪ್ರತೀ ಶಬ್ದ, ಅಕ್ಷರ, ಉದಾತ್ತ , ಅನುದಾತ್ತ, ಸ್ವರಿತ ಸ್ವರಗಳಲ್ಲಿ ವ್ಯಂಜನಗಳಲ್ಲಿ ಪಾದ ಋಕ್ ವರ್ಗದಲ್ಲಿ ಹೀಗೆ ಎಲ್ಲ ಮಂತ್ರಗಳಲ್ಲೂ ಹರಿಯಿರುವ ಅವುಗಳ ನಾಮದಿಂದ ಕರೆಸಿಕೊಳ್ಳುವ ಮಂತ್ರ ಪ್ರತಿಪಾದ್ಯ, ಮಂತ್ರನಾಮ, ಮಂತ್ರೋಕ್ತಾ ಮಂತ್ರಪ್ರೇರಕ ಸರ್ವವೂ ನಾರಾಯಣನೇ.

ಆಗಮ ಎನ್ನುವದಕ್ಕೆ ವೇದ ಎಂಬುವದು ಮುಖ್ಯಾರ್ಥವಾದಂತೆ ನಮ್ಮಿಂದ (ಆ + ಗಮ) ಗಮನ ಪಡೆವ, ನಾವು ಉಚ್ಚಾರಮಾಡುವ ಪ್ರತೀ ಶಬ್ದವೂ ಆಗಮವೇ. ಆ ಎಲ್ಲ ಶಬ್ದಗಳು ಹರಿಗೆ ಅಧಿಷ್ಠಾನ ಹರಿ – ವಾಚಕ. ನಾ ನುಡಿವ ನುಡಿ ಮಾತ್ರ ಒಡೆಯನಿಗೆ ಗುಡಿಯಲ್ಲ. ನಡೆವ ನಡೆಯಲ್ಲಿ ಚಪ್ಪಲಿ ನುಡಿವ ಚರ್–ಟಪ್ ಶಬ್ದಗಳು ಹರಿಯ ಪಾಲಿಗೆ ಮಂತ್ರಗಳು. ಹಲ್ಲಿಯ ಶಬ್ದ, ಘಂಟೆ, ಶಂಖ, ಭೇರಿ, ನಗಾರಿ ಮುಂತಾದ ಅನೇಕ ವಾದ್ಯಗಳಿಂದ ಬರುವ ಎಲ್ಲ ಧ್ವನ್ಯಾತ್ಮಕ ಶಬ್ದಗಳು ಹರಿಗೆ ವಾಚಕವೆಂದು ಆಚಾರ್ಯರು ಋಗ್ಭಾಷ್ಯದಲ್ಲಿ ತಿಳಿಸಿದ್ದನ್ನು ದಾಸರು ನಿರ್ವಿಶೇಷಿತ ಆಗಮ ಪದದಿಂದ ಸೂಚಿಸುವರು.

ಆಗಮದಲ್ಲಿ, ಅರ್ಣವ – ಸಮುದ್ರದಲ್ಲಿ ಇದ್ದಾನೆಂದು ಬಿಡಿಸಿಯೂ

ಹೇಳಬಹುದು. ಅಥವಾ ಆಗಮ ಎಂಬ ಅರ್ಣವದಲ್ಲಿ ಇದ್ದಾನೆಂದು ಕೂಡಿಸಿಯೂ ಹೇಳಬಹುದು.

ಆಗಮಕ್ಕೆ ಕೊನೆಯಲ್ಲಿ ''ಅನಂತಾ ವೈ ವೇದಾಃ''. ಈಗ ನಾವು ಕಾಣುವ ಕೊನೆ ವ್ಯಾಸರು ದಯೆ ತೋರಿ ನಮ್ಮ ಅಧ್ಯಯನದ ಯೋಗ್ಯತೆಯ ಕೊನೆಯನ್ನು ತಿಳಿಸಿದ್ದಾರೆ. ನಾವದನ್ನು ವೇದದ ಕೊನೆಯೆಂದು ಭಾವಿಸಿದ್ದೇವೆ. ಅದಕ್ಕಾಗಿ ದಾಸರೆಂದರು ಆಗಮ ಇದು ಅರ್ಣವ. ಸಮುದ್ರದಂತೆ ಕೊನೆ ಕಾಣದ್ದು.

ಸಮುದ್ರದಂತೆ ವ್ಯಾಪ್ತವಾದ, ವಿಶಾಲವಾದ ಬೃಹದ್ರೂಪ ಇರುವದು ಪ್ರತ್ಯೇಕವಾಗಿ ಅಣುರೂಪವುಂಟು. ಎನ್ನಲು ಅರ್ಣವದಂದತೆ ಕುಂಭಿಣಿ (ಭೂಮಿ) ಪರಮಾಣುವಿನಲ್ಲಿ ಆ ಪರಮಾಣುಗಳು ಅನಂತ. ಆದ್ದರಿಂದ ಪರಮಾಣ್ವಂಬುಧಿಗಳಲಿ – ಹರಿಯಿದ್ದಾನೆ. ಅಲ್ಲಿ ಅಷ್ಟು ರೂಪಗಳುಂಟು.

ಅಂಬುದಿಯಲಿ ಎಂದು ಏಕವಚನ ಪದ ಪ್ರಯೋಗಡವಿದೆ ಅಂಬುದಿಗಳಲಿ ಎಂದು ಬಹುವಚನ ಪ್ರಯೋಗ ಮಾಡಿದ್ದಾರೆ.

ನಾವು ಕಾಣುವ ಈ ಉಪ್ಪಿನ ಸಮುದ್ರ ಮಾತ್ರದಲ್ಲಿ ಅಲ್ಲ, ಕ್ಷೀರ, ದಧಿ ಮೊದಲಾದ ಸಪ್ತಸಾಗರಗಳಲ್ಲಿ ಒಟ್ಟಾರೆ ಎಲ್ಲ ಜಲದಲ್ಲಿ ನದಿ, ಸರೋವರ, ಹಳ್ಳ, ಭಾವಿ, ಕೆರೆ, ಜಲಪಾತ ಕಾಲುವೆ ಯಾವದೇ ಅಂಬುಗೆ ಆಶ್ರಯವಾಗಿರಲಿ. ಅದೆಲ್ಲದರಲ್ಲೂ ಹರಿಯಿದ್ದು ವಾಚ್ಯನಾಗಿರುವ.

ಇದಲ್ಲದೇ ವನ ಎನ್ನುವದರಿಂದ ಎಲ್ಲ ಗಿಡ, ಮರ, ಬಳ್ಳಿಗಳಲ್ಲೂ ಹರಿಯಿದ್ದು ವಾಚ್ಯನಾಗುವ.

ಗಿರಿ ಎನ್ನುವದರಿಂದ ಪ್ರತೀ ಊರಿನ ಪರ್ವತಗಳನ್ನು ಗಣಿಸಬೇಕು. ಅದಕ್ಕಾಗಿ ಭಾಗವತ ಏಕಾದಶಸ್ಕಂದ ಹೇಳಿತು.

''ಖಂ ವಾಯು ಮಗ್ನಿಂ ಸಲಿಲಂ ಮಹೀಂ ಚ
ಜ್ಯೋತೀಂಷಿ ಸತ್ವಾನಿ ದಿಶೋ ದ್ರುಮಾದೀನ್
ಸರಿತ್ ಸಮುದ್ರಾಂಶ್ಚ ಹರೇಃ ಶರೀರಂ
ಯತ್ಕಿಂಚ ಭೂತಂ ಪ್ರಣಮೇದನನ್ಯಮ್

ಗಗನ, ಗಾಳಿ, ಅಗ್ನಿ, ನೀರು, ಭೂಮಿ, ನಕ್ಷತ್ರಗಳು, ದಿಕ್ಕುಗಳು, ಗಿಡಬಳ್ಳಿಗಳು, ಸರೋವರದಿಂದ ಸಮುದ್ರದವರೆಗೆ ಒಟ್ಟಾರೆ ವಿಶ್ವದಲ್ಲಿ ಏನೇನು ಅಸ್ತಿತ್ವವನ್ನು

ಪಡೆದಿದೆಯೋ ಅದೆಲ್ಲವೂ ಹರಿಯ ಶರೀರ ಹರಿಯ ಪ್ರತಿಮೆಗಳು. ಅದೆಲ್ಲದಕ್ಕೂ ವಂದಿಸಬೇಕು.

ಹರಿವಂಶವೂ ಇದನ್ನೇ ಸಾರಿತು :

''ಗಿರಿಗುಲ್ಮವನಾದೀನಾಂ ನದ್ಯಾದೀನಾಂ ತಥೈವ ಚ
ಸಾನ್ನಿಧ್ಯಂ ಲೋಕನಾಥಸ್ಯ ಸರ್ವದಾ ವರ್ತತೇ ಹರೇಃ''

ಎಲ್ಲಡೆ ಇದ್ದರೂ ತೋರುತ್ತಿಲ್ಲ ಏಕೆ? ಎಂದರೆ ದಾಸರೆಂದರು ಹರಿ ಇಂಧನಗತ ಪಾವಕದಂತಿದ್ದಾನೆ. ಕಟ್ಟಿಗೆಯಲ್ಲಿ ಅಗ್ನಿಯಿರುವದು ವಿಶ್ವವಿದಿತ. ಆದರೆ ಕಣ್ಣಿಗೆ ಕಾಣದು ಕಟ್ಟಿಗೆಯನ್ನು ಮುಟ್ಟಿದರೆ ಬಿಸಿ ತಾಕದು. ಆದರೆ ಆ ಕಟ್ಟಿಗೆಗಳನ್ನೇ ಮಥನ ಮಾಡಿದರೆ ಅಲ್ಲಿ ಅಗ್ನಿ ತೋರುವದು. ಹಾಗೇ ಪರಮಾತ್ಮ ಎಲ್ಲೆಡೆ ಇದ್ದರೂ ತೋರಲಾರ ಶಾಸ್ತ್ರದ ಮಥನವಾದಾಗ, ಶ್ರವಣ ಮನನಾದಿಗಳಿಂದ ಮನಸ್ಸು ಘರ್ಷಿತವಾದಾಗ ಹರಿ ಎಲ್ಲಿ ಬೇಕಾದಲ್ಲಿ ಪ್ರಕಟನಾಗುವ. ಮತ್ಸ್ಯಪುರಾಣ ಈ ದೃಷ್ಟಾಂತದೊಡನೆ ಮತ್ತೊಂದು ದೃಷ್ಟಾಂತವನ್ನು ತಿಳಿಸುವದು.

''ಯಥಾ ಪರಿಮಳಃ ಪುಷ್ಪೇಷ್ವಿಂದನೆ ವರ್ತತೇऽನಲಃ''

ಹೂ ಮೊಗ್ಗಾಗಿದ್ದಾಗ ಸುಗಂಧಬಾರದು. ಅದೇ ಅರಳಿದರೆ ಎಲ್ಲೆಡೆ ಹರಡುವದು. ಹಾಗೇ ನಮ್ಮ ಮನಸ್ಸು ಅರಳಿದರೆ ಹರಿಯ ಸುಗಂಧ ತೋರುವದು. ಹೀಗೆ ಭಗವಚ್ಚಿಂತನೆಯೊಂದಿಗೆ ಬಾಳಿದಲ್ಲಿ ಬದುಕು ಸಾರ್ಥಕ. ಬಾಳ್ದುದಕೆ ಫಲ.

ಅನಲಂಗಾರದೊಳಿಪ್ಪೊ ಪಾದಿಯ
ಅನಿರುದ್ಧನು ಚೇತನರೊಳಗೆ
ಕ್ಷಣಬಿಟ್ಟಗಲದೆ ಏಕೋ ನಾರಾ
ಯಣ ಶ್ರುತಿ ಪ್ರತಿಪಾದ್ಯನು ಇಹನೆಂಬುದೆ **॥ 22 ॥**

ಭಗವಂತನ ಗಾಯತ್ರ್ಯಾದಿ ವಿವಿಧ ರೂಪಗಳ ಮಹಿಮೆ ತಿಳಿದಾದ ಮೇಲೆ ಇಂತು ಮಹಿಮಾವಂತ ಭಗವಂತನೇ ಯಾಕೇ ನಮಗೆ ಶರಣ್ಯನಾಗಬೇಕು. ಎಷ್ಟೋ ಕಾರ್ಯಗಳನ್ನು ನಾವೇ ಮಾಡಿದ್ದೇವೆ. ಯಾವ ವ್ಯಕ್ತಿಯೂ ನಮಗಲ್ಲಿ ಸಹಾಯ ಮಾಡಿಲ್ಲ. ಎಂದರೆ ದಾಸರು ಉತ್ತರಿಸುವರು ಈ ನುಡಿಯಲ್ಲಿ.

ಏನೇ ಕಾರ್ಯವಾದರೂ ಅದು ನಮ್ಮಿಂದಲ್ಲ. ಎಲ್ಲವೂ ಭಗವಂತನಿಂದ.

ಇದ್ದಲಿನಲ್ಲಿ ಅಗ್ನಿ ಸೇರಿದಾಗ ಯಾವದೇ ಕಾರ್ಯಕ್ಕೆ ಉಪಯೋಗವಾಗುವದು. ಹಾಗೇ ನಾವೆಲ್ಲ ಜೀವರು ಇದ್ದಲಿನಂತೆ. ನಮ್ಮಲ್ಲಿ ಭಗವಂತ ಸೇರಿದಾಗ ಮಾತ್ರ ನಮ್ಮಲ್ಲಿ ಅಸ್ತಿತ್ವ. ಚಲನ-ವಲನಾದಿ ಕ್ರಿಯೆಗಳು ನಡೆಯುವವು. ವ್ಯತ್ಯಾಸವಿಷ್ಟೇ ಅಲ್ಲಿ ಅಗ್ನಿಯಿದ್ದದ್ದು ತಿಳಿಯುವದು. ನಮ್ಮಲ್ಲಿ ಪರಮಾತ್ಮನಿದ್ದದ್ದು ನಮಗೆ ತಿಳಿಯಲಾರದು.

ಮತ್ತೊಂದು ಅಂಶ ಇಲ್ಲುಂಟು. ನಾವು ಅಂಗಾರ ಹರಿ – ಅನಲ ಎಂದರೆ ಅಂಗಾರದಲ್ಲಿ ಕಪ್ಪುತನವಿದೆ. ಅದರಂತೆ ಜೀವನಲ್ಲಿ ಪಾರತಂತ್ರ್ಯ ಪ್ರಾಕೃತದೇಹ ಅಜ್ಞಾನಾದಿ ದೋಷ ಸಾಗರವುಂಟು. ಅನಲನಲ್ಲಿ ಈ ದೋಷವಿಲ್ಲ. ಹರಿಯಲ್ಲಿ ಯಾವ ದೋಷವಿಲ್ಲ. ಅನಲ – ಅಂಗಾರದ ಸಂಬಂಧವಾದಾಗ ಅನಲದಲ್ಲಿಯ ಉಷ್ಣಾದಿಗುಣ ಅಂಗಾರದಲ್ಲಿ ಕಾಣುವೆವು. ಆದರೆ ಅಂಗಾರದಲ್ಲಿಯ ದೋಷ ಅನಲದಲ್ಲಿ ಬಾರದು. ಜೀವನಲ್ಲಿ ಈಶನ ಪ್ರವೇಶವಾದಾಗ ಹರಿಯ ಗುಣ ಜೀವನಲ್ಲಿ ಕಾಣುವೆವು. ಆದರೆ ಜೀವನ ಯಾವ ದೋಷಗಳೂ ಹರಿಯಲ್ಲಿ ಬರಲಸಾಧ್ಯ.

ಹಿಂದೆ ಪದ್ಯದಲ್ಲಿ ದಾಸರು ಹೇಳಿದ "ಇಂಧನಗತ ಪಾವಕ...." ಎಂಬ ಮಾತಿನ ಸಮಾಖ್ಯೆಯಾಗಿ ಈ ಮಾತನ್ನು ಕಾಣಬೇಕು. ಅಂಗಾರವನ್ನು ತೋರಿಸಿ ಇದರಲ್ಲಿ ಪಾಚಕ ಶಕ್ತಿ, ಉಷ್ಣ ಶಕ್ತಿ, ಇದೇ ಎಂದಾಗ ಅದೆಲ್ಲವು ತೋರಿಸಿದ ಅಂಗಾರದಲ್ಲಿಲ್ಲ. ಅದನ್ನು ತುಂಬಿದ ಅಗ್ನಿಯಲ್ಲಿದೆ ಎಂದು ಹೇಗೆ ಸ್ಪಷ್ಟವಾಗಿ ನಾವೆಲ್ಲರೂ ತಿಳಿಯುತ್ತೇವೆಯೋ ಹಾಗೆ ಯಾರಾದರೂ ಜೀವನ ದೇಹವನ್ನು ತೋರಿಸಿ ಶ್ರೀಮಂತ, ವಿದ್ಯಾವಂತ, ಛಲವಂತ, ದಯಾವಂತ, ಗುಣವಂತ ಇತ್ಯಾದಿಯಾಗಿ ಅಂತಂದರೆ ಅದು ಈ ಜೀವನ, ದೇಹದ ಧರ್ಮಗಳಿಲ್ಲ. ಅದೆಲ್ಲವೂ ಅವನನ್ನು ತುಂಬಿದ ಈಶನ ಧರ್ಮಗಳೆಂದು ತಿಳಿಯಬೇಕು.

ನಮ್ಮನ್ನು ಪೂರ್ಣ ತುಂಬಿದವ ಹರಿ ಎನ್ನಲು ಇಲ್ಲಿ "ಅನಿರುದ್ಧ" ಎಂಬ ಪದದಿಂದ ಪರಮಾತ್ಮನನ್ನು ಕರೆದಿದ್ದಾರೆ. ನಮ್ಮಲ್ಲಿರುವ 4 ದೇಹಗಳಲ್ಲಿ ಒಂದು ದೇಹ ಅನಿರುದ್ಧ ದೇಹ ಜೀವನ ಸ್ವರೂಪವನ್ನು ಪೂರ್ಣವಾಗಿ ತುಂಬಿದ ದೇಹ ಮತ್ತು ಸ್ಥೂಲದೇಹದಲ್ಲಿ ಮುಚ್ಚಿ ನಮಗೆ ಕಾಣದೇ ಇರುವ ದೇಹ. ಹಾಗೇ ಅನಿರುದ್ಧ ನಮಗೆ ಕಾಣದೆ ನಮ್ಮನ್ನು ಪೂರ್ಣ ತುಂಬಿ ನಮ್ಮ ಸಕಲ ಕಾರ್ಯವನ್ನು ಮಾಡಿಸುವ.

ಅನಿರುದ್ಧನೆನಲು ಮತ್ತೊಂದು ಕಾರಣವುಂಟು. ಅಂಗಾರವನ್ನು ಎಲ್ಲರೂ ಮುಟ್ಟುವರು, ತುಳಿಯುವರು, ತಿರಸ್ಕರಿಸುವರು. ನಿರುಪಯುಕ್ತವೆಂದು ಹೆದರದೆ ಬಿಸುಡುವರು. ಆದರೆ ಅನಲಕ್ಕೆ ಮಾತ್ರ ಇದಿಲ್ಲ. ಅದನ್ನು ಮುಟ್ಟಲು ಹೆದರುವರು. ಅದನ್ನು ತಡೆಯುವ ತಿರಸ್ಕಾರದಿಂದ ತುಳಿಯುವರು ಯಾರೂ ಇಲ್ಲ. ಹಾಗೇ ಇಲ್ಲಿ ಅನಲ ಸ್ಥಾನದಲ್ಲಿ

ಅನಿರುದ್ಧನಿರುವ. ಇವನು ಯಾರಿಂದಲೂ ನಿರುದ್ಧನಲ್ಲ. ತಡೆಯಲ್ಪಡುವನಲ್ಲ. ಅಗ್ನಿಸ್ತಂಭವಿದ್ಯೆ ಬಲ್ಲವ ಅಗ್ನಿಯನ್ನು ತಡೆಯುವ. ಆದರೆ ಅನಿರುದ್ಧನ ನಿರೋಧಗೈಸುವ ಯೋಧನಿಲ್ಲ.

ಅನಲ ಅಂಗಾರವನ್ನು ಯಾವಾಗಲೂ ವ್ಯಾಪಿಸಿರುವುದಿಲ್ಲ. ದಿನಕ್ಕೆರಡು ಬಾರಿ ಅಡಿಗೆ ಮಾಡುವಾಗ ವ್ಯಾಪಿಸಿರುವ. ಅದರಂತೆ ಪರಮಾತ್ಮ ಜೀವನನ್ನು ದಿನದ ಕೆಲವು ಕ್ಷಣಗಳಲ್ಲಿ ಮಾತ್ರ ವ್ಯಾಪಿಸಿರುವನೆಂದು ತಿಳಿಯಬೇಡಿ. ''ಕ್ಷಣಬಿಟ್ಟಗಲದೇ ....'' ಎಂದರು ದಾಸರು. ಒಂದು ಕ್ಷಣವೂ ದೇವನಿಲ್ಲದೇ ಜೀವನಿರಲಾರ. ಇದಕ್ಕೆ ಶೃತಿಯ ಪ್ರಮಾಣವನ್ನು ಉದಾಹರಿಸುವರು.

''ಏಕೋ ನಾರಾಯಣ ಆಸೀನ್ನ ಬ್ರಹ್ಮಾ ನಚ ಶಂಕರಃ''

ಭಗವಂತನೊಬ್ಬನೆ ನಮ್ಮಲ್ಲಿ ಯಾವಾಗಲೂ ಇರುವ. ಬ್ರಹ್ಮಾದಿಗಳು ನಮ್ಮಲ್ಲಿ ತತ್ವಾಭಿಮಾನಿಗಳಾಗಿ ಇರುವರು. ಆದರೆ ಕ್ಷಣಬಿಟ್ಟಗಲದೇ ಇರುವ ವ್ಯಕ್ತಿ ನಾರಾಯಣನೊಬ್ಬನೇ. ಪ್ರಲಯದಲ್ಲಿ ಬ್ರಹ್ಮಾದಿಗಳೂ ಜೀವನ ಕಾರ್ಯವನ್ನು ಮಾಡಿಸುವುದಿಲ್ಲ. ಭಗವಂತನೊಬ್ಬನೇ ಎಲ್ಲವನ್ನು ಮಾಡುವ.

ಅಧಿಷ್ಠಾನನಾದ ಜೀವನೇ ನಾಶ ಹೊಂದಿದ ಮೇಲೆ ಈಶ ಜೀವನನ್ನು ಬಿಟ್ಟಿರುವದು ಅನಿವಾರ್ಯ ಎನ್ನಬೇಡಿ. ಜೀವನೂ ನಿತ್ಯ. ಈಶನೂ ನಿತ್ಯ. ಅವರಲ್ಲಿಯ ಸಂಯೋಗವೂ ನಿತ್ಯ ಸತ್ಯ ಎನ್ನುತ್ತಾ ಶ್ರುತಿಪ್ರತಿಪಾದ್ಯನಾದವನು ಹರಿ. ಅವನೇ ನಮ್ಮಲ್ಲಿ ಈಹನು ಎಂದು ಅಂಬುವದು ಅರಿಯುವದು. ಅನುಸಂಧಾನಿಸುವದೇ ಫಲವಿದು ಬಾಳ್ದುದಕೆ.

ಪಕ್ಷ್ಮಗಳಕ್ಷಿಗಳ್ ರಕ್ಷಿಸುವಂದದಿ
ಅಕ್ಷರ ಪುರುಷನಪೇಕ್ಷೆಯಲಿ
ಕುಕ್ಷಿಯೊಳಬ್ಜಜ ತ್ರ್ಯಕ್ಷಾದ್ಯಮರರ
ಈಕ್ಷಿಸಿ ಕರುಣದಿ ರಕ್ಷಿಪನಂದದಿ **|| 23 ||**

ಧೂಳು ಎದ್ದಾಗ ಯಾರೂ ಕಣ್ಣಿಗೆ ನಿನ್ನನ್ನು ರಕ್ಷಣೆ ಮಾಡಿಕೊ ಎಂದು ಹೇಳುವುದಿಲ್ಲ. ಅದಕ್ಕೆ ರಕ್ಷಣೆ ಮಾಡಿಕೊಳ್ಳುವ ಬುದ್ಧಿ ಸಾಮರ್ಥ್ಯವಿಲ್ಲ. ಅದರ ರಕ್ಷಣೆಗೆ ಅದರ ಆಜ್ಞೆ, ಅಭಿನಂದನೆ ಅಪೇಕ್ಷೆ ಪಡೆಯದೆ ನಿರ್ವ್ಯಾಜವಾಗಿ ರೆಪ್ಪೆ ಆ ಕಣ್ಣನ್ನು ಸರಿಯಾದ ಸಮಯಕ್ಕೆ ರಕ್ಷಣೆ ನೀಡುವದು. ಹಾಗೆಯೇ ಅಕ್ಷರ ಪುರುಷನಾದ ಹರಿ ಏನೂ ಅಪೇಕ್ಷೆಪಡದೆ ನಮ್ಮನ್ನು ರಕ್ಷಿಸುವ. ಇಲ್ಲಿ ಅಕ್ಷರ ಎಂದರೆ ದೇಹನಾಶವಿರದ ಲಕುಮಿ ಅವಳ ಪುರುಷ ಪತಿ ಎಂದು

ಒಂದರ್ಥ. ಮತ್ತೊಂದರ್ಥವುಂಟು. ನಾಶಗಳು ನಾಲ್ಕು ವಿಧ.

ಅನಿತ್ಯತ್ವಂ ದೇಹಹಾನಿಃ ದುಃಖಪ್ರಾಪ್ತಿರಪೂರ್ಣತಾ

ಈ ನಾಲ್ಕೂ ಬಗೆಯ ಕ್ಷರ - ನಾಶವಿಲ್ಲದ ವ್ಯಕ್ತಿ. ಅಕ್ಷರ ಆ ಅಕ್ಷರನಾದ ಪುರುಷ ಹರಿ ಎಂದರ್ಥ. ಪುರಿ ನಾಡಿಯಲ್ಲಿ ಜೀವನೊಡನೆ ಇರುವ. ಆದ್ದರಿಂದ ಪುರುಷನೆಂದೆನಿಸುವ. ಈ ಅಕ್ಷರ ಪುರುಷ ಕೊನೆಗೆ ಪ್ರಲಯಕಾಲದಲ್ಲಿ ತನ್ನ ಕುಕ್ಷಿಯೊಳಗೆ ಬ್ರಹ್ಮ, ರುದ್ರಾದಿ ಸಕಲ ನರರನ್ನು ಕರುಣದಿಂದ ಈಕ್ಷಿಸಿ ರಕ್ಷಿಸುವ.

ಇದೇ ಮಾತನ್ನು ವಾಮನ ಪುರಾಣ

ಬಹ್ಮರುದ್ರಾದಿಕಾನ್-ದೇವಾನ್ ....

ಆಚಾರ್ಯರು ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ

ಜಠರೇ ಶಯನಾನ್ ....

ಎಂದು ದಾಸರಿಗೆ, ದಾಸರ ಈ ಪದ್ಯಕ್ಕೆ ಮೂಲವನ್ನು ನೀಡಿದ್ದಾರೆ.

ಜೊತೆಗೆ ವಿಷ್ಣುರಹಸ್ಯ ತಿಳಿಸುವಂತೆ

ರಕ್ಷತೀತ್ಯೇಕವಿಶ್ವಾಸಃ ತದೀಯೋಹಮಿತಿ ಸ್ಮೃತಿಃ

ಹರಿಯೇ ನಮಗೆ ರಕ್ಷಕ. ಅವನಲ್ಲೇ ಶರಣಾಗತಿಯನ್ನು ಹೊಂದುವೆವು. ನಮ್ಮನ್ನೆಂದೂ ಕೈಬಿಡುವದಿಲ್ಲ ಎಂಬ ಅಚಲವಾದ ವಿಶ್ವಾಸವಿಡಬೇಕು. ಈ ಜ್ಞಾನದೊಂದಿಗೆ ವಿಶ್ವಾಸ ಗಟ್ಟಿಯಾದರೆ ಬದುಕಿಗೆ ನಿಜವಾದ ಫಲ ದೊರಕಿದಂತೆ.

ಪವನಮತಾನುಗರವ ನಾನುಹುದೆಂ-
ದವನಿಯೊಳಗೆ ಸತ್ ಕವಿಜನರ
ಭವನಗಳಲಿ ಪ್ರತಿದಿವಸದಿ ಸುಕಥಾ
ಶ್ರವಣ ಮಾಡುತ ಪ್ರವರನಾಗುವುದೇ **II 24 II**

ಜೀವನದ ಸಾರ್ಥಕತೆಗೆ ಅನೇಕ ಸೋಪಾನಗಳ ಸವಿಯನ್ನು ಸವೆದು ನವಸೋಪಾನದತ್ತ ನಡೆಯುತ್ತಿದ್ದೇವೆ. ಎಲ್ಲರೂ ಎಲ್ಲರಿಗೂ ಪರಿಚಿತರಲ್ಲ. ಇರಲು ಸಾಧ್ಯವೂ ಇಲ್ಲ. ಆದರೆ ಇದರ ಅವಶ್ಯಕತೆ ಸಕಲರಿಗೂ ಸಾಕಷ್ಟಿದೆ. ನಾನು ಕೇವಲ ನನ್ನವರಿಗೆ, ನನ್ನೂರಿಗೆ ಮಾತ್ರ ಪರಿಚಿತನಾದರೆ ತೃಪ್ತಿಯಿಲ್ಲ. ನನ್ನನ್ನು ಎಲ್ಲರೂ ನೆನೆಯಬೇಕು.

ಗುರುತಿಸಬೇಕು. ನಾನೆಲ್ಲೇ ಹೋದರೂ ನನ್ನೊಡನೆ ಹತ್ತಾರು ಜನ ಸುತ್ತುತ್ತಿರಬೇಕು ಎಂಬ ಹಂಬಲ, ತವಕ ಸಾಮಾನ್ಯವಾಗಿ ಎಲ್ಲರಿಗೂ ಇದ್ದೇ ಇರುವದು.

ಕೇವಲ ಪ್ರಚಾರ ಬಯಸುವವರು ಅಲ್ಪರಾಗುತ್ತಾರೆ. ಕಾರ್ಯದೊಡನೆ ಪ್ರಚಾರ ಬಯಸಿದವರು ಮಧ್ಯಮರೆನಿಸುವರು. ಪ್ರಚಾರವೇ ಬೇಡೆನ್ನುವರು ಉತ್ತಮರು. ಈ ಉತ್ತಮರು ಪ್ರಚಾರಕ್ಕೆ ಬೆನ್ನು ಹತ್ತದಿದ್ದರೂ ಬಂದಾಗ ಸ್ವಾಗತಿಸಿ ಸಂತಸಪಡುವರು. ಇನ್ನು ಕೆಲವರು ಕೀರ್ತಿಯ ಬೆನ್ನು ಹತ್ತದೇ, ಆ ಕೀರ್ತಿಯೇ ಬೆನ್ನು ಹತ್ತಿದರೂ ಬೆನ್ನು ತೋರಿಸುವರು ಉತ್ತಮೋತ್ತಮರು.

ಯದ್ಯಪಿ ಉತ್ತಮರಿಗೆ, ಉತ್ತಮೋತ್ತಮರಿಗೆ ಪ್ರಚಾರ ಬೇಡಾದರೂ ಪರಿಚಯ ಬೇಕು. ಅಧಮರಿಗೆ, ಮಧ್ಯಮರಿಗೆ ಹೊಗಳಂಬಟ್ಟರ ಪರಿಚಯ ಬೇಕಾದರೆ ಉತ್ತಮರಿಗೆ ಉತ್ತಮೋತ್ತಮರಿಗೆ ಸಾಧಕರ ಪರಿಚಯ, ಸಾಧನೆಗಳ ಪರಿಚಯ ಬೇಕೇ ಬೇಕು. ಆ ಸಾಧಕರಿಗೆ ತಮ್ಮ ಪರಿಚಯವನ್ನು ಮಾಡಿಕೊಡಬೇಕು. ಹೇಗೆ ನನ್ನನ್ನು ನಾ ಪರಿಚಯಿಸಬೇಕು ಎನ್ನುವುದನ್ನು ದಾಸರು ತಿಳಿಸುತ್ತಾರೆ.

''ಪವನ ಮತಾನುಗರವ ನಾ'' ಎಂದು ಹೇಳಬೇಕು. ನನ್ನ ಡಿಗ್ರಿಗಳನ್ನು, ಸಾಧನೆಗಳನ್ನು ಹೇಳಿಕೊಂಡರೆ ಅದು ವ್ಯರ್ಥ. ಅಹಂಕಾರದ ದಾರಿಯಲ್ಲಿ ಹೊಗಬಹುದು. ಹಿರಿಯರ, ಗುರುಗಳ ಹೆಸರಿನಿಂದ ಪರಿಚಯಿಸಿದರೆ ಅದೇ ಉತ್ತಮ ಪರಿಚಯ. ವಿನಯದ ದಾರಿಗೆ ಹೋದಂತೆ. ಈ ದಾರಿಯನ್ನು ತೋರಿಕೊಟ್ಟವರೇ ಪವನಾವತಾರಿ ಹನುಮಂತ ದೇವರು.

ಒಬ್ಬನೇ ನೂರು ಯೋಜನ ಸಮುದ್ರವನ್ನು ಯಾವ ಶ್ರಮವಿಲ್ಲದೇ ಹಾರಿ, ಲಂಕಿಣಿಯನ್ನು ಕೊಂದು ಅಶೋಕವನವನ್ನು ಹಾಳುಮಾಡಿ, ಅಕ್ಷಕುಮಾರಾದಿ 80 ಕೋಟಿ ರಾಕ್ಷಸರನ್ನು ಯಾರ ಸಹಾಯವಿಲ್ಲದೇ ಆಯುಧ ಹಿಡಿಯದ, ಶ್ರಮಪಡದ ಹನುಮಂತ ರಾವಣನ ಸಭೆಯಲ್ಲಿ ತನ್ನ ಯಾವ ವೀರಗಾಥೆಗಳನ್ನು ಪರಾಕ್ರಮದ ವರ್ಣನೆಯನ್ನು ಮಾಡದೆ, ವಿನಯದಿಂದ ತನ್ನ ಪರಿಚಯವನ್ನು

'ದಾಸೋಹಂ ಕೋಸಲೇಂದ್ರಸ್ಯ'

''ನಾ ರಾಮನ ಬಂಟ'' ಎಂದು ಮಾತ್ರ ಹೇಳಿದ. ಅಂತಹ ಪವನನ ಮತದವನು ನಾ ಎನ್ನಬೇಕು.

ಕೇವಲ ಪವನ ಮತದಲ್ಲಿ ಹುಟ್ಟಿದರೆ ಅದೇ ದೊಡ್ಡ ಭಾಗ್ಯ. ಆದರೆ ಅಷ್ಟೇ ಸಾಲದು.

ಪವನನಿಗೆ ನಾನು ಮತನಾಗಬೇಕು. ಸಮ್ಮತನಾಗಬೇಕು. ಆಗ ಬದುಕು ಸಾರ್ಥಕ. ಪವನನಿಗೆ ಸಮ್ಮತನಾಗಬೇಕಾದರೆ ಪವನ ಮತದಲ್ಲಿ ಹುಟ್ಟಬೇಕು. ಅದಕ್ಕಾಗಿ ಹೆಮ್ಮೆ ಪಡಬೇಕು. ಕೇವಲ ಪವನನನ್ನು ಸಮ್ಮತಿಸದೆ, ಗೌರವಿಸದೇ, ಪವನ ಮತದವರನ್ನೆಲ್ಲ ಗೌರವಿಸಿ ಅನುಗವಾಗಬೇಕು. ಅಂದರೆ ಅನುಸರಿಸಬೇಕು.

ಮತದವರನ್ನು ಅನುಸರಿಸುವಂತೆ ಮುಖ್ಯವಾಗಿ ಮತವನ್ನು ಸಿದ್ಧಾಂತವನ್ನು ಅನುಸರಿಸಬೇಕು. ಸಿದ್ಧಾಂತವನ್ನು ಅನುಸರಿಸುವದು ಎರಡು ಬಗೆ. ಆಚಾರದಿಂದ ಮತ್ತು ವಿಚಾರದಿಂದ. ಸಿದ್ಧಾಂತದಲ್ಲಿ ತಿಳಿಸಿದ ಏಕಾದಶಿ, ನಾಮಧಾರಣೆ, ಪೂಜೆ ಶಿಖಾದಿ ಧಾರಣೆ, ಹರಿ ಗುರು ಹಿರಿಯರ ಅತಿಥಿ ಬ್ರಾಹ್ಮಣರ ಸೇವೆ, ವೈಶ್ವದೇವ ಬಲಿಹರಣ ಇತ್ಯಾದಿಗಳನ್ನು ಸರಿಯಾಗಿ ಆಚರಿಸಿದರೆ ಒಂದು ಬಗೆಯಾದ ಆಚಾರದಿಂದ ಪವನ ಮತಾನುಗನಾದಂತೆ.

ಇನ್ನೊಂದು ಬಗೆ ವಿಚಾರದಲ್ಲಾಗಬೇಕು. ಪಂಚಭೇದಗಳು ಹರಿಸರ್ವೋತ್ತಮತ್ವ, ವಾಯುಜೀವೋತ್ತಮತ್ವ, ಮುಕ್ತಿಯಲ್ಲಿ ತಾರತಮ್ಯ ಇತ್ಯಾದಿ ಶಾಸ್ತ್ರದ ಅತ್ಯಂತ ಪ್ರಮುಖ ಪ್ರಮೇಯಗಳ ಶ್ರವಣ, ಮನನ, ನಿಧಿಧ್ಯಾಸನಗಳನ್ನು ನಿರಂತರ ಮಾಡಬೇಕು. ಆ ಪವನ ಮತದ ಅಧ್ಯಯನ ಅಧ್ಯಾಪನದಲ್ಲೇ ಜೀವನ ಸವೆದರೆ ಪವನಮತಾನುಗನಾದಂತೆ ಆ ಬಗೆಯಲ್ಲಿ ಪರಿಚಯವಾದರೆ ಜೀವನ ಸಾರ್ಥಕ. ಆಗ ಅಹಂಕಾರ ಬರದೆ ವಿನಯವೇ ನಮ್ಮಲ್ಲಿ ತುಂಬುವದು. ಸಾಧಕರು ತಮ್ಮತ್ತ ಕರೆಯುವರು.

ಇಂದಿನ ದಿನಗಳಲ್ಲಿ ಲಾಭವಿಲ್ಲದೇ ಯಾರೂ ಏನೂ ಮಾಡಲಾರರು. ಮಹಾತ್ಮರ ಮಾತಿಗೆ ಮಹತ್ವವಿತ್ತು ಮಾನಿಸುವ ಸ್ವಭಾವ ಬಹಳ ಕಡಿಮೆ. ''ಬ್ರಾಹ್ಮಣ' ಎನ್ನಲು ನಾಚುವ ನಿರಭಿಮಾನಿಯಾದ ನರ ಪವನ ಮತದವನೆಂದು ಹೇಗೆ ತಾನೇ ಹೇಳಬಲ್ಲ. ಅದಕ್ಕಾಗಿ ವಾಮನ ಪುರಾಣ ಇದರ ಲಾಭವನ್ನು ತಿಳಿಸುವದು.

ದೇವತಾ ತಾರತಮ್ಯಂ ಚ ಜ್ಞಾತ್ವಾ ವಾಯುಮತಾನುಗಃ ।
ಸರ್ವ ಪಾಪವಿನಿರ್ಮುಕ್ತಃ ಸ ಯಾತಿ ಪರಮಾಂ ಗತಿಮ್ ॥

ನನಗಿಂದು ಚಿಂತೆ, ದುಃಖ, ಸೋಲು, ಅಸಮಾಧಾನಗಳು ಎಷ್ಟೇ ಬೇಡವೆಂದು ದಬ್ಬಿದರೂ ನಮ್ಮಿಂದ ದೂರ ಸರಿಯುತ್ತಿಲ್ಲ. ಬ್ರಾಹ್ಮಣನಾಗಿ ಹುಟ್ಟಿದ್ದೇ ಇದಕ್ಕೆ ಕಾರಣ ಎಂದು ಹಲವರು ತಿಳಿದಿದ್ದಾರೆ. ಬ್ರಾಹ್ಮಣನಾಗಿದ್ದಕ್ಕೆ ಈ ಗೋಳಿನ ಬಾಳಲ್ಲ. ಬ್ರಾಹ್ಮಣನಾಗಿ ಬ್ರಾಹ್ಮಣಧರ್ಮ ಪಾಲಿಸದಿದ್ದಕ್ಕೆ ಪಾಪ. ಅದರಿಂದ ದುಃಖ ಸೋಲು ಮುಂತಾದವುಗಳು. ಕಾರಣವಾದ ಪಾಪ ಪೋದರೆ, ದುಃಖವು ತಾನಾಗಿಯೇ ದೂರವಾಗುವುದು. ಪಾಪ ಪೋಗಬೇಕಾದರೆ ದೇವತಾ ತಾರತಮ್ಯಜ್ಞಾನದೊಂದಿಗೆ ವಾಯು ಮತಾನುಗನಾದರೆ ಮಾತ್ರ. ಇಲ್ಲಿ ''ಚ'' ಶಬ್ದದಿಂದ

ತಾರತಮ್ಯ ಜ್ಞಾನದ ಸಹಿತವಾಗಿ ಇನ್ನುಳಿದ ಸಕಲ ವಿಷಯಗಳನ್ನು ತಿಳಿಯಬೇಕೆಂದು ಸೂಚಿಸುವರು.

ಇಲ್ಲಿ ಲಾಭ-ನಷ್ಟಗಳು ಹೆಚ್ಚು ಕಡಿಮೆಯಾದರೂ ಮುಂದಿನ ಗತಿಮಾತ್ರ ಪರಮಗತಿಯಾಗುವುದರಲ್ಲಿ ಸಂದೇಹವಿಲ್ಲ ಎಂಬುದನ್ನು ಮನಗಂಡಾದರೂ ಹೆಮ್ಮೆಯಿಂದ ಹೇಳು. ''ನಾನು ಬ್ರಾಹ್ಮಣ, ಮಾಧ್ವ'' ಎಂದು

ನನ್ನ ಮನೆಯಲ್ಲಿ ನಾಲ್ಕು ಗೋಡೆಯ ಒಳಗೆ ಹೇಳಬಹುದು. ಹೊರಗೆ ಅದರ ವಿರೋಧಿಗಳೇ ತುಂಬಿರುವರು. ಅವರು ನನ್ನನ್ನು ನೋಡಿ ಅಪಹಾಸ ಮಾಡುವರು. ಅದಕ್ಕಾಗಿ ನಾನು ಸ್ವರ್ಗಕ್ಕೆ ಹೋದಾಗ ಅಲ್ಲಿ ಎಲ್ಲರೂ ನನ್ನವರೇ ಇರುವರು. ವಿರೋಧಿ ಗಳಿಲ್ಲ ಅವಮಾನ, ಅಪಹಾಸವಿಲ್ಲ, ಎಂದರೆ ದಾಸರೆನ್ನುವರು ''ಅವನಿಯೊಳಗೆ....'' ಎಂದು.

ನಿನಗೆ ಸ್ವರ್ಗದ ನಿಶ್ಚಯ ಮಾಡಿಕೊಟ್ಟವರು ಯಾರು? ನೀನಿದ್ದದ್ದು ಅವನಿಯಲ್ಲಿ ಭೂಲೋಕದಲ್ಲಿ, ಮೊದಲು ಇಲ್ಲಿಹೆಮ್ಮೆಯಿಂದ, ಧೈರ್ಯದಿಂದ, ಸಂಕೋಚವಿಲ್ಲದೆ ಗಟ್ಟಿಯಾಗಿ ಹೇಳು. ನಂತರ ದೇವಲೋಕದ ಪ್ರವೇಶದ ವಿಚಾರ ಮಾಡು.

ಭುವಿಯಲ್ಲಿ ದುರ್ಜನರು ತುಂಬಿದ್ದು ನಿಜ. ಅವರೆದುರು ಹೇಳುವುದು ಬೇಡ. ಕವಿಜನರೆದುರು ಪೇಳು. ಕವಿಜನರೆಂದರೆ ಕವಿತೆಗಳನ್ನು ರಚಿಸುವವರು ಎಂದಲ್ಲ, ಕವಿ ಎಂದರೆ ಜ್ಞಾನಿ ಎಂದರ್ಥ. ಇಂದು ಧರ್ಮದ ವಿರುದ್ಧ ಬರೆದ ಕವಿತೆಗೆ ಸಾಹಿತ್ಯಕ್ಕೆ ಹೆಚ್ಚು ಮನ್ನಣೆ. ಅಲ್ಲಿ ಹೋಗದೆ ಜ್ಞಾನಿಗಳತ್ತ ಹೋದರೆ ಅಭಯವಿದೆ, ಗೌರವವಿದೆ, ನೆಮ್ಮದಿ ಇದೆ. ಜ್ಞಾನಿಗಳೆಂದರೆ ಯಾವುದೋ ಜ್ಞಾನವಿದ್ದವರನ್ನ ಜ್ಞಾನಿಗಳೆಂದು ತಿಳಿಯಬಾರದು. ''ಸತ್-ಕವಿಜನರ' ಸನ್ನಾಮಕ ಹರಿಯ ಜ್ಞಾನವಿದ್ದವರೇ ಕವಿಗಳು. ಜ್ಞಾನಿಗಳು ಅವರಲ್ಲಿಗೆ ಹೋಗಬೇಕು. ನಾನು ಹೋದ ಸಭೆಗೆ ಅವರು ಬರದಿದ್ದರೇ ಅವರ ಜೀವನದಲ್ಲಿ ಸಂಚರಿಸುತ್ತಿರಬೇಕು. ಮನೆಗೆ ಹೋಗಿಯಾದರೂ ಜ್ಞಾನ ಪಡೆಯಬೇಕು ಎನ್ನುವದು ವಾಮನಪುರಾಣ.

ಸಜ್ಜನಾನಾಂ ಗೃಹಂಗತ್ವಾ ಸತ್ಕಥಾಃ ಶೃಣುಮಾತ್ ಹರೇಃ

ನನಗೆ ಸಮಯವಿಲ್ಲ, ಬೆಳಿಗ್ಗೆಯಿಂದ ರಾತ್ರಿಯವರೆಗೆ ದಿನಚರಿ ಪೂರ್ಣವಾಗಿದೆ. ಕಾರ್ಯಗಳು ಬಹಳಿವೆ ಎಂದು ತಪ್ಪಿಸಬೇಡ. ಎಲ್ಲವನ್ನು ಸಂಕೋಚ ಮಾಡಿ ಕಥಾಶ್ರವಣ ಮಾಡು ಎನ್ನುವದು ವಾಯುಪುರಾಣ. ಸಂಕುಚ್ಯ ಸರ್ವಕರ್ಮಾಣಿ ಶ್ರವಣಂಚಾಖ್ಯಸೇತ್ ಸುಧೀಃ

ಹೀಗೆ ಮಾಡದ ವಿನ ಬದುಕು ಬರಡು ಎನ್ನುವ ಗರುಡ ತೇಷಾಂ ಜನ್ಮವ್ಯರ್ಥಮಾಹುಃ

ಶ್ರಮವಾಗುವದೆಂಬ ವಿಚಾರವಿಲ್ಲ. ಧನ ವ್ಯಯದ ಚಿಂತೆಯಿಲ್ಲ. ದೇಹಶಕ್ತಿ ಕರಗುವುದಿಲ್ಲ. ಯಾರಿಗೂ ಹೆದರಬೇಕಾಗಿಲ್ಲ. ಅಷ್ಟು ಸರಳ ಸಾಧನೆ ನಾಮಸ್ಮರಣೆ ಅಷ್ಟೇ ಮಹತ್ವದ್ದು ಯಾವನ ನಾಲಿಗೆಯಲ್ಲುಂಟೋ ಅವನ ಭಾಗ್ಯವೇ ಭಾಗ್ಯ ಎನ್ನುವದು ಆದಿತ್ಯ ಪುರಾಣ....... ನಿತ್ಯ, ನಿಷ್ಕಲ್ಮಷನಾಗಿ, ಶುದ್ಧ ಭಕ್ತಿಯಿಂದ, ಸದಾ ಸ್ಮರಣೆಯೊಂದೇ ಮಾಡಿದರೂ ಸಾಕು. ಯಾತ್ರೆಯ ಯಜ್ಞದ, ವ್ರತಾಚರಣೆಯ, ದಾನಾದಿಗಳ ಸಕಲ ಫಲವು ಬಂದೊದಗುವವು. ಮಾತ್ರವಲ್ಲ, ನಿನ್ನ ನಾಮಸ್ಮರಣೆಯ 1/16 ನೇ ಅಂಶವು ಆಗುವುದಿಲ್ಲ.

ತಂದೆ ತಾಯಿ ಒತ್ತಾಯಕ್ಕೋ, ಹೆಂಡತಿಯ ಮೋಹಕ್ಕೊ ಪರಿಸರದವರ ಸಮಾಧಾನಕ್ಕೊ, ಪ್ರತಿಷ್ಠೆಗೋ ಎಂದು ಒಂದು ಬಾರಿ ಜ್ಞಾನಿಗಳಿಂದ ಕೇಳಿದರೆ ಸಾಲದೆನ್ನುವರು ದಾಸರು. ''ಪ್ರತಿ-ದಿವಸದಿ'' ಕೇಳಬೇಕು. ನನ್ನ ದಿನಚರಿಯಲ್ಲಿ ಪ್ರತಿನಿತ್ಯ ಅದಕ್ಕಾಗಿ ಸಮಯವನ್ನು ನಿಗದಿ ಪಡಿಸಿರಬೇಕು.

ಜ್ಞಾನಿಗಳ ಮನೆಗೆ ಹೋದಾಗ ವ್ಯರ್ಥವಾಗಿ ಹರಟೆ ಹೊಡೆದು, ದೊಡ್ಡ ಮನುಷ್ಯರಂತೆ ಯೋಗಕ್ಷೇಮವನ್ನು ವಿಚಾರಿಸಿ, ಉತ್ತಮ ಆತಿಥ್ಯವನ್ನು ಸ್ವೀಕರಿಸಿ ಬಂದರೆ ಏನೂ ಪ್ರಯೋಜನವಿಲ್ಲ. ಅಲ್ಲಿ ಹೋಗಿ ಈ ತರಹ ನಡೆದುಕೊಂಡು ಬಂದರೆ ನನಗಂತೂ ಸಾಧನೆಯಾಗಲ್ಲಿ. ಅವರ ಪಾಡಿಗೆ ಅವರು ಸಾಧನೆ ಮಾಡುತ್ತಿದ್ದಾಗ ಮನೆಗೆ ಹೋಗಿ ಸಂಸಾರದ, ಜಗತ್ತಿನ ವಿಚಾರಗಳನ್ನು ಮೆಲುಕುಹಾಕಿ ಬಂದರೆ ಅವರಿಗೂ ಸಾಧನೆಯಾಗುವುದಿಲ್ಲ. ಪುಣ್ಯ ಪಡೆಯಲು ಹೋಗಿ ಅವರ ಸಾಧನೆಗೆ ವಿಘ್ನ ತಂದದ್ದಕ್ಕೆ ಪಾಪವನ್ನು ತಂದಂತಾಗುವುದು. ಆದ್ದರಿಂದ ಅಲ್ಲಿ ಹೋದಾಗ ''ಸುಕಥಾ ಶ್ರವಣ ಮಾಡು'' ಹೀಗೇ ಕ್ಷಣಗಳನ್ನು ಕಳೆದರೆ ''ಪ್ರವರ'' ನಾಗುವಿ.

ಭಗವಂತನ, ಭಗವದ್ಭಕ್ತರ ಕಥೆಗಳನ್ನು ಕೇಳಿ ತಿಳಿ. ನೀನು ಹೋಗಿದ್ದು ಶ್ರವಣಕ್ಕಾಗಿ ಎನ್ನುವ ಎಚ್ಚರವಿರಲಿ. ಅವರಿಗೇ ಉಪದೇಶಿಸುವ ಸಾಹಸ ಮಾಡಬೇಡ. ಹೀಗೆ ನಿತ್ಯ ಶ್ರವಣ ಮಾಡುತ್ತಿದ್ದರೆ ಆಗ ನೀನು ಪ್ರವರನಾಗುವಿ. ಎಲ್ಲ ಪುಣ್ಯಕರ್ಮಗಳ ಎಲ್ಲ ಪುಣ್ಯವನ್ನು ಪಡೆಯುವಿ. ಸಾರ್ಥಕ ಬದುಕು ನಿನ್ನದಾಗಿ ದಾಸರಿಂದ ''ಫಲವಿದು ಬಾಳ್ದುದಕೆ'' ಎಂಬ ಪ್ರಶಂಸೆಗೆ ಒಳಪಡುವಿ.

ಕಾರಣಕಾರ್ಯಾಂತರ್ಗತ ಅಂಶವ
ತಾರಾವೇಶ ವಿಹಿತ ಸಹಜ
ಪ್ರೇರಕ ಪ್ರೇರ್ಯಾಹ್ವಯ ಸರ್ವತ್ರ ವಿ-
ಕಾರವಿಲ್ಲದಲೆ ತೋರುವನೆಂಬುದೇ **॥ 25 ॥**

ಪರಮಾತ್ಮನ ಅಭಿನ್ನವಾದ ಅನಂತ ಅವತಾರಗಳತ್ತ ವಿವಿಧ ವಿಭಾಗದಲ್ಲಿ ವಿಭಾಗಿಸುವರು. ಹರಿಕಥಾಮೃತಸಾರದ ವಿಭೂತಿಸಂಧಿಯ ಆದ್ಯ ಪದ್ಯದಲ್ಲಿ

''ನೀತ ಸಾಧಾರಣ ವಿಶೇಷ ಸ
ಜಾತಿ ನೈಜಾಹಿತವು ಸಹಜ ವಿಜಾತಿ
ಖಂಡಾಖಂಡ ಬಗೆಗಳನರಿತು ಬುಧರಿಂದ''

ಎಂದು ದಶವಿಧ ವಿಭೂತಿ ರೂಪಗಳನ್ನು ತಿಳಿಸುವರು. ಅದರ ಸಂಗ್ರಾಹಕವೇ ಈ ನುಡಿ. ಭಗವಂತ ಸಮಸ್ತ ಬ್ರಹ್ಮಾಂಡಕ್ಕೆ ಮೂಲಕಾರಣವಾದ ಪ್ರಕೃತಿಯಲ್ಲೂ ಇರುವ. ಜಗತ್ತಿನಲ್ಲಿಯ ಅನಂತ ಅನಿತ್ಯ ಪದಾರ್ಥಗಳಿಗೆ ಕಾರಣಗಳುಂಟು. ಅನಿತ್ಯವಾದ, ಭಿನ್ನವಾದ ಪದಾರ್ಥಗಳಲ್ಲಿ ನಿತ್ಯ ಹರಿಯ ಅಭಿನ್ನ ರೂಪಗಳುಂಟು. ಕಾರಣದಲ್ಲಿದ್ದು ಜನಕನಾಗುವ ಕಾರ್ಯದಲ್ಲಿದ್ದು ಜನ್ಯನಾಗುವ.

ಭಾಗವತ ಎನ್ನುವುದು

ಏವಂ ಕಾರಣ ಕಾರ್ಯಾಖ್ಯಂ ಸಮಸ್ತಂ ಹರಿಮೇವ ತು

ಮತ್ತೊಂದೆಡೆ ಸದೃಷ್ಟಾಂತವಾಗಿ ತಿಳಿಸುವುದು

ಕಾರ್ಯಕಾರಣಸ್ಯೈಕದರ್ಶನಂ ಪಟತಂತುವತ್

ಅದ್ವೈತತ್ರಯವನ್ನು ತಿಳಿಸುವಾಗ ಭಾವದ್ವೈತದ ಪ್ರಸಂಗದಲ್ಲಿ ಇದನ್ನು ವಿವರಿಸುವರು.

ಅಂತರ್ಗತವಾದ ರೂಪಗಳು ಹಲವು. ಗೀತಾ ತಾತ್ಪರ್ಯದ ವಾಕ್ಯ

''ನಾನಾ ಪ್ರಾಣ್ಯಾದಿ ಸಂಸ್ಥಶ್ಚ ವಿಭೂತಿರಿತಿ ಶಬ್ದಿತಃ''

ಎಲ್ಲ ಪ್ರಾಣಿಗಳಲ್ಲಿರುವ, ಕೆಲವು ಅಂಶರೂಪಗಳು ವಾಸುದೇವಾದಿ ರೂಪಗಳು ಸಾಕ್ಷಾದಂಶ ಅಥವಾ ಅಭಿನ್ನಾಂಶಗಳೆನ್ನುವರು. ಬ್ರಹ್ಮಾದಿಗಳಲ್ಲಿಯ ರೂಪಗಳು ಭಿನ್ನಾಂಶಗಳು. ರಾಮ–ಕೃಷ್ಣಾದಿ ರೂಪಗಳು ಅವತಾರ ರೂಪಗಳು. ಬಲರಾಮಾದಿಗಳಲ್ಲಿರುವ ಶುಕ್ಲಕೇಶಾದಿ ರೂಪಗಳು ಆವೇಶ ರೂಪಗಳು. ದೇವತೆಗಳಲ್ಲಿ

ವಿಹಿತ ರೂಪಗಳುಂಟು. ಸಾಲಿಗ್ರಾಮಾದಿಗಳಲ್ಲಿ ಸಹಜರೂಪಗಳುಂಟು. ಅಧಿಕಾರಿಗೆಳಲ್ಲಿರುವ. ರೂಪಪ್ರೇರಕ, ಭೃತ್ಯಾದಿಗಳಲ್ಲಿ ಪ್ರೇರ್ಯರೂಪವುಂಟು. ಹೀಗೆ ಅನೇಕ ಸ್ಥಳದಲ್ಲಿದ್ದು ಅನೇಕ ನಾಮಗಳಿಂದ ಸರ್ವತ್ರ ತುಂಬಿರುವನು. ಆದರೆ ಒಂದು ವಿಶೇಷ ಎಲ್ಲೇ ಇದ್ದರೂ ಅಲ್ಲಿಯ ದೋಷ ಇವನಿಗಿಲ್ಲ. ವಿಕಾರ ವಸ್ತುಗಳಲ್ಲಿದ್ದರೂ ಇವನು ನಿರ್ವಿಕಾರ. ಗುಣಪೂರ್ಣ. ಆಚಾರ್ಯರು ಭಾಷ್ಯದಲ್ಲಿ ತಿಳಿಸುವರು.

ವಿಕಾರಹೇತುಕಂ ಸರ್ವಂ ಕುರುತೇ ನಿರ್ವಿಕಾರವಾನ್

ಪರಮಾತ್ಮನನ್ನು ಈ ಬಗೆಯಲ್ಲಿ ತಿಳಿಯುವುದೇ ಫಲವಿದ್ದು ಬಾಳ್ದುದಕೆ.

ಪ್ರತಿದಿವಸ ಶ್ರುತಿ ಸ್ಮೃತಿಗಳಿಂದ
ಸಂಸ್ತುತಿಸುತ ಲಕ್ಷ್ಮೀಪತಿ ಗುಣವ
ಕೃತಿಪತಿಸೃಷ್ಟಿಸ್ಥಿತಿಲಯ ಕಾರಣ
ಇತರ ದೇವತೆಗಳಿಗಲ್ಲೆಂಬುದೆ ॥ 26 ॥

ಹಿಂದಿನ ನುಡಿಯಲ್ಲಿ ಪವನಮತಾನುಗನಾಗಿ ಸಜ್ಜನರ ಮನೆಗಳಿಗೆ ಪ್ರತಿದಿನವೂ ಹೋಗಿ ಶ್ರವಣವನ್ನು ಮಾಡಬೇಕೆಂದು ತಿಳಿಸಿದ ಜಗನ್ನಾಥದಾಸಾರ್ಯರು ಏನನ್ನು ಶ್ರವಣ ಮಾಡಬೇಕು ಎಂಬುದನ್ನು ಈ ನುಡಿಯಲ್ಲಿ ತಿಳಿಸುತ್ತಿದ್ದಾರೆ.

ಹಿಂದೆ ಪ್ರತೀದಿವಸ ಹೋಗು. ಶ್ರವಣ ಮಾಡು ಎಂದಾಗ ಪ್ರತಿದಿವಸ ಹೋಗುತ್ತೇನೆ. ಎಂದೋ ಒಂದು ದಿನ ಭೋಜನಾದಿ ವಿಶೇಷ ಸಂದರ್ಭಗಳಿದ್ದಾಗ ಶ್ರವಣ ಮಾಡುತ್ತೇನೆ. ಎಂದರೆ ದಾಸರೆನ್ನುವರು ಪ್ರತಿದಿವಸ ಹೋಗಿ ಪ್ರತಿದಿವಸವೂ ಸಂಸ್ತುತಿಸು.

ಅಥವಾ ಪ್ರತಿದಿನವೂ ನಾನು ಹೋಗಲೂ ಸಿದ್ಧ. ಶ್ರವಣ ಮಾಡಲೂ ಸಿದ್ಧ. ಆದರೆ ಗುರುಗಳೇ ಪ್ರತಿದಿನ ಇರಲಾರರು. ಗುರುಗಳಿದ್ದಾಗ ಶ್ರವಣಾದಿಗಳನ್ನು ಮಾಡುವೆ. ಇಲ್ಲದಿದ್ದಾಗ ತಿಂದುಂಡು ಉಂಡಾಡಿ ಗುಂಡನಾಗಿ ತಿರುಗಾಡುವೆ ಎಂದರೆ ದಾಸರೆನ್ನುವರು "ಪ್ರತಿದಿವಸ ಸಂಸ್ತುತಿಸುತ" ಇರು. ಶ್ರವಣಕ್ಕೆ ಗುರುಗಳು ಬೇಕು. ಅದನ್ನು ಗುರುಗಳು ಸಿಕ್ಕಾಗ ಮಾಡು. ಶ್ರವಣ ಮಾಡಿದ್ದನ್ನು ಸ್ತವನ ಮಾಡಲು ಗುರುಗಳ ಅವಶ್ಯಕತೆಯಿಲ್ಲ. ಆದ್ದರಿಂದ ಪ್ರತಿದಿವಸ ಸಂಸ್ತುತಿಸು.

ಇಲ್ಲಿ ಕೇವಲ ಸ್ತುತಿಸುತ ಎನ್ನದೆ ಸಂಸ್ತುತಿಸುತ ಎನ್ನುವರು. ಅದರ ಅಭಿಪ್ರಾಯ ಹಣಕ್ಕಾಗಿ, ಕೀರ್ತಿಗಾಗಿ ಯಾವುದೋ ಅಭೀಷ್ಟಗಾಗಿ ಮನಸ್ಸಿಗೆ ಬೇಡಾಗಿದ್ದರೂ ಕ್ಷುಲ್ಲಕನಾದ ನರನನ್ನು ಸ್ತುತಿಸುತ್ತೇವೆ. ಹಾಗೇ ಹರಿಯ ಸ್ತೋತ್ರವನ್ನು ಮಾಡುವುದು ಬೇಡ.

'ಅಕಾಮಃ ಸರ್ವಕಾಮೋವಾ ಮೋಕ್ಷಕಾಮ ಉದಾರಧೀಃ'

ಏನೂ ಬೇಡವಾದರೂ ಹರಿಯನ್ನು ಸ್ತುತಿಸು. ಎಲ್ಲವೂ ಬೇಕಾದರೂ ಹರಿಯನ್ನು ಸ್ತುತಿಸು. ಎಲ್ಲವನ್ನು ಮೀರಿದ ಮೋಕ್ಷಕ್ಕಾದರೂ ಹರಿಯನ್ನೇ ಸ್ತುತಿಸು. ಎನ್ನುವುದು ಶಾಸ್ತ್ರ

ಉಳಿದವರನ್ನು ಯಾವುದೋ ಒಂದು ಉದ್ದೇಶಕ್ಕಾಗಿ ಮಾತ್ರ ಸ್ತುತಿಸುತ್ತೇವೆ. ಆದ್ದರಿಂದ ಎಷ್ಟು ಬೇಕೋ ಅಷ್ಟು ಮಾತ್ರ ಸ್ತುತಿಸಿದರೆ ಸಾಕು. ಹರಿ ಮಾಡುವ ಉಪಕಾರಕ್ಕೆ ಇತಿಯಿಲ್ಲ. ಯಾವ ದೇಶದ ಕಾಲದ ವಸ್ತುವಿನ ಮಿತಿಯಿಲ್ಲ. ಅನಂತ ಕಾಲದಿಂದ ಅನಂತಕಾಲದವರೆಗೆ ಅನಂತ ಉಪಕಾರಮಾಡುವ ಅನಂತನನ್ನು ಸಂ-ಸ್ತುತಿಸೋಣ. ಸರ್ವಕತೃತ್ವ, ಸರ್ವಕಾರಯಿತೃತ್ವ, ಸರ್ವಾಶ್ರಯತ್ವಾದ್ಯನುಸಂಧಾನ ಪೂರ್ವಕವಾಗಿ ಸ್ತುತಿಸಬೇಕು.

ದೇವರನ್ನು ಸ್ತುತಿಸುವಾಗ ನನ್ನ ಶಬ್ದಗಳಿಗಿಂತ ನನ್ನ ಹಿರಿಯರ ಶಬ್ದ ಬಳಸಿದರೆ ದೇವಗೆ ಹೆಚ್ಚು ಪ್ರೀತಿ. ಗೋಪಾಲದಾಸರು ಇದೇ ಜಗನ್ನಾಥದಾಸರಿಗಾಗಿ ದೇವರಲ್ಲಿ ಪ್ರಾರ್ಥಿಸುವಾಗ ''ಎನ್ನ ಮಾತಲ್ಲವಿದು. ಎನ್ನ ಹಿರಿಯರ ಮಾತು'' ಎಂದು ಹೇಳುವರು.

ಭಗವಂತ ಸರ್ವಜ್ಞ ಸರ್ವಭಾಷೆಯ ಬಲ್ಲವನಾದರೂ ದೇವನದೇ ಆದ ಎಲ್ಲ ವೇದ ಪುರಾಣಗಳು ರಚನೆಗೊಂಡ ದೇವ(ನಾಗರಿ) ಭಾಷೆ. ದೇವನಿಗೆ ಅತೀ ಪ್ರೀತಿಯಾದ ಭಾಷೆ. ಆ ಭಾಷೆಯಲ್ಲಿ ನಮ್ಮ ಪೂರ್ವಜರು ಶ್ರದ್ಧಾ-ಭಕ್ತಿಗಳಿಂದ ಮಾಡಿದ ಸ್ತೋತ್ರಗಳಿಂದ ಸ್ತುತಿಸಿದರೆ, ಸಂ-ಸ್ತುತಿಯಾಗುವುದು.

ಬರೀ ಶಬ್ದ ಉಚ್ಚರಿಸಿದರೆ ಸಾಲದು. ಅದರ ಹಿಂದೆ ನಿಜವಾದ ಭಕ್ತಿ - ವಿರಕ್ತಿಗಳು ಬೇಕು. ಅವುಗಳಿಂದ ನುಡಿಯಬೇಕು. ನಮ್ಮ ಪೂರ್ವಜರು ನಮಗಾಗಿ ಅನೇಕ ಸ್ಮೃತಿಗಳನ್ನು, ಸ್ತೋತ್ರಗಳನ್ನು, ಪದ್ಯಗಳನ್ನು ರಚಿಸಿ ದಯೆ ತೋರಿದ್ದಾರೆ. ಆ ದಾರಿಯಲ್ಲಿ ನಡೆದರೆ ದೇವನಿಗೆ ಪ್ರೀತಿ.

ಹಿರಿಯರ ಸ್ಮೃತಿಯಲ್ಲಿ ಜನಿಸಿದ ಸ್ಮೃತಿಗಳು ನಮ್ಮ ಸ್ಮೃತಿಗೆ ಬಂದರೆ ನಮಗೆ ದೇವರ ಸ್ಮೃತಿ ಬರುವುದು. ದೇವರ ಸ್ಮೃತಿಯಲ್ಲಿ ನಾವು ಬರುವೆವು. ಆ ಸಂಸ್ಮೃತಿಯಿಂದ ಸಂಸ್ಮೃತಿ (ಸಂಸಾರ) ಸರಿಯುವುದು. ಸ್ಮೃತಿಗಿಂತ ಮೇಲಿರುವುದು ಶ್ರುತಿಗಳು. ಅವುಗಳಿಂದ ದೇವರ ಬಣ್ಣನೆಯಾದರೆ ಇನ್ನೂ ಹೆಚ್ಚು ಬಲವತ್ತರವಾದದ್ದು. ಏಕೆಂದರೆ ಸ್ಮೃತಿಯನ್ನು ರಚಿಸಿದ ಸ್ಮೃತಿಕಾರರು ನಮಗೆಲ್ಲ ಪೂಜ್ಯರು, ಹಿರಿಯರು, ಜ್ಞಾನಿಗಳು, ಸುತ್ಯರಾದರೂ ಅವರಿಗೆ ಪ್ರಕೃತಿಯ ಬಂಧವಿದೆ. ಅಜ್ಞಾನ ತರಿಸುವ ಸಂಸಾರವಿದೆ. ಕಲಿಪ್ರವೇಶದ ಸಂಭವವಿದೆ. ಬಹುಶಃ ಶುದ್ಧ ಮಾತುಗಳೇ ಹೊರಬಂದರೂ ಯಾವಾಗಲೋ ಒಮ್ಮೆ ಅಶುದ್ಧ ಶಬ್ದಗಳು

ಬರಬಹುದು. ಯಾರೂ ರಚನೆ ಮಾಡದ, ಯಾರ ಕೈಗಂಟುಯಿಲ್ಲದ ವೇದದಲ್ಲಿ ಯಾವ ದೋಷ ಲೇಷದ ಸಂಶಯವೂ ಇಲ್ಲ. ಅದಕ್ಕಾಗಿ ಶ್ರುತಿ ವಾಕ್ಯಗಳಿಂದ ಸ್ತುತಿಸುವುದು ಪರಮೋತ್ತಮ.

ಅದಕ್ಕಿಂತ ಮುಖ್ಯವಾಗಿ ವೇದಾಭಿಮಾನಿಯಾದವಳು ನಮ್ಮ ತಾಯಿ ಮಹಾಲಕ್ಷ್ಮೀ. ಭಗವದ್ಭಕ್ತರಲ್ಲಿ ಪ್ರಪ್ರಥಮ ಸ್ಥಾನ ಇವಳಿಗೆ. ಭಗವಂತನ ಅತೀ ಹೆಚ್ಚಿನ ಕರುಣೆಯಿರುವುದು ಇವಳಲ್ಲೇ. ಯಾವಾಗಲೂ ಭಗವಂತನೊಟ್ಟಿಗೇ ಇರುವವಳು ಇವಳು. ಅವಳು ನುಡಿದ ನುಡಿ ಹರಿಗೆ ಅತಿ ಪ್ರಿಯ. ಹರಿಪ್ರಿಯಾಳಿಗೆ ಪ್ರಿಯನಾದ ಹರಿಗೆ ಪ್ರಿಯನಾಗಬೇಕಾದರೆ ನಾವೂ ಅದೇ ಮಾತಿನಿಂದ ಸ್ತುತಿಸಬೇಕು ಎಂಬುದನ್ನು ಸೂಚಿಸಲು ಜಗನ್ನಾಥದಾಸರು ''ಲಕ್ಷ್ಮೀಪತಿಗುಣವ'' ಎಂದು ಲಕ್ಷ್ಮೀಪದವನ್ನೇ ಬಳಸಿದ್ದಾರೆ.

ಅದಕ್ಕಾಗಿ ಪುರಾಣದ ಮಾತು ತಿಳಿಸುವುದು.

'ತಸ್ಮಾತ್ ನಾಮಾಮೃತಂ ಸೇವ್ಯಂ ನಿತ್ಯಂ ನಿವೃತಿಮಾಪ್ನುಯಾತ್'

ನಿತ್ಯದಲ್ಲಿ ನಾಮಾಮೃತವನ್ನು ಸವಿಯುತ್ತಾ ಭಗವಂತನನ್ನು ಪಾಡುತ್ತಿದ್ದರೆ ಮುಕುತಿ ಹೊಂದುವುದರಲ್ಲಿ ಸಂದೇಹವಿಲ್ಲ. ಈ ಸ್ಮರಣೆ, ಸ್ತವನ ಹಗಲು ರಾತ್ರಿಯೂ ಇರಬೇಕು. ಅರ್ಥಾತ್ ಪ್ರತಿದಿವಸವಿರಬೇಕೆನ್ನುವುದು ವಾಯುಪುರಾಣ.

ಯೇ ಸ್ಮರಂತಿ ದಿವಾರಾತ್ರಂ ತೇ ಗಚ್ಛಂತಿ ಹರೇಃ ಪದಮ್'

ಹಿಂದಿನ ನುಡಿಯಲ್ಲಿ ಜ್ಞಾನಿಗಳ ಮನೆಗೆ ಹೋಗೆಂದರು ದಾಸರು. ಈ ನುಡಿಯಲ್ಲಿ ಶ್ರುತಿ – ಸ್ಮೃತಿಗಳಿಂದ ಭಗವಂತನ ಪಾಡೆಂದರು. ಇದರ ಆಂತರ್ಯ ಶ್ರುತಿ ಸ್ಮೃತಿಗಳಿಂದ ಪಾಡಬೇಕಾದರೆ ಅದರ ಹಿಂದೆ ಗುರುಗಳ ಸಂಪರ್ಕ, ಗುರೂಪದೇಶ ಅತ್ಯವಶ್ಯಕ ಎಂದಾಯಿತು. ಗುರುಗಳ ಮುಖಾಂತರ ವೇದಾಧ್ಯಯನ ಮಾಡಿಸಿಕೊಂಡು ಅವರಿಂದಲೇ ಯೋಗ್ಯ ಅರ್ಥವನ್ನು ತಿಳಿದು ಸ್ತುತಿಸಬೇಕು. ನಾವೇ ನೇರವಾಗಿ ತಿಳಿಯಲು ಹೊರಟರೆ ತಪ್ಪುಗಳೇ ಹೆಚ್ಚುವವು. ಪುಣ್ಯಕ್ಕಾಗಿ, ದೇವರ ಪ್ರೀತಿಗಾಗಿ ಸ್ತುತಿಸಲು ಹೊರಟ ನಾವು ಗುರುಗಳನ್ನು ಉದಾಸೀನ ಮಾಡಿದರೆ ಮಾರ್ಗದರ್ಶನ ಸಿಗದೆ ಪುಣ್ಯದ ಸ್ಥಾನ ಪಾಪಕ್ಕೆ ಹೋಗಿ ಅನುಗ್ರಹದ ಬದಲು ಅವಗ್ರಹವೇ ಆಗುವುದು. ಆದ್ದರಿಂದ ಗುರೂಪದೇಶದಿಂದಲೇ ದೇವನಲ್ಲಿ ಹೋಗಬೇಕು.

ಆ ವೇದವನ್ನು ತಿಳಿಯುವಾಗ ಇತಿಹಾಸ – ಪುರಾಣಗ್ರಂಥಗಳಿಂದ ತಿಳಿಯ ಬೇಕೆನ್ನುವದು ಒಂದು ಪ್ರಮಾಣ ವಾಕ್ಯ.

'ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬೃಂಹ ಯೇತ್'.

ಮನುಷ್ಯನನ್ನು ಸಂತೋಷಪಡಿಸಬೇಕಾದರೆ ಇದ್ದ ಗುಣಗಳಿಗಿಂತ ಇಲ್ಲದ ಗುಣಗಳನ್ನೇ ಹೆಚ್ಚು ಹೊಗಳಬೇಕು. ಅಥವಾ ಹಣವನ್ನು ಸುರಿಯಬೇಕು. ಬಣ್ಣದ ಮಾತಿಗೆ, ತುಂಬಿದ ಧನಕ್ಕೆ ಸೋಲದ, ಉಬ್ಬದ ವ್ಯಕ್ತಿ ಇಂದು ಯಾರಿಲ್ಲ. ಆದರೆ ದೇವ ಹಾಗಲ್ಲ. ಅವನು ತನ್ನ ಗುಣದಿಂದಲೇ ತುಂಬಿ ಉಬ್ಬಿದ್ದಾನೆ. ಸಂಪೂರ್ಣ ಐಶ್ವರ್ಯದ ಅಭಿಮಾನಿ ಲಕುಮಿ ಇವನಿಗೆ ದಾಸಾನುದಾಸಿ. ಅವನು ಇನ್ನಾರಿಂದಲೂ, ಇನ್ನಾವುದರಿಂದಲೂ ಉಬ್ಬಲು ಅವಕಾಶವಿಲ್ಲ. ಗುಣಪೂರ್ಣನಾದ ಪರಬೊಮ್ಮನವನು.

ಸಕಲ ಸಂಪತ್ತಿಗೆ ಶಬ್ದರಾಶಿಗೆ, ಮುಖ್ಯಾಭಿಮಾನಿಯಾದ ಲಕುಮಿಗೇ ಇವನ ವಶದ ವಿಧಾನವರಿಯದಿದ್ದಾಗ ಬಡ ಬಡಿಸುವ,ಬಡವನಾದ ನನಗೆಲ್ಲಿ ನಿಲುಕಿಯಾನು. ಆ ದೇವ ಸಿಗಲು ಒಂದೇ ಒಂದು ದಾರಿ. ಅದೇ ಭಕ್ತಿ. ಅದರಿಂದ ಗೆಲ್ಲಬೇಕು. ಪರಮಾತ್ಮನನ್ನು ಸ್ತುತಿಸಲು ವಿಷಯವನ್ನು ತಿಳಿಸುವರು. ''ಕೃತಿಪತಿ-ಸೃಷ್ಟಿ ಸ್ಥಿತಿಲಯಕಾರಣ''.......

ಕೃತಿ ಎಂಬ ಲಕ್ಷ್ಮೀ ರೂಪದ ಪತಿಯಾದ ಪ್ರದ್ಯುಮ್ನ ಮೊದಲಾದವರು ಸೃಷ್ಟಿಗೆ ಕಾರಣರು. ಅಂದರೆ ಪರಮಾತ್ಮ ವಾಸುದೇವ ರೂಪ ದಿಂದ ಚತುರ್ಮುಖ ಬ್ರಹ್ಮನನ್ನು ಸೃಷ್ಟಿ ಮಾಡಿದ. ಸಂಕರ್ಷಣ ರೂಪದಿಂದ ಸೂತ್ರನಾಮಕ ವಾಯುದೇವರನ್ನು ಹುಟ್ಟಿಸಿದ. ಪ್ರದ್ಯುಮ್ನ ರೂಪದಿಂದ ಸರಸ್ವತಿ, ಭಾರತಿಯರ ಜನ್ಮಕ್ಕೆ ಕಾರಣನಾದ. ಹೀಗೆ ಒಂದೊಂದು ರೂಪದಿಂದ ಒಬ್ಬೊಬ್ಬರನ್ನು ಸೃಷ್ಟಿಸಿದ್ದಲ್ಲದೆ ಅರ್ಧನರ- ನಾರೀರೂಪದಿಂದ ಎಲ್ಲರಲ್ಲಿದ್ದು ಎಲ್ಲರ ಸೃಷ್ಟಿಗೆ ಕಾರಣನಾದ. ಆದ್ದರಿಂದಲೇ ಇವನು ಕೃತಿ ಪತಿ. ಕೃತಿ ಎಂದರೆ ಕಾರ್ಯಗಳು. ಹುಟ್ಟಿದ ವಸ್ತುಗಳು ಜಗತ್ತಿನಲ್ಲಿ ಯಾವುದೇ ಹುಟ್ಟಿದುದ ಕಾರ್ಯವಾದದ್ದು ಇರಲಿ ಆ ಎಲ್ಲ ಕೃತಿಗಳಿಗೆ ಪತಿಯಾದವನು ಕೃತಿ-ಪತಿ ಪ್ರದ್ಯುಮ್ನ.

ಮತ್ತೊಂದರ್ಥ ಕೃತಿ (ಲಕ್ಷ್ಮೀ)ಯೇ ಪ್ರಕೃತಿ. ಪ್ರಕೃತಿಯ ವಿಕೃತಿಯೇ ನಮ್ಮ ಸುಕೃತಿಯಾದ ವಿಶ್ವ. ಈ ಸಮಸ್ತ ಪ್ರಕೃತಿಯ ಪತಿಯೇ ಕೃತಿ-ಪತಿ.

ಇನ್ನೊಂದರ್ಥ ಕೃತಿ ಎಂದರೆ ಪ್ರಯತ್ನ. ಪ್ರಯತ್ನವಿಲ್ಲದೆ ನಮ್ಮಿಂದ ಏನೂ ಆಗದು. ಏನಾಗಿದೆಯೋ ಅದೆಲ್ಲ ನಮ್ಮ ಪ್ರಯತ್ನದಿಂದ ಅಂದರೆ ಕೃತಿಯಿಂದ. ಆ ಎಲ್ಲ ಕೃತಿಗೆ ಪತಿ ಕೃತಿ-ಪತಿ. ಹೀಗೆ ಭಗವಂತನ ಸೃಷ್ಟಿಯ ವೈಚಿತ್ರ್ಯವನ್ನು ತಿಳಿಯಬೇಕು.

ಕೆಲವರು ಸೃಷ್ಟಿಗೆ ಬ್ರಹ್ಮ, ಲಯಕ್ಕೆ ಶಿವ ಕಾರಣ ಎನ್ನುವರು. ಆದರೆ ದಾಸರೆನ್ನುವರು 'ಕೃತಿಪತಿ - ಸೃಷ್ಟಿ, ಸ್ಥಿತಿ, ಲಯಕಾರಣ'' ಕೇವಲ ಸ್ಥಿತಿಗಲ್ಲ ಸೃಷ್ಟಿಗೆ ಲಯಕ್ಕೂ ಹರಿಯೇ ಕಾರಣ. ಭಾಗವತವೂ ಇದನ್ನೇ ನುಡಿವುದು. ಜನಕ, ಪಾಲಕ, ನಾಶಕ ಎಲ್ಲವೂ ಹರಿಯೇ.

ಕೆಲವು ಪ್ರಮಾಣಗಳೇ ಬ್ರಹ್ಮ-ಶಿವರನ್ನು ಕಾರಣವೆನ್ನುವವು. ಅದರ ಅರ್ಥವನ್ನು ಈ ರೀತಿಯಾಗಿ ಆಚಾರ್ಯರು ತಿಳಿಸುತ್ತಾರೆ.

'ಬ್ರಹ್ಮಣಿ ಬ್ರಹ್ಮರೂಪೋಸೌ ಶಿವ ರೂಪೇ ಶಿವೇಸ್ಥಿತಃ'

ಬ್ರಹ್ಮನಲ್ಲಿ ಬ್ರಹ್ಮರೂಪದಿಂದಿದ್ದು ಸೃಷ್ಟಿ ಮಾಡುತ್ತಾನೆ. ಶಿವನಲ್ಲಿ ಶಿವರೂಪದಿಂದಿದ್ದು ಸಂಹಾರ ಮಾಡುತ್ತಾನೆ. ಈ ಶಕ್ತಿ ಇತರ ದೇವತೆಗಳಿಗಿಲ್ಲ. ಆದ್ದರಿಂದ ಹರಿಯೇ ಸರ್ವೋತ್ತಮ ಸರ್ವಶಕ್ತ, ಸರ್ವಕರ್ತಾ, ಸರ್ವಪಾಲಕ, ಸರ್ವಸಂಹಾರಕ, ಸರ್ವೋಪಕಾರಿ ಎಂದೆಲ್ಲ ಸ್ತುತಿಸಿದರೆ ಬಾಳು ಸಾರ್ಥಕ.

ಪನ್ನಗಾಚಲ ಸನ್ನಿವಾಸ ಪಾ
ವನ್ನಚರಿತ ಸದ್ಗುಣಭರಿತ
ಜನ್ಯಜನಕ ಲಾವಣ್ಯಾನೇಕ ಜ
ಗನ್ನಾಥ ವಿಠಲ ನಾ ನನ್ನವ(ವಿ)ನೆಂಬುದೇ **॥ 27 ॥**

ಜಗನ್ನಾಥದಾಸಾರ್ಯರು ಅಂತಿಮ ಸೋಪಾನವನ್ನು ಸೂಚಿಸುತ್ತಿದ್ದಾರೆ.

ಇದು ಸೋಪಾನವೂ ಹೌದು. ಸೌಧವೂ ಹೌದು. ಎಲ್ಲ ಮೆಟ್ಟಿಲುಗಳನ್ನು ಮೆಟ್ಟಿದ ಮೇಲೆ ನಾವೂ ಒಟ್ಟಾಗಿ ಮುಟ್ಟಬೇಕಾದ ಕಟ್ಟ ಕಡೆಯ ಕಟ್ಟಡವನ್ನು ಅಲ್ಲಿಯ ಪಟ್ಟವನ್ನು ಹತ್ತಬಲ್ಲೆವು. ಉಳಿದೆಲ್ಲೆಡೆ ದಾರಿ ಬೇರೆ. ದಾರಿ ದಾಟಿದಾಗ ಸಿಗುವ ಗುರಿ ಬೇರೆಯಾದರೆ ಇಲ್ಲಿ ವಿಚಿತ್ರ ಎರಡೂ ಒಂದೇ. ಹರಿಯೇ ದಾರಿ. ಅಂದರೆ ನಮ್ಮ ಗುರಿ ತಲುಪಲು ಸಾಧನ ಹರಿ. ಆ ಹರಿಯೇ ನಮ್ಮ ಗುರಿ. ಅವನನ್ನು ಸೇರುವುದೇ ಮುಕ್ತಿಯನ್ನು ಸೇರಿದಂತೆ.

ಅಂತಿಮ ಈ ಪದ್ಯದಲ್ಲಿ ವಿವಿಧ ವಿಶೇಷಣಗಳಿಂದ ಪರಮಾತ್ಮನನ್ನು ಸ್ತುತಿಸುತ್ತಿದ್ದಾರೆ. ಸಾಧನ, ಸಾಧ್ಯ ಎರಡೂ ಆದ ಹರಿ ಇಲ್ಲಿ ಸ್ತುತ್ಯನಾಗಿರುವ. ಆದ್ದರಿಂದ ಈ ಪದ್ಯ ಸೋಪಾನವೂ ಸರಿ. ಸೌಧವೂ ಸರಿ.

ಕಲಿಯುಗದ ಹೆದ್ದೈವ ಶ್ರೀನಿವಾಸ. ವೆಂಕಟಾಚಲ ನಿವಾಸ. ಇದಕ್ಕೆ ಮತ್ತೊಂದು ನಾಮ ಶೇಷಾಚಲನಿವಾಸ. ಅವನೇ ಇದರ ನಿಜವಾದ ತತ್ವ ಹಾಗೂ ಇದೆಲ್ಲವನ್ನು ಸಮರ್ಪಿಸಲು ಯೋಗ್ಯನಾದ ವ್ಯಕ್ತಿ. ಆದ್ದರಿಂದ ದಾಸರು ಮೊದಲ ಪದವನ್ನು ಈ ನುಡಿಯಲ್ಲಿ ''ಪನ್ನಗಾಚಲ-ಸನ್ನಿವಾಸ'' ಎಂದರು.

ಭವಿಷ್ಯೋತ್ತರ ಪುರಾಣದ ವೆಂಕಟೇಶ ಮಹಾತ್ಮೆಯಲ್ಲಿ ಭೃಗು ನಿರ್ಣಿಸಿದಂತೆ ಎಲ್ಲ ಕರ್ಮಗಳನ್ನು ಸರ್ವೋತ್ತಮನಾದ ವೆಂಕಟಾಚಲವಾಸ ಶ್ರೀನಿವಾಸನಿಗೆ ಸಮರ್ಪಿಸಬೇಕು.

ಹರಿಗೇ ಮೊದಲರ್ಪಿತ. ಹರಿಯೇ ಮುಖ್ಯ ತತ್ವ. ಅವನ ನಂತರ ಸ್ಥಾನ ಮುಕುಂದನ ಮಡದಿಯಾದ ಮೂರು ಲೋಕದ ಮಾತೆಯಾದ ಮಹಾಲಕುಮಿಯ ಸ್ಥಾನ.

ಅವಳನ್ನು ಇಲ್ಲಿ ಸ್ಮರಿಸುವರು "**ಪನ್ನಗಾಚಲ-ಸನ್ನಿವಾಸ**" ಎಂಬ ವಿಶೇಷಣದಿಂದ.

ರಮೆ ಉಳಿದೆಲ್ಲೆಡೆ ಚಂಚಲಾ ರಾಮನಿದ್ದಲ್ಲಿ ಮಾತ್ರ ಪೂರ್ಣ ಅಚಲ. ಆ ರಾಮ ಸದಾ ಪವಡಿಸಿದ್ದು ಈ ಶೇಷನ ಮೇಲೆ. ಆದ್ದರಿಂದ ಈ ಶೇಷ ಕೃತಿ ಅಚಲಾಗೆ, ಅಚಲಾ ನಿವಾಸಗೆ ಅರ್ಪಿತ ಎನ್ನುವುದಕ್ಕಾಗಿ "**ಶೇಷಾಚಲ ನಿವಾಸ**".

ಈ ಹೆಸರು ಬರಲು ಕಾರಣ ಶೇಷ-ವಾಯುವಿನಲ್ಲಿ ನಡೆದ ವಿವಾದದಿಂದ. ಅಲ್ಲಿ ನಿರ್ಣೀತವಾದದ್ದು ವಾಯುಜೀವೋತ್ತಮತ್ವ. ಅಂಥಹ ಜೀವೋತ್ತಮನಿಗೆ, ಸಕಲ ಕರ್ಮಗಳನ್ನು ಮಾಡಿಸಿ, ಸಮರ್ಪಿಸುವ ವಾಯುದೇವ ಶೇಷನಲ್ಲಿ ಅಚಲವಾಗಿ ನಿವಾಸ ಮಾಡಿದವ. ಆ ಶೇಷಾಚಲ ನಿವಾಸಗೆ ಸಮರ್ಪಿತ.

ಜೀವಾಭಿಮಾನಿ ಶೇಷ. ಈ ಶೇಷನೇ ಈ ಜೀವನಲ್ಲಿದ್ದು ರಚಿಸಿದ ಕೃತಿಯಿದು. ಅವನ ಅಚಲತೆಯಿಂದಾಗಿದ್ದು. ಹೀಗಾಗಿ ಅವನಲ್ಲಿ ಇದು ಸಮರ್ಪಿತ.

ಈ ಕೃತಿ ಪರಮ ಪ್ರಧಾನವಾಗಿ ಹರಿಗೆ ಸಮರ್ಪಿತವಾಗಬೇಕಾದರೆ ಹರಿಗುಣ ಗಣಿ ಎನ್ನವದು ಸಿದ್ಧವಾಗುವದು. ಗುಣದಲ್ಲಿ ಶ್ರೇಷ್ಠವಾದದ್ದು ಚಾರಿತ್ರ್ಯ. ಶೀಲ. ಇದು ಕಳೆದುಕೊಂಡರೆ ಎಲ್ಲವನ್ನು ಕಳೆದುಕೊಂಡಂತೆ. ಇದೊಂದು ಇದ್ದರೆ ಎಲ್ಲವೂ ಇದ್ದಂತೆ. ಆದ್ದರಿಂದ ದಾಸರು ಕರೆದರು "**ಪಾವನ ಚರಿತ**" ಎಂದು.

ಕೇವಲ ಚಾರಿತ್ರ್ಯ ಎಂಬ ಒಂದೇ ಗುಣವಲ್ಲ ಸಕಲ ಗುಣಗಳಿಂದ ಭರಿತನಾದವನಾದ್ದರಿಂದ "ಸದ್ಗುಣಭರಿತ"

ಶೇಶಾಚಲನಿವಾಸೀತು ಪೂತಕರ್ಮಾ ದಯಾನಿಧಿಃ

ಕೃತಿ ತಿಳಿಸುವ ಹಾಗೇ ಜಗತ್ತಿನ ಸೃಷ್ಟಿಕರ್ತ, ಹರಿಯೇ

ಯೋ ನಃ ಪಿತಾ ಜನಿತಾ........

ಭಗವಂತನೇ ಜನಕ ಮಾತ್ರವಲ್ಲ ಜನ್ಯನೂ ಅವನೇ.

ಅನೇಕ ಲಾವಣ್ಯದ ಸುಂದರ ಸ್ವರೂಪನಿವನು. ಸೌಂದರ್ಯಸಾರೈಕ ರಸಂ.......

ಈ ಎಲ್ಲ ವಿಶೇಷಣಗಳಿಂದ ಕೂಡಿದ ಜಗನ್ನಾಥವಿಠಲ ಅನನ್ಯಪ, ಯಾರನ್ನು

ಪಾಲಕರನ್ನಾಗಿ ಪಡೆಯದ ಸರ್ವತಂತ್ರ ಸ್ವತಂತ್ರ ಎಂದು ಸತತ ತಿಳಿಯಬೇಕು. ಅದೇ ಬಾಳಿನ ಫಲ.

ಅಥವಾ ''ಅನನ್ಯವ'' ಎಂಬ ಪಾಠದಂತೆ ನಾನು ನಿನ್ನವ, ಬೇರೆಯವನಲ್ಲ. ದಾಸರು ತಿಳಿಸುವಂತೆ ''ನಿನ್ನವ, ನಿನ್ನವ ಶ್ರೀನಿವಾಸ.....'' ಎನ್ನುತ್ತಾ ಈ ಅನುಸಂಧಾನದಲ್ಲೇ ನಡೆಯುತ್ತಾ ದೇವನಲ್ಲಿ ಬೇಡಬೇಕು. ತನ್ನವರಾದಾಗ ಸಣ್ಣ ಗುಣವೂ ದೊಡ್ಡದಾಗಿ ಕಂಡು ದೊಡ್ಡ ದೋಷವೂ ಸಣ್ಣದಾಗಿ ಕಾಣುವದು. ಅದೇ ಅನ್ಯವ ಎಂದಾದರೆ ವಿಪರೀತವಾಗಿ ಕಾಣುವದು. ನಮ್ಮ ಹೇಳಿಕೊಳ್ಳುವ ಉತ್ತಮ ಕಾರ್ಯ ಕಡಿಮೆ. ಹೇಳಲಾಗದ ಹೇಸಿಗೆಯ ಕೆಲಸ ಬಹಳವಾಗಿದೆ. ತಪ್ಪನ್ನು ಒಪ್ಪಿಕೊಳ್ಳಲು ನಮಗೆ ಅಭಿಮಾನ ಅಡ್ಡಿಯಾಗುವದು. ತಪ್ಪೊಪ್ಪಿಕೊಳ್ಳದೇ ನಮ್ಮಪ್ಪ ನಮ್ಮನ್ನೊಪ್ಪಲಾರ.

ಉಪಾಯದಿಂದ ತಪ್ಪನ್ನು ಒಪ್ಪಿಕೊಂಡು ಮಾನವನ್ನು ರಕ್ಷಿಸಲು ನಾ ನಿನ್ನವ, ಅನ್ಯವನಲ್ಲದ ''ಅನನ್ಯವ'' ಎನ್ನಬೇಕು. ಆಗ ಹರಿ ಬರುವ, ತೋರುವ, ಪೊರೆವ. ಬದುಕನ್ನು ಬಂಗಾರ ಮಾಡುವ. ಬಾಳಿ, ಗೆ ಫಲವನ್ನು ನೀಡುವ ಎಂಬುದು ಜಗನ್ನಾಥದಾಸಾರ್ಯರು ಜಗತ್ತಿಗೆ ನೀಡಿದ ಸಂದೇಶ, ಆದೇಶ. ಉಪದೇಶ.

ಶ್ರೀ ಕೃಷ್ಣಾರ್ಪಣಮಸ್ತು.

''ನಾಹಂ ಕರ್ತಾ ಹರಿಃ ಕರ್ತಾ''

ಬಾಯಿಮಾತು ನಿಂದೆ (ನಿನ್ನದೇ) ಬರುವ ಭಾಗ್ಯವೂ ನಿಂದೇ (ನಿನ್ನದೇ)



ಜಗನ್ನಾಥದಾಸರ ಈ ಪುಟ್ಟ ಕೃತಿ ಸಾಧಕನಿಗೆ ಸಾಧನೆಗಳನ್ನು ಸುಂದರಾವಾಗಿ ಬೋಧಿಸುತ್ತದೆ. ಕರ್ತವ್ಯ ವಿಮುಖರಿಗೆ ಕರ್ತವ್ಯಪ್ರಜ್ಞೆಯನ್ನು ಮೂಡಿಸುತ್ತದೆ. ಭಕ್ತಿ-ಶ್ರದ್ಧೆಗಳಿಂದ ಈ ಕೃತಿಯ ಶ್ರವಣ - ಪಠನಗಳನ್ನು ಮಾಡಿದಲ್ಲಿ ಮಾನವನ ಮನೋಭೂಮಿಯಲ್ಲಿ ಮಾಧವನ ಮಹಿಮೆಯ ಅರಿವಿನ ಬೀಜಾರೋಪವಾಗಿ ಪರಮಾತ್ಮ ಪ್ರೇಮದ ಚಿಗುರೊಡೆಯುತ್ತದೆ. ಇದರಲ್ಲಿ ಹೇಳಿದಂತೆ ಅನುಷ್ಠಾನ ಮಾಡಿದರೆ ಆ ಪ್ರೇಮವು ಹೆಮ್ಮರವಾಗುವುದರಲ್ಲಿ ಸಂದೇಹವಿಲ್ಲ.

₹ 50/-